ಸೋಮವಾರ, ಮೇ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 145 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಅಕಾಲಿಕ ಮಳೆ ಭವಿಷ್ಯದ ಎಚ್ಚರಿಕೆಯೇ?

ವಿಧಾನಸೌಧ ಮಾರ್ಗದರ್ಶಿ ಪ್ರವಾಸಕ್ಕೆ ಚಾಲನೆ 4

ಜಪಾನ್ ಹಿಂದಿಕ್ಕಿದ ಭಾರತ 8

ಪ್ರವಾಸೋದ್ಯಮ ಮರುಜೀವಕ್ಕೆ ಯತ್ನ

- ಪಹಲ್ಗಾಮ್ ದಾಳಿ ಬಳಿಕ ಮಂಕಾಗಿರುವ ಕಾಶ್ಮೀರ ಪ್ರವಾಸೋದ್ಯಮಕ್ಕೆ ಮರುಜೀವ ನೀಡಲು ಪ್ರವಾಸ ಪ್ಯಾಕೇಜ್‌ಗಳ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದ ಸರ್ಕಾರ
- ಆತಂಕಗೊಂಡಿದ್ದ ಪ್ರವಾಸಿಗರಿಗೆ ಭದ್ರತೆ ಭರವಸೆ ನೀಡಿ, ಮತ್ತೆ ಕಣಿವೆಯತ್ತ ಆಕರ್ಷಿಸಲು ಮೇ27ರಿಂದ 30ರವರೆಗೆ 'ಫೇಮ್ ಟೂರ್' ಕಾರ್ಯಕ್ರಮ ಆಯೋಜನೆ



ತುಂಗಾ ಜಲಾಶಯ ಭರ್ತಿ, ತುಂಬಿ ಹರಿದ ಭಾಗಮಂಡಲದ ತ್ರಿವೇಣಿ ಸಂಗಮ

ರಾಜ್ಯದೆಲ್ಲೆಡೆ ಹರ್ಷ ಮೂಡಿಸಿದ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ ಮಂಗಳೂರು: ಕರಾವಳಿಗೆ ಮುಂಗಾರು ಪ್ರವೇಶಿಸಿದ ಮರುದಿನವೇ ರಾಜ್ಯದಾದ್ಯಂತ ಜೋರು ಮಳೆ ಸುರಿದು ಹರುಷ ಮೂಡಿಸಿದೆ. ಕಳೆದ ಕೆಲ ದಿನಗಳಿಂದ ಮುಂಗಾರುಪೂರ್ವ ಮಳೆಯಿಂದಾಗಿ ಬಿಸಿಲ ಬೇಗೆ ಕಡಿಮೆಯಾಗಿತ್ತು. ಈಗ, ಆರಂಭದ ದಿನಗಳಲ್ಲಿಯೇ ಮುಂಗಾರು ಸಮೃದ್ಧವಾಗಿ ಸುರಿಯುವ ಸೂಚನೆ ನೀಡಿದ್ದು ನಾಡಿನ ಜನರಲ್ಲಿ ನಿರಾಳ ಭಾವ ಮೂಡಿಸಿದೆ.

ಶಿವಮೊಗ್ಗ ಜಿಲ್ಲೆಯ ಗಾಜನೂರಿನ ತುಂಗಾ ಜಲಾಶಯ ಮುಂಗಾರುಪೂರ್ವ ಮಳೆಗೇ ಭರ್ತಿಯಾಗಿದೆ. ಭಾನುವಾರ ಜಲಾಶಯದ 5 ಕ್ರಸ್ಟ್ ಗೇಟ್‌ಗಳ ಮೂಲಕ 2,500 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಯಿತು. ಕೊಡಗು ಜಿಲ್ಲೆಯ ಭಾಗಮಂಡಲದ ತ್ರಿವೇಣಿ ಸಂಗಮ ಇತ್ತೀಚಿನ ದಶಕಗಳಲ್ಲಿ ಇದೇ ಮೊದಲ ಬಾರಿಗೆ ಮೇ ತಿಂಗಳಲ್ಲಿಯೇ ತುಂಬಿ ಹರಿಯುತ್ತಿದೆ. ಪಿಂಡಪ್ರದಾನ ಸ್ಥಳ, ಪುಷ್ಪೋದ್ಯಾನ ಮುಳುಗಡೆ ಯಾಗಿದ್ದು, ನೀರು ರಸ್ತೆಗಳಿಗೆ ಬಂದಿದೆ. ಆದರೆ, ಮೇಲ್ಸೇತುವೆ ಇರುವುದರಿಂದ ದ್ವೀಪವಾಗುವಂತಹ ಪರಿಸ್ಥಿತಿ ಇಲ್ಲ.

ಕೊಡಗು ಜಿಲ್ಲೆಯಾದ್ಯಂತ ಮಳೆ ಸುರಿದಿದೆ. ಹಾಸನ ಜಿಲ್ಲೆಯಾದ್ಯಂತ ಜಡಿ ಮಳೆ ಶುರುವಾಗಿದ್ದು, ಸಕಲೇಶಪುರ ತಾಲ್ಲೂಕಿನಲ್ಲಿ ಹೆಚ್ಚಿನ ಮಳೆಯಾಗಿದೆ.

4ನೇ ಪುಟ ನೋಡಿ

ಕೊಡಗಿನ ಮಲ್ಲಳ್ಳಿ ಜಲಪಾತ ಮಳೆಯಿಂದಾಗಿ ಮೈದುಂಬಿ ಹರಿಯುತ್ತಿದೆ

ಎಲ್ಲಿ ಎಷ್ಟು ಮಳೆ?

- **21** ಸೆಂ.ಮೀ ಚಿಕ್ಕಮಗಳೂರಿನ ಕೊಟ್ಟಿಗೆಹಾರ
- **19** ಸೆಂ.ಮೀ ಶಿವಮೊಗ್ಗದ ಆಗುಂಬೆ
- **17** ಸೆಂ.ಮೀ ಕೊಡಗಿನ ಭಾಗಮಂಡಲ
- **14** ಸೆಂ.ಮೀ ಉಡುಪಿ
- **13** ಸೆಂ.ಮೀ ದಕ್ಷಿಣ ಕನ್ನಡದ ಪುತ್ತೂರು

* ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಗರಿಷ್ಠ ಮಳೆ

6 ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ಬೆಂಗಳೂರು: ರಾಜ್ಯದ ಕರಾವಳಿಗೆ ಮುಂಗಾರು ಪ್ರವೇಶ ವಾಗಿರುವುದರಿಂದ ವಿವಿಧೆಡೆ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ–ಮಲೆನಾಡು ಭಾಗದ ಆರು ಜಿಲ್ಲೆಗಳಿಗೆ ಸೋಮವಾರ 'ರೆಡ್ ಅಲರ್ಟ್' ಘೋಷಿಸಲಾಗಿದೆ.

ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ 'ರೆಡ್' ಅಲರ್ಟ್ ನೀಡಲಾಗಿದೆ. ಕೆಲವೆಡೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಬೆಳಗಾವಿ ಹಾಗೂ ಧಾರವಾಡಕ್ಕೆ 'ಆರೆಂಜ್ ಅಲರ್ಟ್' ನೀಡಲಾಗಿದ್ದು, ಕೆಲವೆಡೆ ಭಾರಿ ಮಳೆಯಾಗುವ ಸಂಭವವಿದೆ.

ವಿಜಯಪುರ, ಬಾಗಲಕೋಟೆ, ಗದಗ, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಧಾರಾಕಾರ, ಭಾರಿ ಮಳೆಯ ಮುನ್ಸೂಚನೆ ನೀಡಲಾದ ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 40– 50 ಕಿ.ಮೀ ವೇಗದಲ್ಲಿ ಗಾಳಿ ಬೀಸಬಹುದು. ಕೊಂಕಣ, ಗೋವಾ, ಕರ್ನಾಟಕದ ಕರಾವಳಿ ಮತ್ತು ಪೂರ್ವ– ಮಧ್ಯ ಅರಬ್ಬಿ ಸಮುದ್ರದ ಕೆಲವೆಡೆ ಗಂಟೆಗೆ 60 ಕಿ.ಮೀ.ವರೆಗೂ ಗಾಳಿ ಬೀಸಬಹುದು.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಹಾಗೂ ಭಾರಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ದೇಶದ ಎಲ್ಲೆಡೆ ಮಳೆಯ ಮೋಡಿ

- ಕೇರಳದಲ್ಲಿ ಸರಾಸರಿ 5 ಸೆ.ಮೀನಿಂದ 15 ಸೆ.ಮೀ. ಮಳೆ
- ಅಲಪ್ಪುಳ, ಪತ್ತನಂತಿಟ್ಟ, ಕೊಟ್ಟಾಯಂ, ಪಾಲಕ್ಕಾಡ್, ವಯನಾಡ್‌ನಲ್ಲಿ ಗಂಟೆಗೆ 40 ಕಿ.ಮೀ. ವೇಗವಾಗಿ ಬೀಸಿದ ಗಾಳಿ
- ದೆಹಲಿ, ಗುಜರಾತ್‌ನ ಹಲವೆಡೆ ಮಳೆ
- ಮಹಾರಾಷ್ಟ್ರಕ್ಕೆ ಕಾಲಿಟ್ಟ ಮುಂಗಾರು
- ಕಳೆದೆರಡು ದಿನಗಳಿಂದ ಮುಂಬೈ, ಕೊಂಕಣತೀರದಲ್ಲಿ ಭಾರಿ ಮಳೆ
- ಮಿಜೋರಾಂ, ಮಣಿಪುರ ಹಾಗೂ ನಾಗಾಲ್ಯಾಂಡ್‌ಗೂ ಮುಂಗಾರು ಪ್ರವೇಶ: ಐಎಂಡಿ
- ರಾಜಸ್ಥಾನದ ಖೈರತಾಲ್–ತಿಜಾರಾ ಜಿಲ್ಲೆಯಲ್ಲಿ ಮನೆ ಕುಸಿದು ತಾಯಿ–ಮಗಳು ಸಾವು
- ಬಿಕಾನೇರ್, ಸಿಕಾರ್, ಜುಂಜುನು ಜಿಲ್ಲೆಯಲ್ಲಿ ಬುಡಸಮೇತ ಉರುಳಿಬಿದ್ದ ವಿದ್ಯುತ್ ಕಂಬಗಳು
- ರಾಜಸ್ಥಾನದ ಬಾರ್ಮೇಡ್, ಜೈಸಲ್ಮೇರ್ ಜಿಲ್ಲೆಗಳಲ್ಲಿ ದೂಳಿನ ಬಿರುಗಾಳಿ



ಮುಳುಗಡೆ

ತೈಲ ಕಂಟೇನರ್‌ಗಳನ್ನು ಹೊತ್ತು ಸಾಗುತ್ತಿದ್ದ ಲೈಬೀರಿಯಾದ ಸರಕು ಸಾಗಣೆ ಹಡಗೊಂದು ಕೇರಳದ ಕೊಚ್ಚಿಯಿಂದ 70 ಕಿ.ಮೀ ದೂರದಲ್ಲಿ ಸಮುದ್ರದಲ್ಲಿ ಮುಳುಗಡೆಯಾದ ದೃಶ್ಯ

– ಪಿಟಿಐ ಚಿತ್ರ

ಪಕ್ಷದಿಂದ ಪುತ್ರನ ಉಚ್ಚಾಟಿಸಿದ ಲಾಲೂ

ಪಟ್ನಾ (ಪಿಟಿಐ): ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಅವರು ತಮ್ಮ ಹಿರಿಯ ಪುತ್ರ ತೇಜ್ ಪ್ರತಾಪ್ ಯಾದವ್ ಅವರನ್ನು ಪಕ್ಷದಿಂದ 6 ವರ್ಷಗಳಿಗೆ ಉಚ್ಚಾಟನೆ ಮಾಡಿರುವುದಾಗಿ ಭಾನುವಾರ ಹೇಳಿದ್ದಾರೆ. ತೇಜ್ ಅವರ ಬೇಜವಾಬ್ದಾರಿಯುತ ವರ್ತನೆಯಿಂದ ಬೇಸತ್ತು ಈ ನಿರ್ಣಯ ತೆಗದುಕೊಂಡಿ ರುವುದಾಗಿ ಲಾಲೂ ತಿಳಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ 'ಎಕ್ಸ್'ನಲ್ಲಿ ಲಾಲೂ ಪೋಸ್ಟ್ ಮಾಡಿದ್ದಾರೆ. 'ನನ್ನ ಹಿರಿಯ ಪುತ್ರ ತೇಜ್ ಪ್ರತಾಪ್‌ನ ಕಾರ್ಯಚಟುವಟಿಕೆಗಳು ನಮ್ಮ ಕುಟುಂಬದ ಘನತೆಗೆ, ಪರಂಪರೆಗೆ ತಕ್ಕುದಾಗಿಲ್ಲ. ಆತನ ಬೇಜವಾಬ್ದಾರಿಯುತ ವರ್ತನೆಯಿಂದಾಗಿ ಅವನನ್ನು ಪಕ್ಷ ಹಾಗೂ ಕುಟುಂಬದಿಂದ ಉಚ್ಚಾಟಿಸುತ್ತಿದ್ದೇನೆ. ಇನ್ನು ಮುಂದೆ ಪಕ್ಷಕ್ಕಾಗಲಿ, ಕುಟುಂಬ ಕ್ಕಾಗಲಿ ಆತ ಸಂಬಂಧಿಸಿದವನಲ್ಲ. ಆರು ವರ್ಷಗಳಿಗೆ ಪಕ್ಷದಿಂದ ಉಚ್ಚಾಟಿಸು ತ್ತಿದ್ದೇನೆ' ಎಂದು ಬರೆದಿದ್ದಾರೆ.

ತೇಜ್ ಪ್ರತಾಪ್

'ಮಹಿಳೆಯೊಬ್ಬರ ಜತೆಗೆ ನಾನು ಸಂಬಂಧ ಹೊಂದಿದ್ದೇನೆ' ಎಂದು ತೇಜ್ ಪ್ರತಾಪ್ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದರು. ಈ ಬಗ್ಗೆ ತೀವ್ರ ಟೀಕೆ ವ್ಯಕ್ತವಾಗುತ್ತಿದ್ದಂತೆಯೇ ತನ್ನ ಅಕೌಂಟ್ ಹ್ಯಾಕ್ ಆಗಿದೆ ಎಂದೂ ಹೇಳಿಕೊಂಡಿದ್ದರು. ಈ ಬೆಳವಣಿಗೆ ಬೆನ್ನಲ್ಲೇ ತೇಜ್ ಅವರನ್ನು ಲಾಲೂ ಉಚ್ಚಾಟನೆ ಮಾಡಿದ್ದಾರೆ.

ಬಿಹಾರದ ಮಾಜಿ ಮುಖ್ಯಮಂತ್ರಿ ದರೋಗಾ ಪ್ರಸಾದ್ ರಾಯ್ ಅವರ ಪುತ್ರಿ ಐಶ್ವರ್ಯ ಅವರನ್ನು ತೇಜ್ ವಿವಾಹವಾಗಿದ್ದು, ಈ ಹಿಂದೆ ಅವರ ಕೌಟುಂಬಿಕ ಕಲಹದಿಂದಲೂ ಲಾಲೂ ಮುಜುಗರಕ್ಕೀಡಾಗಿದ್ದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಿಜೆಪಿ ವಿರುದ್ಧ ಮಾನನಷ್ಟ ದಾವೆ

ಬೆಂಗಳೂರು: ರಾಜ್ಯ ಸರ್ಕಾರದ ಬಗ್ಗೆ ತಪ್ಪು ಮಾಹಿತಿ ಹಾಗೂ ಸುಳ್ಳು ಸಂಗತಿಗಳನ್ನು ಅಳವಡಿಸಿಕೊಂಡು ದೃಶ್ಯ ಮತ್ತು ಮುದ್ರಣ ಮಾಧ್ಯಮಗಳಲ್ಲಿ ಸುಳ್ಳು ಪ್ರಚಾರ ಮಾಡಿದೆ ಎಂದು ಬಿಜೆಪಿ ವಿರುದ್ಧ ಮಾನನಷ್ಟ ದಾವೆ ದಾಖಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮೊಕದ್ದಮೆ ದಾಖಲಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗೆ ಒಳಾಡಳಿತ ಇಲಾಖೆ ಸೂಚನೆ ನೀಡಿದೆ. ಈ ಪ್ರಕರಣ ವನ್ನು ನಿರ್ವಹಿಸಲು 67ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ಸರ್ಕಾರಿ ವಕೀಲ ಬಿ.ಎಸ್. ಪಾಟೀಲ್ ಮತ್ತು ಬೆಂಗಳೂರಿನ 61ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ಸರ್ಕಾರಿ ವಕೀಲರಾದ ಶೈಲಜಾ ನಾಯಕ್ ಅವರನ್ನು ನಿಯೋಜಿಸಲಾಗಿದೆ.

ರಾಜ್ಯ ಸರ್ಕಾರ 2 ವರ್ಷ ಪೂರೈಸಿದ ಸಂದರ್ಭದಲ್ಲಿ 'ರಾಜ್ಯ ಸರ್ಕಾರದ 2 ವರ್ಷಗಳ ವೈಫಲ್ಯ ಬಗ್ಗೆ ಆರೋಪ ಪಟ್ಟಿ' ಎಂಬ ಶೀರ್ಷಿಕೆಯಡಿ ಬಿಜೆಪಿಯು ಮಾಧ್ಯಮಗಳಲ್ಲಿ ಅಪಪ್ರಚಾರ ಮಾಡಿದೆ ಎಂದು ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಸ್ಪೀಕರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯ • ಸಿ.ಎಂ, ವಿಪಕ್ಷ ನಾಯಕ ಉಪಸ್ಥಿತಿ

ಬಿಜೆಪಿಯ 18 ಶಾಸಕರ ಅಮಾನತು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಅಧಿವೇಶನದ ಕೊನೆ ದಿನ (ಮಾರ್ಚ್ 21) ಕಲಾಪಗಳಿಗೆ ಅಡ್ಡಿಪಡಿಸಿದ ಕಾರಣಕ್ಕೆ ಬಿಜೆಪಿಯ 18 ಶಾಸಕರನ್ನು ಆರು ತಿಂಗಳು ಅಮಾನತು ಮಾಡಿ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ನೀಡಿದ್ದ ರೂಲಿಂಗ್ ಅನ್ನು ಭಾನುವಾರ ಹಿಂಪಡೆಯಲಾಗಿದೆ.

ಅಮಾನತು ವಾಪಸಿಗೆ ಆಗ್ರಹಿಸಿ ಖಾದರ್ ಅವರಿಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಅಮಾನತುಗೊಂಡಿದ್ದ ಬಿಜೆಪಿ ಶಾಸಕರು ಮನವಿ ಸಲ್ಲಿಸಿದ್ದರು.

ಈ ಕುರಿತು ಚರ್ಚಿಸಲು ಸ್ಪೀಕರ್ ಅವರು ವಿಧಾನಸೌಧದಲ್ಲಿ ಭಾನುವಾರ ಕರೆದಿದ್ದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಆರ್.ಅಶೋಕ ಭಾಗವಹಿಸಿದ್ದರು. ಈ ಸಭೆಯಲ್ಲಿ ಸ್ಪೀಕರ್ ನಿರ್ಣಯ ಪ್ರಕಟಿಸಿದರು.

'ಶಾಸಕರ ಅಮಾನತು ಅವಧಿಯಲ್ಲಿ ಎರಡು ತಿಂಗಳು ಕಳೆದಿದೆ. ಅಮಾನತು ಗೊಂಡಿರುವ ಶಾಸಕರು ಈ ಅವಧಿಯಲ್ಲಿ ತಮ್ಮ ನಡೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಮುಂದೆ ಸಂವಿಧಾನಾತ್ಮಕವಾಗಿ ಸದನದ ಕಲಾಪಗಳಲ್ಲಿ ಸಂಯಮದಿಂದ ನಡೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರು ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇದಕ್ಕೆ ಸಹಮತ ಸೂಚಿಸಿದರು. ಅಮಾನತು ನಿರ್ಣಯ ಹಿಂತೆಗೆದುಕೊಳ್ಳುವ ನಿರ್ಣಯದ ಬಗ್ಗೆ ಮುಂದಿನ ಅಧಿವೇಶನದಲ್ಲಿ ಸದನದ ಘಟನೋತ್ತರ ಅನುಮೋದನೆ ಪಡೆಯಲೂ ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅಮಾನತುಗೊಂಡಿದ್ದ ಶಾಸಕರು ವಿಧಾನಸಭೆಯ ಸಭಾಂಗಣ, ಲಾಬಿ ಮತ್ತು ಗ್ಯಾಲರಿಗಳಿಗೆ ಪ್ರವೇಶಿಸಲು ಮತ್ತು ವಿಧಾನ ಮಂಡಲ/ ವಿಧಾನಸಭೆಯ ಸ್ಥಾಯಿ ಸಮಿತಿಗಳ ಸಭೆಯಲ್ಲಿ ಭಾಗವಹಿಸಲು ಅವಕಾಶ ಇಲ್ಲ. ವಿಧಾನಸಭೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ಶಾಸಕರ ಹೆಸರಿನಲ್ಲಿ ಯಾವುದೇ ವಿಷಯ ನಮೂದು ಮಾಡಬಾರದು. ಶಾಸಕರು ಅಮಾನತು ಅವಧಿಯಲ್ಲಿ ನೀಡುವ ಯಾವುದೇ ಸೂಚನೆ ಪರಿಗಣಿಸುವುದಿಲ್ಲ. ಸಮಿತಿಗಳ ಚುನಾವಣೆಯಲ್ಲಿ ಮತದಾನ ಮಾಡುವಂತಿಲ್ಲ. ದಿನಭತ್ಯೆ ಪಡೆಯಲೂ ಅರ್ಹರಿರುವುದಿಲ್ಲ ಎಂಬ ನಿರ್ಬಂಧಗಳು ತಕ್ಷಣದಿಂದ ರದ್ದುಗೊಳ್ಳಲಿದೆ' ಎಂದೂ ಅವರು ತಿಳಿಸಿದ್ದಾರೆ.

8ನೇ ಪುಟ ನೋಡಿ

ಅಮಾನತುಗೊಂಡಿದ್ದ ಶಾಸಕರು

ದೊಡ್ಡನಗೌಡ ಪಾಟೀಲ (ವಿರೋಧ ಪಕ್ಷದ ಮುಖ್ಯ ಸಚೇತಕರು), ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಎಸ್.ಆರ್. ವಿಶ್ವನಾಥ್, ಬೈರತಿ ಬಸವರಾಜು, ಎಸ್. ಎನ್. ಚನ್ನಬಸಪ್ಪ, ಉಮಾನಾಥ ಕೋಟ್ಯಾನ್, ಬಿ. ಸುರೇಶ್ ಗೌಡ, ಡಾ. ಶೈಲೇಂದ್ರ ಬೆಲ್ದಾಳೆ, ಶರಣು ಸಲಗರ, ಸಿ.ಕೆ.ರಾಮಮೂರ್ತಿ, ಯಶ್‌ಪಾಲ್ ಸುವರ್ಣ, ಹರೀಶ್ ಬಿ. ಪಿ, ಡಾ.ಭರತ್ ಶೆಟ್ಟಿ, ಬಸವರಾಜ ಮತ್ತಿಮಡು, ಧೀರಜ್ ಮುನಿರಾಜು, ಮುನಿರತ್ನ, ಡಾ.ಚಂದ್ರು ಲಮಾಣಿ

> ಶಾಸಕರನ್ನು ಅಮಾನತು ಮಾಡಿ, ಷರತ್ತು ವಿಧಿಸಿರುವುದನ್ನು ರದ್ದು ಮಾಡಿದ್ದೇನೆ. ಅಮಾನತುಗೊಂಡವರಿಗೆ ಪರಿಸ್ಥಿತಿ ಗೊತ್ತಾಗಿದೆ. ಮುಂದೆ ಅವರು ಈ ರೀತಿಯ ವರ್ತನೆ ತೋರಿಸುವುದಿಲ್ಲ ಎಂಬ ನಂಬಿಕೆಯಿದೆ
>
> **ಯು.ಟಿ. ಖಾದರ್,** ವಿಧಾನಸಭಾಧ್ಯಕ್ಷ

> ವಿಧಾನಸಭೆಗೆ ಆಡಳಿತ ಪಕ್ಷ ಮಾತ್ರವಲ್ಲ, ವಿಪಕ್ಷವೂ ಪ್ರಮುಖ. ನಮ್ಮ ಶಾಸಕರು ವಿಷಾದ ವ್ಯಕ್ತಪಡಿಸಿದ್ದಾರೆ. ಅಮಾನತು ಹಿಂಪಡೆಯಬೇಕೆಂಬ ಮನವಿಗೆ ಮುಖ್ಯಮಂತ್ರಿ, ಸಭಾಧ್ಯಕ್ಷರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ
>
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

'ಕೋವಿಡ್: ಆತಂಕಕ್ಕೆ ಕಾರಣವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ವೈರಾಣುವಿನ ಉಪತಳಿ ಅಪಾಯಕಾರಿಯಲ್ಲ. ಆದರೂ ಶಾಲಾ–ಕಾಲೇಜುಗಳು ಪ್ರಾರಂಭ ಆಗುತ್ತಿರುವುದರಿಂದ 3–4 ದಿನ ಪರಿಸ್ಥಿತಿ ಅವಲೋಕಿಸಿ, ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ನಿರ್ಧರಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ಕೋವಿಡ್ ಪೀಡಿತರು ವಿಶೇಷ ಆರೈಕೆ ಇಲ್ಲದೆಯೇ ಚೇತರಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ, ಜನರು ಆತಂಕ ಪಡಬೇಕಾದ ಪರಿಸ್ಥಿತಿಯಿಲ್ಲ' ಎಂದು ಹೇಳಿದರು.

'ಕೋವಿಡ್ ಪರೀಕ್ಷೆ ಪ್ರಮಾಣ ಹೆಚ್ಚಳಕ್ಕಾಗಿ ಪ್ರಯೋಗಾಲಯಗಳಿಗೆ ಪರೀಕ್ಷಾ ಕಿಟ್‌ಗಳನ್ನು ಕಳಿಸಲಾಗುತ್ತಿದೆ. 3–4 ದಿನಗಳಲ್ಲಿ ಪರಿಸ್ಥಿತಿಯ ಚಿತ್ರಣ ಸಿಗಲಿದೆ. ಕೇಂದ್ರ ಸರ್ಕಾರದ ಸೂಚನೆ ಹಾಗೂ ತಜ್ಞರ ಸಲಹೆ ಆಧರಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಸದ್ಯ ಗಡಿ ಭಾಗದಲ್ಲಿ ನಿರ್ಬಂಧದಂತಹ ಕ್ರಮ ಅಗತ್ಯವಿಲ್ಲ' ಎಂದು ಸ್ಪಷ್ಟಪಡಿಸಿದರು.

'ಕೋವಿಡ್ ಪರೀಕ್ಷೆಗೆ ಅಗತ್ಯ ಕಿಟ್‌ಗಳು ಲಭ್ಯವಿವೆ. ಉಸಿರಾಟದ ತೀವ್ರ ಸಮಸ್ಯೆ (ಸಾರಿ) ಹಾಗೂ ವಿವಿಧ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಪರೀಕ್ಷೆ ನಡೆಸಲಾಗುತ್ತಿದೆ. ಸದ್ಯ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ. ವೈರಾಣು ಸಂಶೋಧನೆ ಮತ್ತು ರೋಗ ನಿರ್ಣಯ ಪ್ರಯೋಗಾಲಯ (ವಿಆರ್‌ಡಿಎಲ್) ಇರುವ ಕಡೆ ಪರೀಕ್ಷೆ ಮಾಡಲಾಗುತ್ತಿದೆ' ಎಂದು ಹೇಳಿದರು.

'ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸೇರಿ 10 ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಸಿದ್ಧತೆಯಾಗಿದೆ. ಒಂದು ತಿಂಗಳಿಗಾಗುವಷ್ಟು, 5 ಸಾವಿರ ಆರ್‌ಟಿ–ಪಿಸಿಆರ್ ಪರೀಕ್ಷಾ ಕಿಟ್‌ಗಳ ಖರೀದಿಗೆ ಸೂಚಿಸಲಾಗಿದೆ' ಎಂದರು.

ಪಹಲ್ಗಾಮ್ ದಾಳಿ: ಜಾಂಗಡಾ ಮಾತಿಗೆ ಕಾಂಗ್ರೆಸ್ ಕಿಡಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ವಿಧವೆಯರಾದವರು ಹೋರಾಟದ ಕೆಚ್ಚನ್ನು ತೋರಿಸಿಲ್ಲ ಎಂದು ರಾಜ್ಯಸಭಾ ಸದಸ್ಯ ರಾಮಚಂದ್ರ ಜಾಂಗಡಾ ಅವರು ಹೇಳಿರುವುದಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

ರಾಮಚಂದ್ರ

ಜಾಂಗಡಾ ಅವರನ್ನು ಬಿಜೆಪಿಯಿಂದ ಹೊರಹಾಕಬೇಕು, ಪ್ರಧಾನಿ ನರೇಂದ್ರ ಮೋದಿ ಕ್ಷಮೆ ಯಾಚಿಸಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿವೆ.

ಬಿಜೆಪಿಯ ನಾಯಕತ್ವ ಹಾಗೂ ಪ್ರಧಾನಿ ಮೋದಿ ಅವರು ಈ ಹೇಳಿಕೆಯ ವಿಚಾರವಾಗಿ ಮೌನ ತಾಳಿರುವುದನ್ನು ಜಾಂಗಡಾ ಹೇಳಿಕೆಗೆ 'ಪರೋಕ್ಷ ಸಮ್ಮತಿ' ಎಂದು ಭಾವಿಸಬೇಕಾಗುತ್ತದೆ ಎಂದು ಕಾಂಗ್ರೆಸ್ ಹೇಳಿದೆ.

ಪಹಲ್ಗಾಮ್ ದಾಳಿಯ ಸಂತ್ರಸ್ತರನ್ನು ಮತ್ತು ಸಶಸ್ತ್ರ ಪಡೆಗಳನ್ನು ಅವಹೇಳನ ಮಾಡಲು ಬಿಜೆಪಿಯವರು ತಮ್ಮ ನಡುವೆಯೇ ಸ್ಪರ್ಧೆ ನಡೆಸಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

8ನೇ ಪುಟ ನೋಡಿ

ಜಾಂಗಡಾ ಹೇಳಿದ್ದೇನು?

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಒಳಗಾದ ಪ್ರವಾಸಿಗರು ಭಯೋತ್ಪಾದಕರ ವಿರುದ್ಧ ಹೋರಾಟ ನಡೆಸಬೇಕಿತ್ತು, ಪತಿಯರನ್ನು ಕಳೆದುಕೊಂಡ ಮಹಿಳೆಯರು ವೀರಾಂಗನೆಯರ ರೀತಿಯಲ್ಲಿ ವರ್ತಿಸಬೇಕಿತ್ತು ಎಂದು ಜಾಂಗಡಾ ಹೇಳಿದ್ದರು.

ಪ್ರವಾಸಿಗರು ಅಗ್ನಿವೀರರಿಗೆ ನೀಡುವ ತರಬೇತಿ ಪಡೆದುಕೊಂಡವರಾಗಿದ್ದರೆ ಸಾವಿನ ಸಂಖ್ಯೆ ಕಡಿಮೆ ಇರುತ್ತಿತ್ತು ಎಂದೂ ಅವರು ಹೇಳಿದ್ದರು.

8ನೇ ಪುಟ ನೋಡಿ

ವಿವಿಧ ಜಿಲ್ಲೆಗಳಲ್ಲಿ 150ಕ್ಕೂ ಹೆಚ್ಚು ಪ್ರಕರಣ ಪತ್ತೆ

ಟ್ರಂಪ್ ಹೆಸರಿನಲ್ಲಿ ವಿವಿಧೆಡೆ ಕೋಟಿ ವಂಚನೆ

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೆಸರನ್ನೂ ಸೈಬರ್ ವಂಚಕರು ಬಿಟ್ಟಿಲ್ಲ. ಟ್ರಂಪ್ ಹೆಸರಿನಲ್ಲಿ ರಾಜ್ಯದ 150ಕ್ಕೂ ಹೆಚ್ಚು ಜನರಿಂದ ಕೋಟಿಗೂ ಅಧಿಕ ಹಣವನ್ನು ಸಂಗ್ರಹಿಸಿ ವಂಚಿಸಲಾಗಿದ್ದು, ಹಣ ವಾಪಸ್ ಕೊಡಿಸುವಂತೆ ಸಂತ್ರಸ್ತರು ಠಾಣೆಗಳ ಮೆಟ್ಟಿಲೇರುತ್ತಿದ್ದಾರೆ.

ಟ್ರಂಪ್ ಹೆಸರಿನಲ್ಲಿ 'ಮೊಬೈಲ್ ಆ್ಯಪ್'ವೊಂದನ್ನು ಅಭಿವೃದ್ಧಿಪಡಿಸಿರುವ ಸೈಬರ್ ವಂಚಕರು, ವಿವಿಧ ಕಂಪನಿ ಸೇವೆಗಳ ಬಗ್ಗೆ ವಿಮರ್ಶೆ ಹಾಗೂ ಹೂಡಿಕೆ ಹೆಸರಿನಲ್ಲಿ ಜನರಿಂದ ಕೋಟಿಗೂ ಅಧಿಕ ಹಣ ಪಡೆದು ವಂಚಿಸಿರುವುದು ಪತ್ತೆಯಾಗಿದೆ.

ಬೆಂಗಳೂರು, ಮಂಗಳೂರು, ತುಮಕೂರು, ಹಾವೇರಿ, ಹುಬ್ಬಳ್ಳಿ–ಧಾರವಾಡ, ಕಲಬುರ್ಗಿ, ಮೈಸೂರು, ಬಳ್ಳಾರಿ, ಬೀದರ, ಶಿವಮೊಗ್ಗ ಸೇರಿದಂತೆ ಹಲವು ಜಿಲ್ಲೆಗಳ ಠಾಣೆಗಳಲ್ಲಿ ವಂಚನೆಗೆ ಸಂಬಂಧಪಟ್ಟಂತೆ ಪ್ರಕರಣಗಳು ದಾಖಲಾಗಿವೆ.

ಕೃತಕ ಬುದ್ಧಿಮತ್ತೆ ಮೂಲಕ ಟ್ರಂಪ್ ವಿಡಿಯೊ ಸೃಷ್ಟಿಸಿರುವ ವಂಚಕರು, ಅದನ್ನೇ ಬಳಸಿ ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡಿದ್ದಾರೆ. ವಿಡಿಯೊ ನೋಡಿದ ಜನರು, ಆರೋಪಿಗಳ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಜಾಲಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ.

ಕಡಿಮೆ ಸಮಯದಲ್ಲಿ ಹೆಚ್ಚು ಗಳಿಕೆ ಆಮಿಷವೊಡ್ಡುವ ವಂಚಕರು, ಹಂತ ಹಂತವಾಗಿ ಹಣ ಪಡೆದು ನಾಪತ್ತೆಯಾಗುತ್ತಿದ್ದಾರೆ. ಸರ್ಕಾರಿ ನೌಕರರು, ವಕೀಲರು, ವ್ಯಾಪಾರಿಗಳು, ಗೃಹಿಣಿಯರು, ವಿದ್ಯಾರ್ಥಿಗಳು ಸೇರಿದಂತೆ ಹಲವರು ಜಾಲಕ್ಕೆ ಸಿಲುಕಿ ತಲಾ ₹50 ಸಾವಿರದಿಂದ ₹10 ಲಕ್ಷದವರೆಗೂ ಕಳೆದುಕೊಂಡಿದ್ದಾರೆ.

'ಹಾವೇರಿ ಜಿಲ್ಲೆಯಲ್ಲೇ 15ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ' ಎಂದು ಹಾವೇರಿ ಜಿಲ್ಲಾ ಸೆನ್ (ಸೈಬರ್, ಆರ್ಥಿಕ ಹಾಗೂ ಮಾದಕ ದ್ರವ್ಯ ನಿಯಂತ್ರಣ) ಠಾಣೆ ಇನ್‌ಸ್ಪೆಕ್ಟರ್ ಶಿವಶಂಕರ ಆರ್. ಗಣಾಚಾರಿ ತಿಳಿಸಿದರು.

ಮುಖ್ಯಾಂಶಗಳು

- ಎಐ ವಿಡಿಯೊ ಸೃಷ್ಟಿಸಿ ಜಾಹೀರಾತು
- ಹಣ ವಾಪಸು ಪಡೆಯುವಾಗ ತೆರಿಗೆ ನೆಪ
- ಸೈಬರ್ ವಂಚನೆ ದೂರಿಗೆ– 1930

> ಟ್ರಂಪ್ ಸೇರಿ ಹಲವು ಗಣ್ಯರ ಹೆಸರಿನಲ್ಲಿ ವಂಚನೆ ಪ್ರಕರಣಗಳು ಹೆಚ್ಚುತ್ತಿವೆ. ಆನ್‌ಲೈನ್‌ನಲ್ಲಿ ಹೂಡಿಕೆಗೂ ಮುನ್ನ ಜನರು ಎಚ್ಚರಿಕೆ ವಹಿಸಬೇಕು
>
> **ಶಿವಶಂಕರ ಗಣಾಚಾರಿ**
> ಇನ್‌ಸ್ಪೆಕ್ಟರ್, ಹಾವೇರಿ ಸೆನ್ ಠಾಣೆ

ಆ್ಯಪ್ ಇನ್‌ಸ್ಟಾಲ್ ಮಾಡಿಸಿ ಕೃತ್ಯ

'ಟ್ರಂಪ್ ಹೋಟೆಲ್ ರೆಂಟಲ್' ಎಂಬ ಹೆಸರಿನಲ್ಲಿ ಯೂಟ್ಯೂಬ್‌ನಲ್ಲಿ ವಿಡಿಯೊ ಬಂದಿತ್ತು. 'ಕಡಿಮೆ ಸಮಯದಲ್ಲಿ ದುಪ್ಪಟ್ಟು ಹಣ ಗಳಿಸಿ' ಎಂಬುದಾಗಿ ಅದರಲ್ಲಿ ತೋರಿಸಲಾಗಿತ್ತು. ಹೆಚ್ಚು ಹಣ ಗಳಿಸುವ ಆಸೆಯಿಂದ, ವಿಡಿಯೊ ಡಿಸ್ಕ್ರಿಪ್ಶನ್‌ನಲ್ಲಿದ್ದ ಆ್ಯಪ್‌ನ ಲಿಂಕ್ ಕ್ಲಿಕ್ ಮಾಡಿದ್ದೆ. ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಮೂಲಕ ಲಾಗಿನ್ ಸಹ ಆಗಿದ್ದೆ' ಎಂದು ಸಂತ್ರಸ್ತರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಕೆಲ ಹೊತ್ತಿನ ನಂತರ ಆರೋಪಿಗಳಿಂದ ಪ್ರತಿಕ್ರಿಯೆ ಬಂದಿತ್ತು. ₹1,500 ನೀಡಿದರೆ ಖಾತೆಯನ್ನು ಸಕ್ರಿಯಗೊಳಿಸುವುದಾಗಿ ಹೇಳಿದ್ದರು. ಅದಕ್ಕೂ ಒಪ್ಪಿ ಹಣ ಪಾವತಿಸಿದ್ದೆ. ಇದಾದ ನಂತರ, ಕೆಲ ಕಂಪನಿಗಳ ವಿಮರ್ಶೆ ಬರೆಯುವ ಟಾಸ್ಕ್ ನೀಡಿದರು. ಅದನ್ನು ಪೂರ್ಣಗೊಳಿಸುತ್ತಿದ್ದಂತೆ ಆ್ಯಪ್‌ನ ಡ್ಯಾಶ್‌ಬೋರ್ಡ್‌ನಲ್ಲಿ 'ಗಳಿಕೆ ಹಣ' ಹೆಚ್ಚಾಗುತ್ತಿತ್ತು. ಅದನ್ನು ನಿಜವೆಂದು ನಂಬಿದ್ದೆ. ₹1 ಲಕ್ಷವಾಗುತ್ತಿದ್ದಂತೆಯೇ ಹಣ ವಾಪಸು ಪಡೆಯಲು ಪ್ರಯತ್ನಿಸಿದ್ದೆ. ಆದರೆ, ತೆರಿಗೆ ಕಟ್ಟಬೇಕೆಂದು ಆರೋಪಿಗಳು ಮತ್ತಷ್ಟು ಹಣ ಪಡೆದುಕೊಂಡಿದ್ದರು' ಎಂದು ಹೇಳಿದರು.

'ಡ್ಯಾಶ್‌ಬೋರ್ಡ್‌ನಲ್ಲಿ ಮಾತ್ರ ಹಣದ ಮೌಲ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಅದನ್ನು ವಾಪಸು ಪಡೆಯಲು ಹಂತ ಹಂತವಾಗಿ ₹5.93 ಲಕ್ಷ ನೀಡಿದೆ. ಇದಾದ ನಂತರ ಹಣ ಬರಲಿಲ್ಲ. ಹಣವನ್ನು ಬೇರೆ ಕಂಪನಿಯಲ್ಲಿ ಹೂಡಿಕೆ ಮಾಡಿದರೆ, ದುಪ್ಪಟ್ಟು ಹಣ ಬರುವುದಾಗಿ ಹೇಳಿ ಪುನಃ ಶುಲ್ಕ ಪಡೆದರು. ಹಲವು ದಿನವಾದರೂ ಹಣ ವಾಪಸು ಕೊಡಲಿಲ್ಲ. ಅವಾಗಲೇ ಇದೊಂದು ವಂಚನೆ ಜಾಲವೆಂಬುದು ಗೊತ್ತಾಯಿತು' ಎಂದು ತಿಳಿಸಿದರು.

'ವಿನೋದಕ್ಕೆ ಇಸ್ಪೀಟು ಆಡುವುದು ತಪ್ಪಲ್ಲ'

ನವದೆಹಲಿ (ಪಿಟಿಐ): ಜೂಜಿನ ಉದ್ದೇಶ ಇಲ್ಲದ, ಮನರಂಜನೆ ಮತ್ತು ವಿನೋದಕ್ಕಾಗಿ ಇಸ್ಪೀಟು ಆಡುವುದು ನೈತಿಕ ಅಧಃಪತನ ಅಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಕರ್ನಾಟಕದ 'ಸರ್ಕಾರಿ ಪಾಸಲೇನ್ ಕಾರ್ಖಾನೆ ನೌಕರರ ಗೃಹನಿರ್ಮಾಣ ಸಹಕಾರ ಸಂಘ'ದ ಆಡಳಿತ ಮಂಡಳಿಗೆ ಚುನಾಯಿತರಾಗಿದ್ದ ಹನುಮಂತರಾಯಪ್ಪ ವೈ.ಸಿ. ಎನ್ನುವವರ ಆಯ್ಕೆಯನ್ನು ಕೋರ್ಟ್ ಮರುಸ್ಥಾಪಿಸಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರಿದ್ದ ಪೀಠವು ಈ ತೀರ್ಮಾನ ಪ್ರಕಟಿಸಿದೆ.

ರಸ್ತೆಯ ಬದಿಯಲ್ಲಿ ಕೆಲವರ ಜೊತೆಯಾಗಿ ಇಸ್ಪೀಟು ಆಡುತ್ತಿದ್ದ ಹನುಮಂತರಾಯಪ್ಪ ಅವರಿಗೆ ಯಾವುದೇ ವಿಚಾರಣೆ ನಡೆಸದೆ ₹200 ದಂಡ ವಿಧಿಸಲಾಗಿತ್ತು.

'ಹನುಮಂತರಾಯಪ್ಪ ಜೂಜಾಡುವ ಅಭ್ಯಾಸ ಬೆಳೆಸಿಕೊಂಡ ವ್ಯಕ್ತಿ ಅಲ್ಲ. ಇಸ್ಪೀಟು ಆಟದಲ್ಲಿ ಹಲವು ಬಗೆಗಳಿವೆ. ಆದರೆ, ಅಂತಹ ಪ್ರತಿಯೊಂದು ಬಗೆಯೂ, ಅದರಲ್ಲೂ ಮುಖ್ಯವಾಗಿ ಮನರಂಜನೆಗಾಗಿ ಹಾಗೂ ವಿನೋದಕ್ಕಾಗಿ ಆಡುವುದು, ನೈತಿಕವಾದ ಅಧಃಪತನಕ್ಕೆ ಒಯ್ಯುವಂಥದ್ದು ಎಂಬುದನ್ನು ಒಪ್ಪಿಕೊಳ್ಳುವುದು ಕಷ್ಟ. ವಾಸ್ತವದಲ್ಲಿ, ನಮ್ಮ ದೇಶದ ಹಲವು ಕಡೆಗಳಲ್ಲಿ ಬೆಟ್ಟಿಂಗ್‌ನ ಲವಲೇಶವೂ ಇಲ್ಲದೆ ಇಸ್ಪೀಟು ಆಡುವುದು ಬಡವರ ಮನರಂಜನಾ ಮಾರ್ಗ ಎಂದು ಒಪ್ಪಿತವಾಗಿದೆ' ಎಂದು ಹೇಳಿದೆ.

IN THE SUPREME COURT OF INDIA
EXTRA-ORDINARY APPELLATE JURISDICTION
SPECIAL LEAVE PETITION Diary No. 58394 OF 2024
WITH PRAYER FOR INTERIM RELIEF
WITH
21107/2025- APPLICATION FOR EXEMPTION FROM FILING O.T.
AND
21108/2025- APPLICATION FOR CONDONATION OF DELAY IN REFILING/CURING THE DEFECTS
AND
102868/2025- APPLICATION FOR PERMISSION TO FILE ADDITIONAL DOCUMENTS/FACTS/ANNEXURES

H. ANURADHA AND OTHERS. **Petitioner(s)**
VERSUS
RUKMINI AND OTHERS. **Respondent(s)**

To,
1. SHRISHA R. BHATTA, S/O LATE VADIRAMANANDA BHATTA R/AT HESARAGHATTA ROAD DASARAHALLI, BANGALORE-560 057 KARNATAKA
PID: 126125/2025 FOR R[12] IN DIARY NO. 58394/2024 (SEC IV-A)
2. PYGA DODDA MUNISWAMY, R/AT KETHAMARANAHALLI, 1st BLOCK, RAJAJINAGAR, BANGALORE- 560 010, KARNATAKA
PID: 126126/2025 FOR R[14] IN DIARY NO. 58394/2024 (SEC IV-A)
3. T.G. NARAYANA SWAMY, S/O GANGANNA R/AT THEERTHAPURA VILLAGE, YESHWATHAPURAHOBLI, BANGALORE NORTH TALUK, KARNATAKA
PID: 126127/2025 FOR R[18] IN DIARY NO. 58394/2024 (SEC IV-A)
4. SADASIVAIAH, S/O PARNNA R/AT KARIVOBANAHALLI, YESHWANTHPURA HOBLI, BENGALURU NORTH TALUK, KARNATAKA
PID: 126128/2025 FOR R[22] IN DIARY NO. 58394/2024 (SEC IV-A)
5. T. RAMEGOWDA, S/O DASE GOWDA R/AT SHIVAPURA VILLAGE, PEENYA INDUSTRIAL AREA, YESHWANTHPURA HOBLI, BENGALURU NORTH TALUK, BENGALURU-560 058, KARNATAKA
PID: 126129/2025 FOR R[23] IN DIARY NO. 58394/2024 (SEC IV-A)
6. KANNIKAMBA, W/O LATE VENKAARAMAIAH R/AT NO.18, KIRSHAN KRUPA SHOE LAND BUILDING, 1ST FLOOR, NEAR SHIVA TEMPLE, RAJAGOPAL NAGAR MAIN ROAD, PEENYA 2ND STAGE, BENGALURU-560 058, KARNATAKA
PID: 126130/2025 FOR R[24] IN DIARY NO. 58394/2024 (SEC IV-A)
7. KRISHNA MURTHY, S/O LATE VENKAARAMAIAH R/AT NO.18, KIRSHAN KRUPA SHOE LAND BUILDING, 1ST FLOOR, NEAR SHIVA TEMPLE, RAJAGOPAL NAGAR MAIN ROAD, PEENYA 2ND STAGE, BENGALURU-560 058, KARNATAKA
PID: 126131/2025 FOR R[25] IN DIARY NO. 58394/2024 (SEC IV-A)
8. CHIKKAMUNISHAMA BOVI, S/O DODAMUNISWAMY BOVI R/O SUDDAGUNTEPALYA, YESHWANTHPURA HOBLI, BENGALURU A) NORTH TALUK, KARNATAKA
PID: 126132/2025 FOR R[27] IN DIARY NO. 58394/2024 (SEC IV-A)
9. K.N. LAKSHMAMMA, W/O LATE K.N. LAKSHMAIAH R/AT NO.59, 10TH A CROSS, WEST OF CHORD ROAD, 2ND STAGE, MAHALAKSHMIPURAM, BANGALORE- 560 086, KARNATAKA
PID: 126133/2025 FOR R[28] IN DIARY NO. 58394/2024 (SEC IV-A)
10. K.L. BABU, S/O LATE K.N. LAKSHMAIAH R/AT NO.59, 10TH A CROSS, WEST OF CHORD ROAD, 2ND STAGE, MAHALAKSHMIPURAM, BANGALORE- 560 086, KARNATAKA
PID: 126134/2025 FOR R[29] IN DIARY NO. 58394/2024 (SEC IV-A)
11. K.L. SATISH, S/O LATE K.N. LAKSHMAIAH R/AT NO.59, 10TH A CROSS, WEST OF CHORD ROAD, 2ND STAGE, MAHALAKSHMIPURAM, BANGALORE- 560 086, KARNATAKA
PID: 126135/2025 FOR R[30] IN DIARY NO. 58394/2024 (SEC IV-A)
12. K.N. VENKATESH, S/O NANJAPPA R/AT KETHAMARANAHALLI, 1ST BLOCK, RAJAJINAGAR, BANGALORE-560 010, KARNATAKA
PID: 126136/2025 FOR R[31] IN DIARY NO. 58394/2024 (SEC IV-A)
13. K.N. CHOWDAPPA, S/O NANJAPPA R/AT KETHAMARANAHALLI, 1ST BLOCK, RAJAJINAGAR, BANGALORE- 560 010, KARNATAKA
PID: 126137/2025 FOR R[32] IN DIARY NO. 58394/2024 (SEC IV-A)
14. SHRISHA R. BHATTA, S/O LATE VADIRAMANANDA BHATTA R/AT HESARAGHATTA ROAD DASARAHALLI, BANGALORE-560 057, KARNATAKA
PID: 126138/2025 FOR R[38] IN DIARY NO. 58394/2024 (SEC IV-A)
15. PYGA DODDA MUNISWAMY, R/AT KETHAMARANAHALLI, 1ST BLOCK, RAJAJINAGAR, BANGALORE- 560 010, KARNATAKA
PID: 126139/2025 FOR R[40] IN DIARY NO. 58394/2024 (SEC IV-A)
16. T. JAYARAM, S/O LATE DODDA THAMMANNA R/AT NO.17/1K, LAKSHMI NILAYA 11TH CROSS, 1ST BLOCK RAJAJINAGAR, BANGALORE-560 010, KARNATAKA
PID: 126140/2025 FOR R[44] IN DIARY NO. 58394/2024 (SEC IV-A)
17. JAYARAMA, S/O LATE DODDA THAMMANNA R/AT NO.17/1K, LAKSHMI NILAYA 11TH CROSS, 1ST BLOCK RAJAJINAGAR, BANGALORE-560 010, KARNATAKA
PID: 126141/2025 FOR R[45] IN DIARY NO. 58394/2024 (SEC IV-A)
18. KRISHNAMURTHY, S/O LATE VENKATARAMAIAH R/AT NO.18, KIRSHAN KRUPA SHOE LAND BUILDING, 1ST FLOOR, NEAR SHIVA TEMPLE, RAJAGOPAL NAGAR MAIN ROAD, PEENYA 2ND STAGE, BENGALURU-560 058, KARNATAKA
PID: 126142/2025 FOR R[48] IN DIARY NO. 58394/2024 (SEC IV-A)
19. LAKSHMMA, W/O LATE K.N. LAKSHMAIAH R/AT NO.59, 10TH A CROSS, WEST OF CHORD ROAD, 2ND STAGE, MAHALAKSHMIPURAM, BANGALORE- 560 086, KARNATAKA
PID: 126143/2025 FOR R[49] IN DIARY NO. 58394/2024 (SEC IV-A)

WHEREAS the Petition for Special Leave to Appeal with prayer for interim relief along with application for **EXEMPTION FROM FILING O.T., CONDONATION OF DELAY IN REFILING/CURING THE DEFECTS**, above mentioned (copy enclosed) filed in the Registry by **Mr. ABHISHEK GAUTAM,** Advocate on behalf of the Petitioner(s) above named was listed for hearing before this Court on **31st January, 2025,** when the Court was pleased to pass the following order:-
"1. Issue notice on the application seeking condonation of delay as well as on the Special Leave Petitions.
2. Parties shall maintain status quo in the meanwhile."
AND WHEREAS, the matter above-mentioned was listed before **Ld. Registrar's** Court on **16th May, 2025,** When the following order was passed:-
"Despite service being complete, none has entered appearance for respondent nos.1 to 8, 15 to 17, 21, 42, 43, 46, 47, 57 and 58.
Four weeks time, as a last opportunity, is granted to respondent nos.19, 26, 33, 34, 41, 50 and 52 to 56 to file Counter Affidavit.
As per I. A. No. 123197/2025, Respondent no.9 namely Munirathnamma is same as Respondent nos.35 & 51 AND Respondent no.10 namely H. Shakunthala is same as Respondent nos.36 AND Respondent no.11 namely B. S. Narayana Setty is same as Respondnet nos.37. All these respondents are now deceased and their Lrs. are petitioners in this matter. As sought two weeks time, is granted to Ld. Counsel for the petitioner to file application for deletion in this regard.
As per I. A. No. 123197/2025 filed by Ld. Counsel for the petitioner, petition was abated against deceased respondent nos.13, 20 and 39 before High Court vide order dated 24.07.2023 but the same amendment was not done in the memo of parties, before this Court while filing SLP. As sought, two weeks time, is granted to Ld. Counsel for the petitioner to file application for deletion in this regard.
As submitted on 16.04.2025, Ld. Counsel for the petitioner has filed an application to serve unserved respondents by way of promulgation (I.A. No.93258/2025), which is not agitated by him. Hence, Ld. Counsel for the petitioner submits that he wish to withdraw the said application. In light of the submission made, withdrawal permitted.
Ld. Counsel for the petitioner has on 13.05.2025 e-filed amended application to serve respondent nos.12, 14, 18, 22 to 25, 27 to 32, 38, 40, 44, 45, 48 and 49 by way of promulgation alongwith an application for condonation of delay i.e. I.A. Nos. 123197 and 123200 of 2025. Delay is condoned and both the applications are hereby allowed for these respondents only. Four weeks time, is granted to Ld. Counsel for the petitioner to file Affidavit alongwith proof of publication in newspapers i.e., in "Prajavani (Regional Language) and in "Deccan Herald" (English Language) as mentioned in the application.
List again on 25.07.2025."
NOW, THEREFORE, TAKE NOTICE that the above petition with prayer for interim relief along with application for **EXEMPTION FROM FILING O.T., CONDONATION OF DELAY IN REFILING / CURING THE DEFECTS, PERMISSION TO FILE ADDITIONAL DOCUMENTS/ FACTS/ ANNEXURES** will be posted for hearing before this Court in due course and you may enter appearance before this Court either in person or through an advocate on record of this Court duly appointed by you in that behalf within **30 days** from the date of service of notice. You may thereafter show cause to the Court on the day that may subsequently be specified as to why delay in refiling SLP be not condoned and Special Leave Petition and interim relief as prayed be not granted and the resultant appeal be not allowed.
You may file your affidavit in opposition to the petition as provided under Rule 14(1) of Order XXI, S.C.R.2013 within 30 days from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.
TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated : 20th May, 2025 sd/- **ASSISTANT REGISTRAR**

Copy to :-
1 Mr. Abhishek Gautam (adv.)
2 Mr. Vikalp Mudgal (adv.)

sd/-
ASSISTANT REGISTRAR

Important Notice
LEGAL AID
(1) Legal Services of an advocate is provided by the Supreme Court Legal Services Committee and the Supreme Court Middle Income Group Legal Aid Society to eligible litigants.
For further information, please contact the Secretary, Supreme Court Legal Services Committee or the Member Secretary, Supreme Court Middle Income Group Legal Aid Society, 107-108, Lawyers' Chambers, R.K. Jain Block - Near Post Office, Supreme Court Compound, Tilak Marg, New Delhi-110001 (Tel Nos. 011-23116353,23116354 (Additional Building Complex) and 011-23381257 (Front Office))
MEDIATION
(2) The facility of amicable settlement of disputes by trained mediators in cases pending in the Supreme Court is now available in the Supreme Court.
For further information, please contact the Coordinator, Supreme Court Mediation Centre, 109, Lawyers' Chambers, R.K. Jain Block - Near Post Office, Supreme Court Compound, Tilak Marg, New Delhi-110001 (Tel No. 011-23071432)

₹2 ಲಕ್ಷ ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವ

ಹಸಿರು ಜಲಜನಕ ನೀತಿಗೆ ಆರಂಭದಲ್ಲೇ ತೊಡಕು

• ಭರತ್ ಜೋಶಿ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಕರ್ನಾಟಕ ಹಸಿರು ಜಲಜನಕ ನೀತಿ' (ಗ್ರೀನ್ ಹೈಡ್ರೋಜನ್ ಪಾಲಿಸಿ) ಅನುಷ್ಠಾನಕ್ಕೆ ಆರಂಭದಲ್ಲೇ ತೊಡಕು ಎದುರಾಗಿದೆ. ₹2 ಲಕ್ಷ ಕೋಟಿ ಮೊತ್ತದ ಹೂಡಿಕೆ ಪ್ರಸ್ತಾಪಗಳಿರುವ ಈ ನೀತಿ ಅನುಷ್ಠಾನಕ್ಕೆ ರಾಜ್ಯ ಸರ್ಕಾರದಿಂದ ಅನುಮತಿ ದೊರೆತಿಲ್ಲ.

'ಹಸಿರು ಜಲಜನಕ ಉತ್ಪಾದನೆಗೆ ಅಪಾರ ಪ್ರಮಾಣದ ಹೂಡಿಕೆ ಮತ್ತು ಮೂಲಸೌಕರ್ಯ ನಿರ್ಮಾಣ ಆಗಬೇಕಿದೆ. ಆದರೆ ಹೂಡಿಕೆ ಗಾತ್ರಕ್ಕೆ ಹೋಲಿಸಿದರೆ, ಅದು ಸೃಷ್ಟಿಸುವ ಉದ್ಯೋಗಗಳ ಸಂಖ್ಯೆ ತೀರಾ ಕಡಿಮೆ ಇದೆ. ಜತೆಗೆ ರಾಜ್ಯಕ್ಕೆ ದೊರೆಯುವ ಆದಾಯದ ಪ್ರಮಾಣವೂ ಕಡಿಮೆ' ಎಂಬುದು ರಾಜ್ಯ ಸರ್ಕಾರದ ಉನ್ನತ ಮೂಲಗಳ ಅಭಿಪ್ರಾಯ.

'ಈ ಕ್ಷೇತ್ರದಲ್ಲಿ ₹100 ಕೋಟಿ ಹೂಡಿಕೆ ಆದರೆ, ಅದರಿಂದ ಸೃಷ್ಟಿಯಾಗುವ ಉದ್ಯೋಗಗಳ ಸಂಖ್ಯೆ 15 ರಿಂದ 20 ಮಾತ್ರ. ಆದರೆ ಈಗ ಇರುವ ಪ್ರಸ್ತಾವಗಳನ್ನು ಪರಿಗಣಿಸಿದರೆ, ರಾಜ್ಯ ಸರ್ಕಾರ ₹20,000 ಕೋಟಿ ವೆಚ್ಚ ಮಾಡಬೇಕಾಗುತ್ತದೆ. ಆದರೆ ಅದರಿಂದ ರಾಜ್ಯಕ್ಕೆ, ರಾಜ್ಯದ ಜನತೆಗೆ ಹೆಚ್ಚಿನ ಲಾಭವಿಲ್ಲ' ಎಂದು ಮೂಲಗಳು ವಿವರಿಸಿವೆ.

ಈ ಬಗ್ಗೆ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, 'ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಯ ಅನುಪಾತವನ್ನು ಪರಿಶೀಲಿಸಲಾಗುತ್ತಿದೆ. ಉದ್ಯೋಗ ಸೃಷ್ಟಿಯ ಪ್ರಮಾಣ ಕಡಿಮೆ ಇದೆ. ಹಸಿರು ಜಲಜನಕ ರಫ್ತಿಗೆ ಉತ್ತಮ ಅವಕಾಶಗಳಿವೆ. ಆದರೆ ಇದಕ್ಕಾಗಿ ಮಧ್ಯ-ಉತ್ತರ ಕರ್ನಾಟಕದಿಂದ ಕರಾವಳಿ ಪ್ರದೇಶದವರೆಗೆ ವಿದ್ಯುತ್ ಜಾಲ ಮತ್ತಿತರ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಬೇಕಿದೆ' ಎಂದರು.

ಕಳೆದ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಮುಂದೂಡಿಕೆಯಾಗಿತ್ತು.

ಸರ್ಕಾರಿ ಶಾಲೆ ಮುಚ್ಚುವುದನ್ನು ವಿರೋಧಿಸಿ ಎಐಡಿಎಸ್‌ಒ ಬೆಂಗಳೂರು ನಗರ ಜಿಲ್ಲಾ ಘಟಕದ ಸದಸ್ಯರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಮುಂಭಾಗದಲ್ಲಿ ಭಾನುವಾರ ಸಾರ್ವಜನಿಕರಿಂದ ಸಹಿ ಸಂಗ್ರಹಿಸಿದರು

ಸರ್ಕಾರಿ ಶಾಲೆ ಮುಚ್ಚಲು ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಬ್ ಆ್ಯಂಡ್ ಸ್ಪೋಕ್ ಮಾದರಿಯಲ್ಲಿ 6,200 ಸರ್ಕಾರಿ ಶಾಲೆಗಳನ್ನು ಮುಚ್ಚುವ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್ (ಎಐಡಿಎಸ್‌ಒ) ಬೆಂಗಳೂರು ನಗರ ಘಟಕದ ನೇತೃತ್ವದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಮುಂಭಾಗದಲ್ಲಿ ಭಾನುವಾರ ಸಾರ್ವಜನಿಕರಿಂದ ಸಹಿ ಸಂಗ್ರಹಿಸಲಾಯಿತು.

ನಂತರ ಮಾತನಾಡಿದ ಎಐಡಿಎಸ್‌ಒ ಜಿಲ್ಲಾ ಘಟಕದ ಅಧ್ಯಕ್ಷೆ ಅಪೂರ್ವ ಸಿ.ಎಂ., '10ಕ್ಕಿಂತ ಕಡಿಮೆ ದಾಖಲಾತಿ ಹೊಂದಿರುವ ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರ ಖಂಡನೀಯ. ಸರ್ಕಾರಿ ಶಾಲೆಗಳನ್ನು ಮುಚ್ಚದಂತೆ ರಾಜ್ಯದಾದ್ಯಂತ 50 ಲಕ್ಷ ಸಹಿಗಳನ್ನು ಸಂಗ್ರಹಿಸುವ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ' ಎಂದು ತಿಳಿಸಿದರು.

'ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರವು ವಿದ್ಯಾರ್ಥಿಗಳು, ಹಿಂದುಳಿದ ಕುಟುಂಬಗಳ ಮಕ್ಕಳು ಮತ್ತು ವಿಶೇಷವಾಗಿ ಬಾಲಕಿಯರ ಮೇಲೆ ಪರಿಣಾಮ ಬೀರುತ್ತದೆ. ಇದು ಅವರ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುತ್ತದೆ. ಮುಚ್ಚುವ ಬದಲು, ಸರ್ಕಾರವು ಈ ಶಾಲೆಗಳಿಗೆ ಹೆಚ್ಚು ಅನುದಾನ ನೀಡಿ, ಅಗತ್ಯ ಮೂಲಸೌಕರ್ಯ ಒದಗಿಸಬೇಕು. ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡುವ ಮೂಲಕ ಅವುಗಳನ್ನು ಬಲಪಡಿಸಬೇಕು' ಎಂದು ಒತ್ತಾಯಿಸಿದರು.

ಎಐಡಿಎಸ್‌ಒ ಜಿಲ್ಲಾ ಘಟಕದ ಕಾರ್ಯದರ್ಶಿ ಕಲ್ಯಾಣ್ ಕುಮಾರ್ ವಿ. ಉಪಸ್ಥಿತರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

ST ALOYSIUS
(DEEMED TO BE UNIVERSITY)
Mangaluru 575003 - India
Re- accredited by NAAC with 'A++' Grade, 3.67/4 CGPA
Post Box No. 720, Mangaluru 575003 | www.staloysius.edu.in

St Aloysius (Deemed to be University) invites applications for both Teaching and Non-Teaching positions in the School of Engineering for the academic year 2025–2026:

Physics, Chemistry, Mathematics, Computer Science, Information Science, Artificial Intelligence & Machine Learning, Electronics and Communication, English, Mechanical (Visiting), Kannada (Visiting), Constitution (Visiting), System Admin, Instructor – Chemistry, Instructor – Physics, Instructor – Computer

Minimum Qualification:
Teaching: A Regular Master's Degree in the respective subjects with 55% marks and above. Applications with qualifications through distance mode will not be accepted. NET / KSET, Ph.D. with teaching experience preferred.
Non-Teaching: Diploma / Bachelors / Masters in the relevant field
- Recruitment as per AICTE / UGC regulatons
- Only Short listed candidates will be contacted

Applications should reach us on or before 10th June 2025
Email to – careers@staloysius.edu.in

MSME LOANS Available for any startup company, any existing Companies avail this opportunity contact-7204995189

Business to Business

Business

VIZAG (VISAKHAPATNAM) Biggest City of Andhra. Want to start Any Business/ Buy Apartments/ RE/ Schools Arranging Big Finances. Excellent Guidance. Radhika Projects/ Services. Dr Swamy Naidu:- 9342247637. Bangalore.

Accounts & Finance

WANTED FEMALE Office Assistant Any Degree Knowing Tally Fluent In English, Kannada, Hindi Around Rajajinagar Contact: 9108458798/ 9845579620

Graphic Designers

WANTED MALE/ Female Graphic Designer (Corel Draw Photoshop Illustrator) in Reputed Company around Rajajinagar Contact: 9108458798/ 9845579620

PUBLIC NOTICE

BUSINESS

Business Offers

Finance

NRI'S Investment And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

REAL ESTATE SELLING

Commerical

Tumkur

FOR SALE 32670 sqft Commercial Converted plot near Gubbi Gate Ring Road, Tumkur. Suitable for Choultary, Showroom, Nursing Home. Contact 9448794532

V.S. DENTAL COLLEGE & HOSPITAL
K.R.ROAD, V.V.PURAM, BENGALURU-04. Ph. No. 080-26618066, Fax: 08022426705
E-Mail: vsdchbangalore@gmail.com /www.vsdc.rvsangha.org

INVITATION FOR TENDER

Terms & Conditions of the Tender for the supply of Dental Materials / Orthodontics Materials / Hospital Consumables / Laboratory Materials / Reagents / Chemicals / Surgical Implants and Consumables for the year 2025-26 & 2026-27.

Ref: Tender notification VSDCH/ 1232/2024-25 **Dated: 07/04/2025**

1 The Principal, V.S.Dental College and Hospital, Bengaluru hereby invite tenders from PRIMARY MANUFACTURERS or IMPORT LICENSE HOLDERS (In case of Imported Drugs) or AUTHORISED DEALER For the supply of Dental Materials / Hospital Consumables / Laboratory Materials/ Reagents / Chemicals / Surgical Implants / Consumables & Other miscellaneous Hospital necessary items as detailed in **Annexure VI (A-F)** of this Tender, on Staggered supply Basis for two years. For PRIMARY **MANUFACTURERS / IMPORT** LICENSE HOLDERS **whose annual sales turnover is Rs. 1crore** per year **i.e. for** 2021-22, 2022-23, 2023-24 & for AUTHORIZED DEALER whose annual sales **turnover is Rs. 30 Lakhs** every year for 3 years i.e. for 2021-22, 2022-23, 2023-24.
2 The Tender forms are not transferable.
3 It may be noted that, Telegraphic/Fax quotation offer will not be accepted. Details can be obtained from the tender document
4 The Tender form may be purchased from Hospital Purchase section on payment of Rs. 2,500/- + 18% **GST=2950/-** (Rupees Two Thousand Nine Hundred Fifty only) non-refundable, through a DD in favour of " **V.S.Dental College and Hospital**, Bengaluru".
5 Sale of Tender forms from 28.05.2025 to 06.06.2025 during office hours.
6 Last date for submission of Quoted Tender documents before - 4.00 pm on 16.06.2025.
7 Tender should be quoted in hard copy duly signed on all pages in excel format and the same on non-erasable CD.
8 Tenders should be submitted only in the prescribed format issued by the VSDCH

Store Officer VSDCH | **PRINCIPAL VSDCH** | **Chairman VSDCH**

DH DECCAN HERALD **Classifieds** More value, more impact
EDUCATION
ಪ್ರಜಾವಾಣಿ
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

ಸಮರ್ಪಣಾ ಭಾವದ ಕಾಯಕದಿಂದ ಉತ್ತಮ ಸಮಾಜ: ಬಿ.ಎಸ್.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಯಕದಲ್ಲಿ ಸಮರ್ಪಣೆ ಹಾಗೂ ಶ್ರೇಷ್ಠ ಮನೋಭಾವ ಬೆರೆತಾಗ ಉತ್ತಮ ಸಮಾಜ ನಿರ್ಮಾಣವಾಗಲಿದೆ. ವಚನಕಾರರು ಇದನ್ನೇ ಕಾಯಕವೇ ಕೈಲಾಸ ಎಂದು ಕರೆದಿದ್ದಾರೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ತಿಳಿಸಿದರು.

ಅಮ್ಮ ಪ್ರಕಾಶನ ಸಂಸ್ಥೆಯ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಸವರಾಜ ಯಲಿಗಾರ ಅವರ 'ನನ್ನೊಳಗಿನ ನಾನು ನೀನೇ' (ಮೈ ಮೀ ಇಸ್ ಥಿ !) ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಸತತ ಪ್ರಯತ್ನ ಹಾಗೂ ಶ್ರಮದಿಂದ ಯಶಸ್ಸು ಸಾಧಿಸಲು ಸಾಧ್ಯ. ಹಾಗಾಗಿ ನಮ್ಮ ಗುರಿಯೊಂದಿಗೆ ಶ್ರೇಷ್ಠ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಗಳಾಗಬೇಕು. ಆಗ ಶ್ರೇಷ್ಠ ಭಾರತ ನಿರ್ಮಿಸಲು ಸಾಧ್ಯ' ಎಂದು ಸಲಹೆ ನೀಡಿದರು.

ಪೊಲೀಸ್ ವೃತ್ತಿಯ ಅನೇಕ ಜವಾಬ್ದಾರಿಗಳ ಮಧ್ಯೆಯೂ ಸಹ ಬಸವರಾಜ ಯಲಿಗಾರ ಅವರು ವಚನಗಳನ್ನು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಭಾಷಾಂತರಿಸಿ ಕೃತಿಯೊಂದನ್ನು ರಚಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಮಾತನಾಡಿ, 'ವಚನ ಸಾಹಿತ್ಯ ಕನ್ನಡ ಸಾಹಿತ್ಯದ ವಿಶಿಷ್ಟ ಕೊಡುಗೆಯಾಗಿದೆ. ಯಾವ ಭಾಷಾ ಸಾಹಿತ್ಯದಲ್ಲೂ ಈ ಪ್ರಕಾರವಿಲ್ಲ. ವಚನ ಸಾಹಿತ್ಯವು ಮನುಷ್ಯನನ್ನು ಮನುಷ್ಯನ ಹಾಗೆ ಕಾಣುವ ಕಾಣ್ಕೆಯನ್ನು ಜಗತ್ತಿಗೆ ನೀಡಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಚಿಂತಕ ಜಂಬುನಾಥ್ ಮಳಿಮಠ, ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ಕೆಎಸ್‌ಆರ್‌ಪಿ ಐಜಿಪಿ ಸಂದೀಪ ಪಾಟೀಲ್, ಶರಣ ಚಿಂತಕ ಮಹಾಂತೇಶ್ ಬಿರಾದಾರ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಪದ್ಮಿನಿ ನಾಗರಾಜು, ಬಿ. ನಾಗನಗೌಡ, ವೀರೇಶ್ ಹಿರೇಮಠ, ಫ್ಲಾರಿಡಾ ವಿಶ್ವವಿದ್ಯಾಲಯದ ಗಿಲ್‌ಬೆನ್ ಭಾಗವಹಿಸಿದ್ದರು.

ಬಿಎಂಟಿಸಿ ವಿದ್ಯಾರ್ಥಿ ಪಾಸ್: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಉಚಿತ/ರಿಯಾಯಿತಿ ದರದಲ್ಲಿ ಪ್ರಯಾಣಿಸಲು ವಿದ್ಯಾರ್ಥಿಗಳು ಪಾಸ್‌ಗಾಗಿ ಮೇ 26ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಿದವರಿಗೆ ಜೂನ್ 1ರಿಂದ ವಿದ್ಯಾರ್ಥಿ ಪಾಸ್‌ಗಳನ್ನು ವಿತರಣೆ ಮಾಡಲಾಗುವುದು. ಸೇವಾಸಿಂಧು ಪೋರ್ಟಲ್ https://sevasindhu.karnataka.gov.inನಲ್ಲಿ ಅರ್ಜಿ ನಮೂನೆ ಲಭ್ಯವಿದೆ. ಬೆಂಗಳೂರು ಒನ್ ಕೇಂದ್ರಗಳ ಮೂಲಕವು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ಒನ್ ಕೇಂದ್ರಗಳಲ್ಲಿ ಹಾಗೂ ಬಿಎಂಟಿಸಿಯ ಕೆಂಪೇಗೌಡ ಬಸ್ ನಿಲ್ದಾಣ, ಕೆಂಗೇರಿ ಟಿಟಿಎಂಸಿ, ಹೊಸಕೋಟೆ, ಎಲೆಕ್ಟ್ರಾನಿಕ್ ಸಿಟಿ ಘಟಕ -19, ಶಾಂತಿನಗರ ಟಿಟಿಎಂಸಿ, ಕೆಎಸ್‌ಆರ್‌ಟಿಸಿಯ ಆನೇಕಲ್ ಬಸ್ ನಿಲ್ದಾಣಗಳಲ್ಲಿ ಪಾಸ್ ವಿತರಿಸಲಾಗುವುದು.

ಶಕ್ತಿ ಯೋಜನೆಯಡಿ ವಿದ್ಯಾರ್ಥಿನಿಯರಿಗೆ ಸಾಮಾನ್ಯ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ಇದೆ. ಮಾಹಿತಿಗಾಗಿ ಸಂಸ್ಥೆಯ ಸಹಾಯವಾಣಿ ಸಂಖ್ಯೆ 080-22483777 ಸಂಪರ್ಕಿಸಬಹುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ 9606038256



ಆಜಾದ್ ನಗರ ರಸ್ತೆಯಲ್ಲಿ ಸುರಿದಿರುವ ಕಸ

'ರಸ್ತೆಯಲ್ಲಿನ ಕಸ ತೆರವುಗೊಳಿಸಿ'

ಬಿಬಿಎಂಪಿ ವ್ಯಾಪ್ತಿಯ ಆಜಾದ್ ನಗರದ 141ನೇ ವಾರ್ಡ್‌ನ ವಾಲ್ಮೀಕಿ ನಗರದ 2ನೇ ಮುಖ್ಯ ರಸ್ತೆಯಲ್ಲಿ ನಿತ್ಯ ಕಸ ಹಾಕಲಾಗುತ್ತಿದೆ. ರಾತ್ರಿ ಸಮಯದಲ್ಲಿ ವಾಹನಗಳ ಮೂಲಕ ಬಂದು ಕಸವನ್ನು ರಸ್ತೆಗೆ ಎಸೆದು ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಇದರ ಪಕ್ಕದಲ್ಲಿ ದೇವಸ್ಥಾನ, ಸರ್ಕಾರಿ ಪ್ರಾಥಮಿಕ ಶಾಲೆ ಇದ್ದು, ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ. ಈ ಭಾಗದಲ್ಲಿ ಪ್ರತಿದಿನ ಕಸ ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ.

ಸುಧಾಕರ್ ಕೆ., ವಾಲ್ಮೀಕಿ ನಗರ

'ರಸ್ತೆ ದುರಸ್ತಿಗೊಳಿಸಿ'

ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣದಿಂದ ಶೋಭಾ ಮತ್ತು ಪ್ರೆಸ್ಟೀಜ್ ಫ್ರೈಮ್ ರೋಸ್ ವಸತಿ ಸಮುಚ್ಚಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣದಿಂದ ಶೋಭಾ ಮತ್ತು ಪ್ರೆಸ್ಟೀಜ್ ಪ್ರೈಮ್ ರೋಸ್ ವಸತಿ ಸಮುಚ್ಚಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದು, ಸಂಪೂರ್ಣವಾಗಿ ಹದಗೆಟ್ಟಿದೆ. ಇಲ್ಲಿ ಪದೇ ಪದೇ ಒಂದಿಲ್ಲೊಂದು ಕಾಮಗಾರಿಯ ಹೆಸರಿನಲ್ಲಿ ರಸ್ತೆಯನ್ನು ಅಗೆದು, ದುರಸ್ತಿ ಮಾಡದೇ ಹಾಗೆಯೇ ಬಿಡಲಾಗುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಈ ರಸ್ತೆಯಲ್ಲಿನ ಬೀದಿ ದೀಪಗಳು ಬೆಳಗುತ್ತಿಲ್ಲ. ರಾತ್ರಿ ಸಮಯದಲ್ಲಿ ಹರವಿಜಯ ಮತ್ತು ಎಲಿಗಂಟ್ ವಸತಿ ಸಮುಚ್ಚಯಗಳ ನಿವಾಸಿಗಳು ಸೇರಿದಂತೆ ಸ್ಥಳೀಯರ ಓಡಾಟಕ್ಕೆ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು.

ವಾ. ಮುರಳೀಧರ, ಎಲಿಗಂಟ್ ನಿವಾಸಿ

ಉಲ್ಲಾಳು ಸಮೀಪದ ನಾಗದೇವನಹಳ್ಳಿಯಲ್ಲಿ ವಿದ್ಯುತ್ ಪರಿವರ್ತಕ ಇರುವ ಜಾಗದ ತಳಪಾಯ ಕುಸಿದಿರುವುದು

ವಿದ್ಯುತ್ ಪರಿವರ್ತಕ ಜಾಗ ಕುಸಿತ

ಯಶವಂತಪುರ ವಿಧಾನಸಭಾ ಕ್ಷೇತ್ರದ ಉಲ್ಲಾಳು ವಾರ್ಡ್‌ನ ನಾಗದೇವನಹಳ್ಳಿಯ ಪಾದಚಾರಿ ಮಾರ್ಗದಲ್ಲಿರುವ ವಿದ್ಯುತ್ ಪರಿವರ್ತಕ ಇರುವ ಜಾಗದ ತಳಪಾಯ ಕುಸಿದಿದೆ. ಇತ್ತೀಚೆಗೆ ಸುರಿದ ಭಾರಿ ಮಳೆಗೆ ಇದು ಕುಸಿದಿದ್ದು, ವಿದ್ಯುತ್ ಪರಿವರ್ತಕ ಬೀಳುವ ಸ್ಥಿತಿಯಲ್ಲಿದೆ. ಏನಾದರೂ ಅನಾಹುತ ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ಪ್ರಸನ್ನ ಕುಮಾರ್, ನಾಗದೇವನಹಳ್ಳಿ

ಕಬ್ಬನ್‌ಪೇಟೆಯ 15ನೇ ತಿರುವಿನ ರಸ್ತೆಯಲ್ಲಿ ಬಿದ್ದಿರುವ ಕಸ

'ಕಸದ ರಾಶಿ ತೆರವುಗೊಳಿಸಿ'

ಕಬ್ಬನ್‌ಪೇಟೆಯ 15ನೇ ತಿರುವಿನ ರಸ್ತೆಯಲ್ಲಿ ರಾಶಿಗಟ್ಟಲೆ ಕಸ ಹಾಕಲಾಗಿದೆ. ಹದಿನೈದು ದಿನಗಳಾದರೂ ಕಸ ವಿಲೇವಾರಿ ಮಾಡುತ್ತಿಲ್ಲ. ರಸ್ತೆಯಲ್ಲಿ ಕಸ ಹಾಕಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಜೊತೆಗೆ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಇಲ್ಲಿನ ಕಸ ತೆರವುಗೊಳಿಸಬೇಕು.

ಶಿವಪ್ರಸಾದ್, ಕಬ್ಬನ್‌ಪೇಟೆ

ಬಿಎಂಟಿಸಿ: ಬಿಡ್‌ದಾರರಿಂದ ನಿರಾಸಕ್ತಿ • ಮರು ಟೆಂಡರ್ ಕರೆಯಲು ನಿರ್ಧಾರ

ಸ್ಮಾರ್ಟ್ ಇಟಿಎಂ: ಟೆಂಡರ್ ರದ್ದು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ), ವಿಸಾ ಕಾರ್ಡ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಪ್ರಯಾಣದ ಟಿಕೆಟ್ ಖರೀದಿಸಲು ಅವಕಾಶ ನೀಡಲು ಬೇಕಿದ್ದ ಆಧುನಿಕ ಎಲೆಕ್ಟ್ರಾನಿಕ್ ಟಿಕೆಟ್ ಮಷಿನ್‌ಗಾಗಿ (ಇಟಿಎಂ) ಬಿಎಂಟಿಸಿ ಕರೆದಿದ್ದ ಟೆಂಡರ್ ಬಿಡ್‌ದಾರರ ನಿರಾಸಕ್ತಿಯಿಂದಾಗಿ ರದ್ದಾಗಿದೆ.

ಬಿಎಂಟಿಸಿಯಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಮಷಿನ್ ಈಗಾಗಲೇ ಇದೆ. ಕಾಗದದ ಟಿಕೆಟ್ ನೀಡುವ ವ್ಯವಸ್ಥೆಗೆ ಪರ್ಯಾಯವಾಗಿ ತಂದಿರುವ ಈ ಮಷಿನ್‌ನಲ್ಲಿ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್‌ಗಳನ್ನು ಬಳಸಿ ಟಿಕೆಟ್ ನೀಡುವ ವ್ಯವಸ್ಥೆ ಇಲ್ಲ. ಯುಪಿಐ ಆಧಾರಿತವಾಗಿ ಟಿಕೆಟ್ ನೀಡುವ ವ್ಯವಸ್ಥೆ ಬಿಎಂಟಿಸಿಯಲ್ಲಿ ಜಾರಿಯಲ್ಲಿದೆ. ಅದಕ್ಕಾಗಿ ಪ್ರತ್ಯೇಕವಾಗಿ ಕ್ಯೂಆರ್ ಕೋಡ್‌ಗಳನ್ನು ಬಸ್‌ಗಳಲ್ಲಿ ಅಂಟಿಸಲಾಗಿದೆ.

ಎಲ್ಲ ಸೌಲಭ್ಯಗಳು ಒಂದೇ ಮಷಿನ್‌ನಲ್ಲಿ ಸಿಗುವಂತಾಗಬೇಕು ಎಂಬ ಕಾರಣಕ್ಕೆ ಆ್ಯಂಡ್ರಾಯ್ಡ್ ಸೌಲಭ್ಯ ಇರುವ ಸ್ಮಾರ್ಟ್ ಇಟಿಎಂಗಳನ್ನು ಬಸ್ ನಿರ್ವಾಹಕರಿಗೆ ನೀಡಲು ನಿರ್ಧರಿಸಲಾಗಿತ್ತು. ಹೊಸ ಇಟಿಎಂನಲ್ಲಿ ಎನ್‌ಸಿಎಂಸಿ ಬಳಕೆಗೆ ಅವಕಾಶ ಇರುವುದರಿಂದ ಬಿಎಂಟಿಸಿ ಬಸ್ ಮತ್ತು ಮೆಟ್ರೊ ರೈಲಿನಲ್ಲಿ ಒಂದೇ ಕಾರ್ಡ್‌ನಲ್ಲಿ ಪ್ರಯಾಣಿಸಲು ಸಾಧ್ಯವಿತ್ತು.

ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಸ್ಮಾರ್ಟ್ ಇಟಿಎಂಗಳನ್ನು ಬಾಡಿಗೆ ಆಧಾರದಲ್ಲಿ ಪೂರೈಸಲು ಬಿಎಂಟಿಸಿ ಟೆಂಡರ್ ಕರೆದಿತ್ತು. ಬಿಡ್ ಸಲ್ಲಿಸಲು ಮೇ 13 ಕೊನೇ ದಿನಾಂಕವಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಬಿಡ್‌ದಾರರು ಪಾಲ್ಗೊಳ್ಳದ ಕಾರಣ ಟೆಂಡರ್ ರದ್ದು ಮಾಡಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನಗದುರಹಿತ ಟಿಕೆಟ್ ವ್ಯವಸ್ಥೆ ಜಾರಿ ಭಾಗವಾಗಿ ಸುಮಾರು 10 ಸಾವಿರ ಸ್ಮಾರ್ಟ್ ಇಟಿಎಂಗಳನ್ನು ಅಳವಡಿಸಲು ಮರು ಟೆಂಡರ್ ಕರೆಯಲಾಗುವುದು. ಒಮ್ಮೆ ಪೂರೈಕೆ ಆರಂಭವಾದ ನಂತರ ಹಂತಹಂತವಾಗಿ ಎಲ್ಲ ಬಸ್‌ಗಳಲ್ಲಿ ಸ್ಮಾರ್ಟ್ ಇಟಿಎಂ ವ್ಯವಸ್ಥೆ ಅನುಷ್ಠಾನಗೊಳಿಸಲಾಗುವುದು. ಟಿಕೆಟ್, ಚಿಲ್ಲರೆ ನೀಡಲು ಹೆಚ್ಚಿನ ಸಮಯ ಬೇಕಾಗುತ್ತಿದೆ. ಸುಧಾರಿತ ಸ್ಮಾರ್ಟ್ ಇಟಿಎಂ ಬಂದಾಗ ಈ ಸಮಸ್ಯೆಗಳು ತಪ್ಪಲಿವೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ತಿಳಿಸಿದರು.

ಸ್ಮಾರ್ಟ್ ಇಟಿಎಂ

ಕಿರಿಕಿರಿ ತಪ್ಪಿಸಲಿರುವ ಸ್ಮಾರ್ಟ್ ಇಟಿಎಂ

‘ನಗದುರಹಿತ ಟಿಕೆಟ್ ವ್ಯವಸ್ಥೆ ಜಾರಿಗಾಗಿ ಬಾಡಿಗೆ ಆಧಾರದಲ್ಲಿ 10 ಸಾವಿರ ಸುಧಾರಿತ ಆಧುನಿಕ ತಂತ್ರಜ್ಞಾನ ಇರುವ ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರ (ಇಟಿಎಂ) ಗಳನ್ನು ಬಿಎಂಟಿಸಿಯಲ್ಲಿ ಬಳಕೆಗೆ ಒದಗಿಸಲಾಗುವುದು. ಷರತ್ತುಗಳನ್ನು ಇನ್ನಷ್ಟು ಸರಳ ಮಾಡಿ ಮರು ಟೆಂಡರ್ ಕರೆಯಲಾಗುವುದು. ನಾಲ್ಕೈದು ತಿಂಗಳ ಒಳಗೆ ಇಟಿಎಂಗಳನ್ನು ನಿರ್ವಾಹಕರಿಗೆ ಒದಗಿಸಲಾಗುವುದು. ಟಿಕೆಟ್ ಮುದ್ರಣವಾಗಲು ತಡವಾಗುವ ಸಮಸ್ಯೆ ಹೊಸ ಸ್ಮಾರ್ಟ್ ಇಟಿಎಂ ಯಂತ್ರದಲ್ಲಿ ಇರುವುದಿಲ್ಲ. ಇದರಿಂದ ನಿರ್ವಾಹಕರಿಗೆ ಕಿರಿಕಿರಿ ಉಂಟಾಗುವುದಿಲ್ಲ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ತುಂತುರು ಮಳೆ

ಭಾನುವಾರ ತುಂತುರು ಮಳೆ ಸುರಿದ ಕಾರಣ ವಿಧಾನಸೌಧ ಮುಂದೆ ಜನ ಕೊಡೆ ಹಿಡಿದು ಸಾಗಿದರು – ಚಿತ್ರ: ಕಿಶೋರ್ ಕುಮಾರ್ ಬೋಳಾರ್

ತುಂತುರು ಮಳೆಯಿಂದ ರಕ್ಷಣೆ ಪಡೆಯಲು ಬಾಲಕನೊಬ್ಬ ಬ್ಯಾಗ್ ಅನ್ನೇ ತಲೆ ಮೇಲೆ ಇಟ್ಟುಕೊಂಡು ಸಾಗಿದ ದೃಶ್ಯ ನಗರದಲ್ಲಿ ಕಂಡುಬಂತು – ಚಿತ್ರ: ಎಸ್‌.ಕೆ. ದಿನೇಶ್

ನಗರದ ಮಣಿಪಾಲ ಆಸ್ಪತ್ರೆ ಹತ್ತಿರ ಭಾನುವಾರ ಮರ ಮುರಿದು ಬಿದ್ದಿದ್ದರಿಂದ ಎಚ್‌ಎಎಲ್ ಕಡೆಗೆ ಹೋಗುವ ರಸ್ತೆ ಬಂದ್ ಆಯಿತು

ನಗರದಲ್ಲಿ ಇಂದು

ಪ್ರಕೃತಿ ಕಲಾ ಮೂರನೇ ವಾರ್ಷಿಕೋತ್ಸವ, ಗೀತಗಾಯನ, ಕವಿಗೋಷ್ಠಿ, ನೃತ್ಯ, ಭರತನಾಟ್ಯ ಪ್ರದರ್ಶನ: ಉದ್ಘಾಟನೆ: ಶಿವನಂಜಪ್ಪ, ಅಧ್ಯಕ್ಷತೆ: ಎಸ್. ಅಂಬುಜಾ ಪ್ರಕಾಶ್, ಪ್ರಾಸ್ತಾವಿಕ ನುಡಿ: ಎಂ. ಶಿವಸ್ವಾಮಿ, ಅತಿಥಿಗಳು: ಜೆ.ಕೆ. ನಾಗಭೂಷಣ್, ಎಸ್.ಎಂ. ದಿನೇಶ್‌ಬಾಬು, ಆಯೋಜನೆ: ಪ್ರಕೃತಿ ಕಲಾ ವೇದಿಕೆ, ವಿಶ್ವ ಚೇತನ ಬಳಗ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9ರಿಂದ

ಪದವಿ ದಿನ: ಉದ್ಘಾಟನೆ: ಮಂಜುಶ್ರೀ, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯ್ಕ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಮಧ್ಯಾಹ್ನ 2

‘ಗಜೇಂದ್ರ ಮೋಕ್ಷ’ ಪ್ರವಚನ: ಹನುಮೇಶಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

‘ಮಾನವೀಯತೆ ಕಲಿಸದ ಓದಿಗೆ ಅರ್ಥವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಓದು ನಮ್ಮನ್ನು ಬದಲಾಯಿಸದಿದ್ದರೆ, ಮಾನವೀಯತೆ ಕಲಿಸದಿದ್ದರೆ ಆ ಓದಿಗೆ ಅರ್ಥ ಇರುವುದಿಲ್ಲ’ ಎಂದು ಲೇಖಕಿ ಸಂಧ್ಯಾರಾಣಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಾ. ದಾಮೋದರ ಶೆಟ್ಟಿ ಅವರ ‘ಕರಿಮಾಯಿ ಗುಡ್ಡ’, ಜಯಪ್ರಕಾಶ ಮಾವಿನಕುಳಿ ಅವರ ‘ಪ್ರಾಣಪಕ್ಷಿಯ ಅರಸುತ್ತಾ’, ಎನ್.ಸಿ. ಮಹೇಶ್ ಅವರ ‘ಅಗೆಲು’, ಕೆ.ಎಂ. ವಿಜಯಲಕ್ಷ್ಮಿ ಅವರು ಸಂಪಾದಿಸಿರುವ ‘ಪರ್ವತವಾಣಿ ಅವರ ಇಷ್ಟಾರ್ಥ ಮತ್ತು ಇತರ ನಾಟಕಗಳು’ ಹಾಗೂ ‘ಪರ್ವತವಾಣಿ ಅವರ ವಾರ್ಷಿಕೋತ್ಸವ ಮತ್ತು ಇತರ ನಾಟಕಗಳು’ ಪುಸ್ತಕಗಳು ಬಿಡುಗಡೆಯಾದವು.

ಈ ವೇಳೆ ಮಾತನಾಡಿದ ಸಂಧ್ಯಾರಾಣಿ, ‘ಓದಿನಿಂದ ನಮ್ಮನ್ನ ನಾವು ಬದಲಾಯಿಸಿಕೊಳ್ಳಬೇಕು. ಓದು ಉಳಿಯಲು ಕಣ್ಣು ಮತ್ತು ಮನಸ್ಸಿನ ನಡುವೆ ಜಾಗ ಇರಬೇಕು. ಅಸಹನೆ, ನಿಂದಿಸುವ ಗುಣವನ್ನೇ ರೂಢಿಸಿಕೊಂಡರೆ ಓದುವಿಕೆಗೆ ಅರ್ಥ ಇರುವುದಿಲ್ಲ. ನಮ್ಮ ಮೌಲ್ಯಗಳು ಓದಿನಿಂದ ಓದಿಗೆ, ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತವೆ. ಯಾವುದೇ ಕಾದಂಬರಿಯನ್ನು ಓದಿದ ನಂತರ ಅದು ನಮ್ಮನ್ನು ಪ್ರಶ್ನಿಸುತ್ತಾ ಇರಬೇಕು. ಹೀಗೆ ಕಾಡುವ ಪುಸ್ತಕಗಳು ನಮ್ಮನ್ನು ಉತ್ತಮ ಮನುಷ್ಯರನ್ನಾಗಿಸಲಿವೆ’ ಎಂದರು.

ಪತ್ರಕರ್ತ ಜೋಗಿ (ಗಿರೀಶ್ ರಾವ್ ಹತ್ವಾರ್), ‘ಕತೆಯನ್ನು ಓದುವಾಗ ಒಂದು ರೀತಿಯ ರೋಚಕತೆ ಇಲ್ಲದೇ ಹೋದರೆ ಓದುಗರನ್ನು ಹಿಡಿದಿಡುವುದು ಕಷ್ಟ. ಪುಸ್ತಕ ಓದುವ ಮೊದಲೇ ಆ ಕೃತಿಯ ಬಗ್ಗೆ ನಿರೀಕ್ಷೆ ಮಾಡುವುದು ಅಥವಾ ಈ ಲೇಖಕ ಹೀಗೆ ಬರೆಯುತ್ತಾನೆ ಎಂದು ಪ್ರತಿಕ್ರಿಯಿಸುವುದು ತಪ್ಪು’ ಎಂದು ಹೇಳಿದರು.

ಹಾಸ್ಯ ಸಾಹಿತಿ ಎಂ.ಎಸ್.ನರಸಿಂಹಮೂರ್ತಿ ಹಾಗೂ ಬಿಡುಗಡೆಯಾದ ಪುಸ್ತಕಗಳ ಲೇಖಕರು ಉಪಸ್ಥಿತರಿದ್ದರು.

ಚುಟುಕು ಸುದ್ದಿಗಳು

ಪ್ರಸನ್ನ ವೆಂಕಟರಮಣಸ್ವಾಮಿ ಬ್ರಹ್ಮರಥೋತ್ಸವ

ಬೆಂಗಳೂರು: ನಗರದ ಕೋಟೆಯಲ್ಲಿರುವ ಪ್ರಸನ್ನ ವೆಂಕಟರಮಣಸ್ವಾಮಿಯ ರಥೋತ್ಸವದ ಅಂಗವಾಗಿ ಮೇ 27ರಿಂದ ಜೂನ್ 13ರವರೆಗೆ ವಿವಿಧ ಉತ್ಸವಗಳು ನಡೆಯಲಿವೆ.

ಜೂನ್ 3ರಂದು ಬೆಳ್ಳಿ ಬ್ರಹ್ಮರಥೋತ್ಸವ ನಡೆಯಲಿದೆ. ಪ್ರತಿದಿನ ಸಂಜೆ 7ರಿಂದ 9ಗಂಟೆಯವರೆಗೆ ಉತ್ಸವಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಗಾಯನ ಸ್ಪರ್ಧೆಗೆ ಅರ್ಜಿ ಆಹ್ವಾನ



ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು ನಾದಯೋಗಿ ಭೈರವಿ ಕೆಂಪೇಗೌಡ ದತ್ತಿ ಆಶ್ರಯದಲ್ಲಿ 15ರಿಂದ 20 ವರ್ಷದ ಒಳಗಿನವರಿಗೆ ‘ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ’ ಹಮ್ಮಿಕೊಂಡಿದೆ.

ಕೆ. ಮೋಹನ್ ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ಅವರು ಈ ದತ್ತಿ ಸ್ಥಾಪಿಸಿದ್ದಾರೆ. ಸ್ಪರ್ಧೆಯು ಜೂನ್ 8ರಂದು ನಡೆಯಲಿದೆ. ಪ್ರಥಮ ಬಹುಮಾನ ₹4 ಸಾವಿರ, ದ್ವಿತೀಯ ಬಹುಮಾನ ₹3 ಸಾವಿರ ಹಾಗೂ ತೃತೀಯ ಬಹುಮಾನ ₹2 ಸಾವಿರ ನಗದು ಒಳಗೊಂಡಿದೆ.

ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಯಸುವವರು ಜೂನ್ 5ರ ಸಂಜೆ 5 ಗಂಟೆಯೊಳಗೆ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಅರ್ಜಿಗಳು ಪ್ರತಿಷ್ಠಾನದ ಕಚೇರಿಯಲ್ಲಿ ದೊರೆಯುತ್ತವೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಸಂಪರ್ಕಕ್ಕೆ: 9972812127

31 ಮಂದಿ ವಶಕ್ಕೆ, ವಿಚಾರಣೆ

ರೇವ್ ಪಾರ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕಿನ ಕನ್ನಮಂಗಲ ಗೇಟ್ ಸಮೀಪದ ಖಾಸಗಿ ಜಮೀನಿನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ದೇವನಹಳ್ಳಿ ಪೊಲೀಸರು ಭಾನುವಾರ ಬೆಳಿಗ್ಗೆ ದಾಳಿ ಮಾಡಿದ್ದಾರೆ.

ದೇವನಹಳ್ಳಿ ಎಸಿಪಿ ನವೀನ್ ನೇತೃತ್ವದ ತಂಡ ದಾಳಿ ನಡೆಸಿ, ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಯುವಕ, ಯುವತಿಯರನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದೆ.

‘ಕನ್ನಮಂಗಲ ಗೇಟ್ ಬಳಿಯ ಫಾರ್ಮ್ ಹೌಸ್‌ನಲ್ಲಿ ಪಾರ್ಟಿ ನಡೆಯುತ್ತಿರುವ ಖಚಿತ ಮಾಹಿತಿ ಮೇರೆಗೆ ದೇವನಹಳ್ಳಿ ಪೊಲೀಸರು ಬೆಳಗಿನ ಜಾವ 5 ಗಂಟೆಯಲ್ಲಿ ದಾಳಿ ನಡೆಸಿದ್ದಾರೆ. ಪರಿಶೀಲನೆ ನಡೆಸಿದಾಗ ವ್ಯಕ್ತಿಯೊಬ್ಬರ ಜನ್ಮ ದಿನದ ಅಂಗವಾಗಿ ಪಾರ್ಟಿ ಆಯೋಜನೆ ಮಾಡಲಾಗಿತ್ತು ಎಂದು ತಿಳಿದು ಬಂದಿದೆ. ಮಾದಕ ವಸ್ತುಗಳನ್ನು ಬಳಕೆ ಮಾಡಿರುವುದು ಕಂಡು ಬಂದಿದೆ. 24 ಯುವಕರು, 7 ಯುವತಿಯರು ಸೇರಿದಂತೆ ಒಟ್ಟು 31 ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಪಾರ್ಟಿಯಲ್ಲಿ ಡ್ರಗ್ ಪೆಡ್ಲರ್ ಹಾಗೂ ಮಾದಕ ವಸ್ತು ಸೇವನೆ ಮಾಡುವವರು ಭಾಗವಹಿಸಿದ್ದರು. 31 ಜನರ ರಕ್ತ ಮತ್ತು ಮೂತ್ರದ ಮಾದರಿ ಸಂಗ್ರಹಿಸಿ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಪಾರ್ಟಿಯಲ್ಲಿ ಭಾಗವಹಿಸಿದ ಕೆಲವರಲ್ಲಿ ಅಲ್ಪ ಪ್ರಮಾಣದ ಕೊಕೇನ್ ಸೇರಿದಂತೆ ಮಾದಕ ವಸ್ತುಗಳು ಸಿಕ್ಕಿದ್ದು, ಜಪ್ತಿ ಮಾಡಲಾಗಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲು ಮಾಡಲಾಗಿದೆ’ ಎಂದು ಈಶಾನ್ಯ ವಲಯ ಡಿಸಿಪಿ ವಿ.ಜೆ. ಸಜಿತ್ ತಿಳಿಸಿದ್ದಾರೆ.

ಹಲವು ಮಸೂದೆಗಳಿಗೆ ಅಂಕಿತ ಮುಖ್ಯಮಂತ್ರಿ – ರಾಜ್ಯಪಾಲ ಚರ್ಚೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು:ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ರಾಜಭವನದಲ್ಲಿ ಭಾನುವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿ ಹಿಂದಿರುಗಿಸಿದ್ದ, ಮುಸ್ಲಿಂ ಸಮುದಾಯಕ್ಕೆ ಗುತ್ತಿಗೆಯಲ್ಲಿ ಶೇ 4 ಮೀಸಲು ಕಲ್ಪಿಸಲು ಅವಕಾಶ ನೀಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕತೆ (ಕೆಟಿಟಿಪಿ) ತಿದ್ದುಪಡಿ ಮಸೂದೆಯನ್ನು ಪುನರ್ ಪರಿಶೀಲಿಸುವಂತೆ ಕೋರಿ ಮತ್ತೊಮ್ಮೆ ರಾಜ್ಯಪಾಲರಿಗೆ ಕಳುಹಿಸಲಾಗಿದೆ.

ಇದೇ ವೇಳೆ ಮುಜರಾಯಿ ಇಲಾಖೆಯ ವ್ಯಾಪ್ತಿಯ ಶ್ರೀಮಂತ ದೇವಸ್ಥಾನಗಳಲ್ಲಿ ಸಂಗ್ರಹವಾಗುವ ‘ಸಾಮಾನ್ಯ ಸಂಗ್ರಹಣಾ ನಿಧಿ’ಯನ್ನು ಆದಾಯ ಇಲ್ಲದಿರುವ ‘ಸಿ’ ವರ್ಗದ ದೇವಸ್ಥಾನಗಳಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆಯನ್ನು ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿ ರಾಜ್ಯಪಾಲರು ಹಿಂದಿರುಗಿಸಿದ್ದಾರೆ. ಆ ಬೆನ್ನಲ್ಲೆ ಇಬ್ಬರ ಭೇಟಿ ಕುತೂಹಲ ಮೂಡಿಸಿದೆ.

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆಯನ್ನೂ ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿ ರಾಜ್ಯಪಾಲರು ಸರ್ಕಾರಕ್ಕೆ ವಾಪಸ್ ಮಾಡಿದ್ದಾರೆ.

ಕೇಂದ್ರಕ್ಕೆ ವ್ಯತಿರಿಕ್ತವಾಗಿರದ ಮತ್ತು ರಾಜ್ಯಕ್ಕೆ ಸಂಬಂಧಿಸಿದ ಕಾಯ್ದೆಗಳ ತಿದ್ದುಪಡಿಗೆ ರೂಪಿಸಿದ ಮಸೂದೆಗಳನ್ನು ರಾಷ್ಟ್ರಪತಿಯ ಅನುಮೋದನೆಗೆ ಕಳುಹಿಸುವ ಅಗತ್ಯ ಇಲ್ಲವೆಂದು ತಮಿಳುನಾಡು ಸರ್ಕಾರ ಮತ್ತು ಅಲ್ಲಿನ ರಾಜ್ಯಪಾಲರ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿತ್ತು. ಈ ಕಾರಣಕ್ಕೆ ಈ ಎರಡೂ ಮಸೂದೆಗಳನ್ನು ಕೂಡಾ ಪುನರ್ ಪರಿಶೀಲಿಸುವಂತೆ ಕೋರಿ ಮತ್ತೊಮ್ಮೆ ರಾಜ್ಯಪಾಲರಿಗೆ ಕಳುಹಿಸಲು ಸಂಸದೀಯ ಇಲಾಖೆ ಮುಂದಾಗಿದೆ.

‘ಅನುದಾನ ಬಿಡುಗಡೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ, 2025–26ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಈವರೆಗೆ ಹಣ ಬಿಡುಗಡೆಯಾಗಿಲ್ಲ. ಪರಿಣಾಮವಾಗಿ ಸಾಮಗ್ರಿ ವೆಚ್ಚ ಮತ್ತು ಕೂಲಿ ಭರಿಸಲು ತೊಡಕು ಎದುರಾಗಿದೆ. ಕೂಡಲೇ ಅನುದಾನವನ್ನು ಬಿಡುಗಡೆ ಮಾಡಿ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದಿರುವ ಪ್ರಿಯಾಂಕ್ ಖರ್ಗೆ, ‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈವರೆಗೆ ಸಾಮಗ್ರಿ ವೆಚ್ಚ ಮತ್ತು ಅನುದಾನ ಬಿಡುಗಡೆಯಾಗಿಲ್ಲ. ಪರಿಣಾಮವಾಗಿ ₹787.20 ಕೋಟಿ ಮೊತ್ತದ ಬಿಲ್‌ಗಳು ಬಾಕಿಯಾಗಿವೆ. ಜತೆಗೆ ₹600 ಕೋಟಿಯಷ್ಟು ವೇತನ ಪಾವತಿಯಾಗಿಲ್ಲ. ಈ ಅಂಶವನ್ನು ಗಮನದಲ್ಲಿ ಇರಿಸಿಕೊಂಡು ಬಾಕಿ ಇರುವ ವೇತನ, ಸಾಮಗ್ರಿ ಮತ್ತು ಆಡಳಿತಾತ್ಮಕ ನಿಧಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಗ್ರಾಮೀಣ ಕುಟುಂಬಗಳಿಗೆ ಜೀವನೋಪಾಯದ ಭದ್ರತೆ ಒದಗಿಸುವಲ್ಲಿ ಈ ಯೋಜನೆಯು ಮಹತ್ವದ ಪಾತ್ರ ವಹಿಸಿದೆ. ರಾಜ್ಯ ಸರ್ಕಾರವು ಯೋಜನೆಯ ಅನುಷ್ಠಾನಕ್ಕೆ ಬದ್ಧವಾಗಿದೆ. ಈವರೆಗೆ ಕೈಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಬಳಕೆ ಪ್ರಮಾಣಪತ್ರಗಳು ಮತ್ತು ದಾಖಲೆಗಳನ್ನು ನಿಮ್ಮ ಸಚಿವಾಲಯಕ್ಕೆ ಸಲ್ಲಿಸಿದ್ದೇವೆ. ಹೀಗಿದ್ದೂ ಹಣ ಬಿಡುಗಡೆಯಾಗಿಲ್ಲ’ ಎಂದು ವಿವರಿಸಿದ್ದಾರೆ.

‘ಈ ಎಲ್ಲ ಅಂಶಗಳನ್ನು ಪರಿಗಣಿಸಿ, ಬಾಕಿ ಇರುವ ಅನುದಾನವನ್ನು ನೀವು ಬಿಡುಗಡೆ ಮಾಡುತ್ತೀರಿ ಎಂಬುದಾಗಿ ನಿರೀಕ್ಷಿಸಿದ್ದೇವೆ’ ಎಂದು ಹೇಳಿದ್ದಾರೆ.

ಲಾಲ್‌ಬಾಗ್: ಮೂರು ದಿನಗಳ ‘ಸಾವಯವ ಮಾವು– ಹಲಸು ಮೇಳ’ ಸಂಪನ್ನ

ಗಮನ ಸೆಳೆದ ಬೀಜ ರಹಿತ ಹಲಸಿನ ತಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಜಿನ ತುಂಬಾ ಹತ್ತಾರು ತಳಿಗಳ ಹಲಸಿನ ಹಣ್ಣುಗಳನ್ನು ಸಾಲಾಗಿ ಜೋಡಿಸಲಾಗಿತ್ತು. ಇವುಗಳ ನಡುವೆ ಅರ್ಧ ಕೊಯ್ದು ಇಟ್ಟಿದ್ದ ಬೀಜ ರಹಿತ ಹಲಸಿನ ಹಣ್ಣಿನ ಮೇಲೆಯೇ ಎಲ್ಲರ ಕಣ್ಣು ನೆಟ್ಟಿದ್ದವು...

ಲಾಲ್‌ಬಾಗ್‌ನಲ್ಲಿ ಭಾನುವಾರ ಸಂಪನ್ನಗೊಂಡ ಮೂರು ದಿನಗಳ ಸಾವಯವ ಮಾವು- ಹಲಸು ಮೇಳದಲ್ಲಿಟ್ಟಿದ್ದ ತರಹೇವಾರಿ ಹಲಸಿನ ತಳಿಗಳ ಹಣ್ಣುಗಳ ನಡುವೆ ಹೆಚ್ಚು ಜನರ ಕಣ್ಸೆಳೆದಿದ್ದು ಈ ಬೀಜ ರಹಿತ ಹಲಸಿನ ಹಣ್ಣು. ಜೈವಿಕ್ ಕೃಷಿಕ್ ಸೊಸೈಟಿ ಮತ್ತು ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಈ ಮೇಳವನ್ನು ಆಯೋಜಿಸಲಾಗಿತ್ತು.

ಬಣ್ಣ ಬಣ್ಣದ, ಅಂಟಿಲ್ಲದ ಹಲಸಿನ ನಡುವೆ, ಬೀಜರಹಿತ ಹಲಸು ಜನರಿಗೆ ಅಚ್ಚರಿ ಮೂಡಿಸಿತು. ‘ಈ ಹಲಸಿನಲ್ಲಿ ಅಂಟು ತುಸು ಕಡಿಮೆ. ರುಚಿಯೂ ಬಲು ಸೊಗಸು’ ಎಂದರು ಮೇಳದ ಆಯೋಜಕರಲ್ಲಿ ಒಬ್ಬರಾದ ಜೈವಿಕ್ ಕೃಷಿ ಸೊಸೈಟಿಯ ಕೆ. ರಾಮಕೃಷ್ಣಪ್ಪ. ಬೀರೂರಿನ ಅನ್ನಪೂರ್ಣ ನರ್ಸರಿಯವರು ಬೀಜರಹಿತ ಹಲಸಿನ ಹಣ್ಣನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ದೇವನಹಳ್ಳಿಯ ತೇಜ ನರ್ಸರಿಯವರೂ ಈ ಹಲಸಿನ ತಳಿಗಳ ಗಿಡಗಳನ್ನು ಮಾರಾಟಕ್ಕಿಟ್ಟಿದ್ದರು.

‘ಇದು ಥಾಯ್ಲೆಂಡ್‌ನ ತಳಿ. ಐದಾರು ವರ್ಷಗಳ ಹಿಂದೆ ಇಲ್ಲಿ ಪರಿಚಯವಾಯಿತು. ಇತ್ತೀಚೆಗೆ ಹೆಚ್ಚು ಚರ್ಚೆಯಲ್ಲಿದೆ. ಈ ಗಿಡದ ಬೆಳವಣಿಗೆ ಚೆನ್ನಾಗಿದೆ. ಆದರೆ ಕಾಯಿ ಬಿಡುವುದು ಸ್ವಲ್ಪ ನಿಧಾನ. ಕೆಲವರು ತೋಟಗಳಲ್ಲಿ ಒಂದೋ ಎರಡೋ ಗಿಡಗಳನ್ನು ಹಾಕಿಕೊಳ್ಳುತ್ತಿದ್ದಾರೆ’ ಎಂದು ತೇಜ ನರ್ಸರಿಯ ಶಿವನಾಪುರ ರಮೇಶ್ ವಿವರಿಸಿದರು.

ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಮೇಳದಲ್ಲಿ ಹಲಸು – ಮಾವಿನ ತಳಿಗಳ ವೈವಿಧ್ಯದ ಪ್ರದರ್ಶನ

ಹಲಸಿನ ವೈವಿಧ್ಯ

ಬೀಜರಹಿತ ಹಲಸಿನ ಹಣ್ಣು

ಪ್ರದರ್ಶನಕ್ಕಿಟ್ಟಿದ್ದ ಲಾಲ್‌ಬಾಗ್ ಮಧುರ, ಬೈರಸಂದ್ರ, ಸಿದ್ದು, ಶಂಕರ ಸೇರಿದಂತೆ 60 ಹಲಸಿನ ತಳಿಗಳು, 85ಕ್ಕೂ ಅಧಿಕ ಮಾವಿನ ತಳಿಗಳ ಹಣ್ಣುಗಳಿದ್ದವು. 15 ವಿವಿಧ ತಳಿಗಳ ಅಪ್ಪೆ ಮಿಡಿ ನೋಡುಗರ ಗಮನಸೆಳೆದವು. ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ಕೆಂಪು ಹಲಸಿನ ಹಣ್ಣಿಗೆ ಬೇಡಿಕೆ ಹೆಚ್ಚಾಗಿತ್ತು. ಎರಡನೇ ದಿನಕ್ಕೆ ಎಲ್ಲ ಖಾಲಿಯಾಯಿತು. ಮೇಳದಲ್ಲಿ ಸುಮಾರು 15 ಟನ್ ಹಲಸು ಮತ್ತು ಸುಮಾರು 13 ಟನ್ ಮಾವಿನ ಹಣ್ಣುಗಳು ಮಾರಾಟವಾದವು. ಹಲಸಿನ ಐಸ್ ಕ್ರೀಂ, ಮಿಲ್ಕ್ ಶೇಕ್, ಹಪ್ಪಳ, ಚಿಪ್ಸ್ ರುಚಿಗೆ ಗ್ರಾಹಕರು ಮನಸೋತರು.

ಮಂಡ್ಯ ಜಿಲ್ಲೆಯ ಕಿರುವಾಗಿಲಿನ ಟಿಪ್ಪು ಸುಲ್ತಾನ್ ಬಡಾ ಬಾಗ್ ತೋಟದ ಐತಿಹಾಸಿಕ ಮಾವಿನ ತಳಿಗಳು, ದುಬಾರಿ ಬೆಲೆಯ ಮಿಯಾಜಾಕಿ ಮಾವು ಮೇಳದ ಮತ್ತೊಂದು ಆಕರ್ಷಣೆ. ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ಹೊಸ ಮಾವಿನ ತಳಿಗಳು ಸಾರ್ವಜನಿಕರ ಗಮನ ಸೆಳೆದವು. ಬೆಳವಲ ತೋಟದ ಸೋಲೊ ಪಪ್ಪಾಯ, ಸ್ಟಾರ್ ಫ್ರೂಟ್ ಮತ್ತು ಜೀರಿಗೆ ಮಾವಿನ ರುಚಿ ಸವಿದು ಜನರು ಖುಷಿ ಪಟ್ಟರು.

ಕೊಡಗಿನ ಭಾಗಮಂಡಲದ ತ್ರಿವೇಣಿ ಸಂಗಮ ಭರ್ತಿಯಾಗಿ, ಪುಷ್ಪೋದ್ಯಾನ ಜಲಾವೃತಗೊಂಡಿದೆ (ಎಡಚಿತ್ರ) ರಸ್ತೆ ಬದಿ ಮಣ್ಣು ಕುಸಿದಿದ್ದರಿಂದ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ಹೆದ್ದಾರಿಯಲ್ಲಿ ವಾಹನಗಳು ಸಾಲುಗಟ್ಟಿದ್ದವು

ರಸ್ತೆಗಳು, ಸೇತುವೆಗಳು ಜಲಾವೃತ • ಉಕ್ಕಿಹರಿದ ನದಿಗಳು; ಜಲಾಶಯಗಳಿಗೆ ಒಳಹರಿವು ಹೆಚ್ಚಳ

ಮುಂಗಾರು ಆರಂಭದಲ್ಲೇ ಮಳೆಯ ಅಬ್ಬರ

ಪ್ರಜಾವಾಣಿ ವಾರ್ತೆ

ಮೈಸೂರು/ಮಡಿಕೇರಿ: ರಾಜ್ಯದ ಹಲವೆಡೆ ಭಾನುವಾರ ಜಿಟಿಜಿಟಿ ಮಳೆಯಾಗಿದ್ದರೆ, ಕೆಲವೆಡೆ ಮಳೆ ಅಬ್ಬರಿಸಿ ಸುರಿದಿದೆ. ರಸ್ತೆಗಳು, ಸೇತುವೆಗಳು ಜಲಾವೃತವಾಗಿದೆ, ಜಲಾಶಯಗಳು ಮೈದುಂಬುತ್ತಿವೆ.

ಮೈಸೂರು ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಭಾನುವಾರ ಇಡೀ ದಿನ ಜಿಟಿಜಿಟಿ ಮಳೆ ಬಿದ್ದಿತು. ಹುಣಸೂರು ತಾಲ್ಲೂಕಿನ ಹನಗೋಡು –ಪಂಚವಳ್ಳಿ ಮುಖ್ಯ ರಸ್ತೆ ಸಂಚಾರ ಬಂದ್ ಆಗಿದ್ದು, ಹೆಬ್ಬಾಳ ಗ್ರಾಮದ ಸೇತುವೆ ಮೇಲೆ ನೀರು ಹರಿಯಿತು. ಇದರಿಂದಾಗಿ ಕೆಲ ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿದೆ.

ಚಾಮರಾಜನಗರ ಜಿಲ್ಲೆಯಾದ್ಯಂತ ಶನಿವಾರ ಮಧ್ಯಾಹ್ನದಿಂದ ಬಿರುಗಾಳಿ ಸಹಿತ ಮಳೆ ಸುರಿಯಿತು. ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ, ಹನೂರು ತಾಲ್ಲೂಕುಗಳಲ್ಲಿಉತ್ತಮಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಕಳೆದೆರಡು ದಿನಗಳಲ್ಲಿ 197 ವಿದ್ಯುತ್ ಕಂಬಗಳು ಬಿದ್ದಿದ್ದು, ಮಡಿಕೇರಿ ನಗರ ಸೇರಿದಂತೆ ಜಿಲ್ಲೆಯ ಹಲವು ಭಾಗಗಳು ಕತ್ತಲಲ್ಲಿ ಮುಳುಗಿವೆ. ಮಡಿಕೇರಿಗೆ ಕುಡಿಯುವ ನೀರು ಪೂರೈಸುವ ಕೂಟುಹೊಳೆ ಕೂಡ ಇದೇ ಮೊದಲಿಗೆ ಮೇನಲ್ಲೇ ಭರ್ತಿಯಾಗಿ ಕೋಡಿ ಬಿದ್ದಿದೆ.

ಮಡಿಕೇರಿ ತಾಲ್ಲೂಕು ಬಲಮುರಿಯಲ್ಲಿ ಕಿರು ಸೇತುವೆ ಸಂಪೂರ್ಣ ಜಲಾವೃತಗೊಂಡಿದೆ. ಮತ್ತೊಂದು ಸೇತುವೆ ಇರುವುದರಿಂದ ಸಂಚಾರಕ್ಕೆ ತೊಂದರೆಯಾಗಿಲ್ಲ.

ಸೋಮವಾರಪೇಟೆ ತಾಲ್ಲೂಕಿನ ಮಲ್ಲಳ್ಳಿ ಜಲಪಾತಕ್ಕೆ ಹೆಚ್ಚಿನ ನೀರು ಹರಿದು ಬರುತ್ತಿದೆ.

ಹಾಸನ ವರದಿ: ಸಕಲೇಶಪುರ ತಾಲ್ಲೂಕಿನಲ್ಲಿ ಹೆಚ್ಚಿನ ಮಳೆಯಾಗಿದೆ. ಸಕಲೇಶಪುರ ಬಸ್ ನಿಲ್ದಾಣದ ಬಳಿ ಹೋಟೆಲ್‌ನ ಗೋಡೆ ಕುಸಿದು, ಮೂವರು ಮಹಿಳೆಯರು ಹಾಗೂ ಒಬ್ಬ ವ್ಯಕ್ತಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಭಾರಿ ಗಾಳಿಯೊಂದಿಗೆ ಮುಸಲಧಾರೆಯಾಗಿದ್ದು ಗ್ರಾಮೀಣ ಭಾಗದ ಹಲವು ಪ್ರದೇಶಗಳು ಜಲಾವೃತವಾಗಿವೆ.

ಮೂಡಿಗೆರೆ ತಾಲ್ಲೂಕಿನ ಬಣಕಲ್ ಸಮೀಪದ ರಾಮಣ್ಣನ ಗಂಡಿ ಮತ್ತು ಚಕ್ಕಮಕ್ಕಿ ಎಂಬಲ್ಲಿ ಎರಡು ಕಾರುಗಳು ಹೇಮಾವತಿ ಉಪನದಿಗೆ ಉರುಳಿದ್ದವು. ಕಾರಿನಲ್ಲಿದ್ದ ಎಲ್ಲರನ್ನೂ ಸ್ಥಳೀಯರು ರಕ್ಷಿಸಿದರು. ಇದೇ ರಸ್ತೆಯಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡ ಮತ್ತೊಂದು ಕಾರು ಹೆದ್ದಾರಿಯ ರಸ್ತೆ ಪಕ್ಕಕ್ಕೆ ಉರುಳಿದೆ. ಕಾರಿನಲ್ಲಿದ್ದ ಯಾರಿಗೂ ತೊಂದರೆಯಾಗಿಲ್ಲ.

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ನಗರಸಭೆಯ ಆವರಣ ಗೋಡೆ ಕುಸಿದು ಬಿದ್ದಿದೆ. ಕಲ್ಲು ಮತ್ತು ಮಣ್ಣು ಬಿದ್ದು ಎರಡು ಆಟೊಗಳಿಗೆ ಹಾನಿಯಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರ, ಬ್ರಹ್ಮಾವರ, ಹೆಬ್ರಿ, ಕಾರ್ಕಳ, ಕಾಪು, ಬೈಂದೂರು ವ್ಯಾಪ್ತಿಯಲ್ಲೂ ಗಾಳಿ ಸಹಿತ ಮಳೆಯಾಗಿದೆ. ಕೆಲವು ಪ್ರದೇಶಗಳು ಜಲಾವೃತವಾಗಿವೆ.

ರಾಯಚೂರು ವರದಿ: ರಾಯಚೂರು: ಜಿಲ್ಲೆಯ ವಿವಿಧೆಡೆ ಮಧ್ಯಾಹ್ನ ಹಾಗೂ ಸಂಜೆ ಸಾಧಾರಣ ಮಳೆಯಾಗಿದೆ. ನಗರದ ಪ್ರಮುಖ ಬೀದಿಗಳಲ್ಲಿ ರಸ್ತೆ ಮೇಲೆ ನೀರು ಹರಿಯಿತು. ಸಿಂಧನೂರು, ಸಿರವಾರ, ಕವಿತಾಳ, ಲಿಂಗಸುಗೂರು, ಹಟ್ಟಿಚಿನ್ನದಗಣಿ, ದೇವದುರ್ಗ ತಾಲ್ಲೂಕಿನಲ್ಲೂ ಸಾಧಾರಣ ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯಾದ್ಯಂತ ಭಾನುವಾರ ಮಳೆ ಸುರಿದಿದೆ.

ಗಾಳಿಯ ತೀವ್ರತೆ– ಕಡಲ ತೀರದಲ್ಲಿ ಕಟ್ಟೆಚ್ಚರ

ಹುಬ್ಬಳ್ಳಿ: ಧಾರವಾಡ, ಗದಗ, ಬೆಳಗಾವಿ, ಹೊಸಪೇಟೆ ಸೇರಿದಂತೆ ಹಲವೆಡೆ ಮಳೆಯಾಗಿದ್ದು ಉತ್ತರ ಕನ್ನಡ ಜಿಲ್ಲೆಯಾದ್ಯಂತ ಗಾಳಿ ಮಳೆಯ ಅಬ್ಬರ ಮುಂದುವರಿದಿದ್ದು, ಮುರುಡೇಶ್ವರ, ಕಾರವಾರ, ಗೋಕರ್ಣ ಕಡಲತೀರಕ್ಕೆ ಜನರು ತೆರಳದಂತೆ ನಿರ್ಬಂಧಿಸಲಾಗಿದೆ.

ಕರಾವಳಿಯಲ್ಲಿ ಗಾಳಿಯ ಅಬ್ಬರದಿಂದಾಗಿ ಸಮುದ್ರದಲ್ಲಿ ರಭಸದ ಅಲೆಗಳು ಅಪ್ಪಳಿಸುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಭಟ್ಕಳ ತಾಲ್ಲೂಕಿನ ಮುರುಡೇಶ್ವರ ಕಡಲತೀರಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ಬ್ಯಾರಿಕೇಡ್ ಗಳನ್ನು ಹಾಕಲಾಗಿದೆ.

ವಿಜಯನಗರ ಜಿಲ್ಲೆಯಲ್ಲಿ ತುಂಗಭದ್ರಾ ಜಲಾಶಯಕ್ಕೆ 3,178 ಕ್ಯುಸೆಕ್‌ನಷ್ಟು ಒಳಹರಿವು ಇದೆ. ಸದ್ಯ ಜಲಾಶಯದಲ್ಲಿ 10.70 ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹವಾಗಿದೆ. ವಿಜಯಪುರ ಜಿಲ್ಲೆ ಆಲಮಟ್ಟಿ ಜಲಾಶಯಕ್ಕೆ ಭಾನುವಾರ ಒಂದೇ ದಿನ 34,939 ಕ್ಯುಸೆಕ್ ನೀರು ಹರಿದು ಬಂದಿದೆ.

7,500 ಕ್ಯೂಸೆಕ್ ನೀರು ತುಂಗಾ ನದಿಗೆ

ಶಿವಮೊಗ್ಗ: ಮಲೆನಾಡಿನಲ್ಲಿ ಸುರಿಯುತ್ತಿರುವ ಮುಂಗಾರು ಪೂರ್ವ ಮಳೆಗೆ ಗಾಜನೂರಿನ ತುಂಗಾ ಜಲಾಶಯ ಭರ್ತಿಯಾಗಿದೆ. ಭಾನುವಾರ ಜಲಾಶಯದ 5 ಕ್ರಸ್ಟ್ ಗೇಟ್‌ಗಳ ಮೂಲಕ ನೀರನ್ನು ನದಿಗೆ ಹರಿಸಲಾಯಿತು.

ಜೊತೆಗೆ, ಇಲ್ಲಿನ ಪವರ್ ಹೌಸ್ ಮೂಲಕ 5,000 ಕ್ಯೂಸೆಕ್ ನೀರು ಹರಿಸಲಾಗುತ್ತಿದ್ದು, ಒಟ್ಟು 7,500 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

3.24 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ತುಂಗಾ ಜಲಾಶಯದ ಗರಿಷ್ಠ ಮಟ್ಟ 588.24 ಮೀಟರ್ ಇದ್ದು, ಭಾನುವಾರ ಬೆಳಿಗ್ಗೆ ವೇಳೆಗೆ ಭರ್ತಿಯಾಗಿದೆ. ಜಲಾಶಯಕ್ಕೆ 2,500 ಕ್ಯೂಸೆಕ್ ಒಳಹರಿವು ಇದ್ದು, ಮಳೆಯ ಪ್ರಮಾಣ ಹೆಚ್ಚಿದರೆ, ಜಲಾಶಯದ ಉಳಿದ ಕ್ರಸ್ಟ್ ಗೇಟ್‌ಗಳ ಮೂಲಕ ಇನ್ನೂ ಅಧಿಕ ಪ್ರಮಾಣದ ನೀರು ಹರಿಸಲಾಗುವುದು. ಜಲಾಶಯದ ತಗ್ಗು ಪ್ರದೇಶದ ಜನರು ಎಚ್ಚರದಿಂದ ಇರಬೇಕು ಎಂದು ತುಂಗಾ ಜಲಾಶಯದ ಕಾರ್ಯ ನಿರ್ವಾಹಕ ಎಂಜಿನಿಯರ್ ತಿಪ್ಪಾನಾಯ್ಕ 'ಪ್ರಜಾವಾಣಿ'ಗೆ ತಿಳಿಸಿದರು.

ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಲಿಂಗನಮಕ್ಕಿ ಜಲಾಶಯದ ಒಳಹರಿವಿನಲ್ಲಿ ಏರಿಕೆ ಕಂಡಿದೆ. 10,900 ಕ್ಯೂಸೆಕ್ ಒಳ ಹರಿವು ಇದೆ. ಕಳೆದ 24 ಗಂಟೆಯಲ್ಲಿ ನೀರಿನ ಮಟ್ಟ 0.35 ಅಡಿಗಳಷ್ಟು ಏರಿಕೆಯಾಗಿದೆ.

ರಾಜ್ಯದೆಲ್ಲೆಡೆ ಹರ್ಷ ಮೂಡಿಸಿದ ಮಳೆ

ಒಂದನೇ ಪುಟದಿಂದ...

ಶಿರಾಡಿ ಘಾಟ್‌ನ ದೋಣಿಗಲ್ ಬಳಿ ರಸ್ತೆ ಪಕ್ಕದ ಮಣ್ಣು ಕುಸಿಯುತ್ತಿದ್ದು, ಮೇಲ್ಭಾಗದಲ್ಲಿರುವ ಕಾಫಿ, ಸಿಲ್ವರ್ ಹಾಗೂ ಇತರ ಮರಗಳು ಬೇರು ಸಮೇತ ನೆಲಕ್ಕುರುಳಿವೆ. ರಸ್ತೆಯಲ್ಲಿ ಮಣ್ಣು ಬಿದ್ದಿದ್ದರಿಂದ ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ವಾಹನ ಸಂಚಾರ ಸ್ಥಗಿತವಾಗಿತ್ತು. ಮಣ್ಣು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಭಾನುವಾರ ಭಾರಿ ಗಾಳಿಯೊಂದಿಗೆ ಮುಸಲಧಾರೆಯಾಗಿದ್ದು ಗ್ರಾಮೀಣ ಭಾಗದ ಹಲವು ಪ್ರದೇಶಗಳು ಜಲಾವೃತ ವಾಗಿವೆ. ಚಿಕ್ಕಮಗಳೂರು ಮೂರು ಕಡೆ ಕಾರುಗಳು ಹಳ್ಳಕ್ಕೆ ಉರುಳಿವೆ. ಆಟೋರಿಕ್ಷಾದ ಮೇಲೆ ಮರ ಬಿದ್ದು ಚಾಲಕ ಮೃತಪಟ್ಟಿದ್ದಾರೆ. ಕೊಪ್ಪ ತಾಲ್ಲೂಕಿನ ಭೈರೆದೇವರು ಗ್ರಾಮದ ಶಿಡ್ಲೆಮನೆಯ ಆಟೋ ಚಾಲಕ ರತ್ನಾಕರ ಹೆಗ್ಡೆ (45) ಮೃತಪಟ್ಟವರು.

ಸುದ್ದಿ 2 ನಿಮಿಷ

'ಬೇಡ ಜಂಗಮ ನಾಶವಾಗಿದೆ, ಎಸ್‌ಸಿ ಪಟ್ಟಿಯಿಂದ ತೆಗೆಯಿರಿ'

ಬಳ್ಳಾರಿ: 'ಬೇಡ ಜಂಗಮ ಎಂಬ ಜಾತಿಯೇ ಅಸ್ತಿತ್ವದಲ್ಲಿಲ್ಲ. ನಾಶವಾಗಿ ಹೋಗಿದೆ. ಆ ಹೆಸರಿನಿಂದ ಪರಿಶಿಷ್ಟ ಜಾತಿಗೇ ಅನ್ಯಾಯವಾಗುತ್ತಿದೆ. 'ಬೇಡ ಜಂಗಮ'ವನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಿಂದಲೇ ತೆಗೆಯಬೇಕು' ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ಭಾನುವಾರ ಮಾತನಾಡಿದ ಅವರು, 'ಬೇಡ ಜಂಗಮ ಎಂದರೆ ಆಂಧ್ರದ ಅಲೆಮಾರಿಗಳು. ಮಾದಿಗರ ಮನೆಯಲ್ಲಿ ಬೇಡಿಕೊಂಡು ತಿನ್ನುತ್ತಿದ್ದವರು. ಈ ಹೆಸರಲ್ಲಿದ್ದ 'ಬೇಡ' ಪದವನ್ನು ಮತ್ತು 'ಜಂಗಮ' ಎಂಬ ಪದವನ್ನು ದುರ್ಬಳಕೆ ಮಾಡಿಕೊಂಡು, ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ವೀರಶೈವ, ಲಿಂಗಾಯತರು ಪರಿಶಿಷ್ಟ ಜಾತಿಯೊಳಗೆ ಬರುತ್ತಿದ್ದಾರೆ' ಎಂದರು.

'ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳಿವೆ. ಉಪಜಾತಿಗಳು ಸೇರಿದರೆ 180 ಆಗುತ್ತದೆ. ಆದರೆ, 80–90 ಜಾತಿಗಳು ಅಸ್ತಿತ್ವದಲ್ಲೇ ಇರಲಿಲ್ಲ. 1931ರ ಮಿಲ್ಲರ್ ಆಯೋಗ ಈ ಜಾತಿಗಳನ್ನು ಪಟ್ಟಿ ಮಾಡಿತ್ತು. ಅದು ಈಗ ಅವಾಸ್ತವವಾಗಿದೆ. ಬೇಡ ಜಂಗಮ ಎಂಬ ಜಾತಿಯೇ ನಾಶವಾಗಿ ಹೋಗಿದೆ. ಬುಡುಗ ಜಂಗಮರು ಮಾತ್ರ ಇದ್ದಾರೆ. ಒಬ್ಬರೋ, ಇಬ್ಬರಿಗಾಗಿ ಇಡೀ ಪರಿಶಿಷ್ಟ ಜಾತಿಗೆ ಕೆಟ್ಟದು ಮಾಡಬೇಕೆ?' ಎಂದರು.

'ಒಳಮೀಸಲಾತಿ ಜಾರಿಯಾಗಬೇಕಿದ್ದರೆ, ನಮಗೆ ನ್ಯಾಯ ಸಿಗಬೇಕಿದ್ದರೆ ಪರಿಶಿಷ್ಟರು ತಮ್ಮ ಮೂಲ ಜಾತಿಗಳನ್ನು ಸರಿಯಾಗಿ ನಮೂದಿಸಬೇಕು. ಸಮೀಕ್ಷೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು' ಎಂದೂ ಅವರು ಖಾರವಾಗಿ ನುಡಿದರು.

ಕಾಂಗ್ರೆಸ್ ಕಚೇರಿಗೆ ಬೆಂಕಿ: ಮಾಜಿ ಅಧ್ಯಕ್ಷೆ ಉಚ್ಚಾಟನೆ

ಯಾದಗಿರಿ: ನಗರದ ಕನಕ ವೃತ್ತದ ಸಮೀಪದ ಜಿಲ್ಲಾ ಕಾಂಗ್ರೆಸ್ ಕಚೇರಿ ಕಟ್ಟಡದ ಬಾಗಿಲು ಮತ್ತು ಕಿಟಕಿಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಮಂಜುಳಾ ಗೂಳಿ ಅವರನ್ನು ಪಕ್ಷದಿಂದ ಉಚ್ಚಾಟಿಸಿ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಆದೇಶ ಹೊರಡಿಸಿದ್ದಾರೆ.

ಆರೋಪಿಗಳಲ್ಲಿ ಒಬ್ಬರಾಗಿರುವ, ಈಗ ಬಂಧನದಲ್ಲಿರುವ ಉಪನ್ಯಾಸಕ ಶಂಕರ ಗೂಳಿ ಉಚ್ಚಾಟಿತ ಮಂಜುಳಾ ಅವರ ಪತಿ.

ಹಲವು ವರ್ಷಗಳಿಂದ ಜಿಲ್ಲಾ ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದ ಮಂಜುಳಾ ಗೂಳಿ ಅವರ ಸ್ಥಾನಕ್ಕೆ ನಿಲೋಫರ್ ಬಾದಲ್ ಅವರನ್ನು ನೇಮಿಸಲಾಗಿತ್ತು. ಇದರಿಂದ ಆಕ್ರೋಶಗೊಂಡ ಪತಿ ಶಂಕರ ಜಿಲ್ಲಾ ಕಾಂಗ್ರೆಸ್ ಕಚೇರಿ ಕಟ್ಟಡಕ್ಕೆ ಬೆಂಕಿ ಹಚ್ಚಿದ್ದರು. ಇನ್ನೊಬ್ಬ ಆರೋಪಿ ಬಾಬುಗೌಡ ಆಗತೀರ್ಥ ನಾಪತ್ತೆಯಾಗಿದ್ದು, ಆತನ ಬಂಧನಕ್ಕೆ ಜಾಲ ಬೀಸಲಾಗಿದೆ.

ಮೈಸೂರಿನ ಎಂಜಿನಿಯರುಗಳ ಸಂಸ್ಥೆಯಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್', 'ಮಹಾಬೆಳಕು ಸಂಸ್ಥೆ' ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 'ಮಕ್ಕಳಿಗಾಗಿ ಅಂಬೇಡ್ಕರ್' ಒಂದು ದಿನದ ಕಮ್ಮಟವನ್ನು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರು ಫೋಟೊಕ್ಕೆ ಪುಷ್ಪನಮನ ಸಲ್ಲಿಸಿ ಉದ್ಘಾಟಿಸಿದರು. ಸಿ.ಎಸ್‌.ಪೂರ್ಣಿಮಾ, ಆರ್‌.ಮಂಗಳಾ, ಅಹಿಂದ ಜವರಪ್ಪ, ಕೃಷ್ಣಮೂರ್ತಿ ಚಮರಂ, ಕಾತ್ಯಾಯಿನಿ ಯಶೋಮಿತ್ರ, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಎಂ.ವೆಂಕಟಸ್ವಾಮಿ, ರಾಘವೇಂದ್ರ ಅಪುರಾ, ಎಂ.ಕೆ.ಸಾಹೇಬ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ದೆಹಲಿ, ಕೇರಳ, ಮಹಾರಾಷ್ಟ್ರದಲ್ಲಿ ವರ್ಷಧಾರೆ

ನವದೆಹಲಿ (ಪಿಟಿಐ): ರಾಜಧಾನಿ ದೆಹಲಿ ಹಾಗೂ ಕೇರಳದಲ್ಲಿ ಶನಿವಾರ ರಾತ್ರಿಯಿಂದ ಶುರುವಾದ ಭಾರಿ ಮಳೆಯು ಭಾನುವಾರವೂ ಮುಂದುವರಿದಿದೆ. ಹಲವು ಕಡೆಗಳಲ್ಲಿ ವಿದ್ಯುತ್ ಕಂಬ ಹಾಗೂ ಮರಗಳು ಬುಡ ಸಮೇತ ಉರುಳಿಬಿದ್ದಿವೆ.

ರಾಜಸ್ಥಾನ, ಮಹಾರಾಷ್ಟ್ರ, ಹರಿಯಾಣ ಹಾಗೂ ಪಂಜಾಬ್ ರಾಜ್ಯಗಳ ಹಲವೆಡೆ ಭಾನುವಾರ ವ್ಯಾಪಕವಾಗಿ ಮಳೆ ಸುರಿದಿದೆ.

ವಾಡಿಕೆಗಿಂತ ಮೊದಲೇ ಕೇರಳ ಪ್ರವೇಶಿಸಿರುವ ಮುಂಗಾರು, ರಾಜ್ಯದ ಎಲ್ಲೆಡೆ ನಿರಂತರವಾಗಿ ಮಳೆ ಸುರಿಯುಂತೆ ಮಾಡಿದೆ. ಮುಂಗಾರು ಮಾರುತವು ಮಹಾರಾಷ್ಟ್ರವನ್ನೂ ಪ್ರವೇಶಿಸಿದ್ದು, ಕೊಂಕಣದಲ್ಲಿ ಭಾರಿ ಮಳೆ ಸುರಿಯುತ್ತಿದೆ. ಈಶಾನ್ಯ ರಾಜ್ಯಗಳಿಗೆ ಕೂಡ ಮುಂಗಾರು ಪ್ರವೇಶ ಆಗಿದೆ.

'ದೆಹಲಿಯ ಬವಾನಾ, ಘೋಘಾ ಗ್ರಾಮ, ಸೆಕ್ಟರ್ 25 ರೋಹಿಣಿ, ಡಿಎಸ್‌ಐಐಡಿಸಿ ನರೇಲಾ, ಸುಲ್ತಾನ್‌ಪುರಿ, ಸೆಕ್ಟರ್ 22 ರೋಹಿಣಿ, ಕರಾಲಾ, ಬದ್ಲಿ, ಸಿರ್ಸಾಪುರ್, ಅವಂತಿಕಾ, ಮಂಗೋಲ್‌ಪುರಿ, ಆರ್. ಯು.ಬ್ಲಾಕ್ ಪೀತಾಂಪುರ ಹಾಗೂ ರಿಠಾಲಾ ಗ್ರಾಮಗಳು ಹಾಗೂ ಉತ್ತರ ದೆಹಲಿಯ ಹಲವೆಡೆಗಳಲ್ಲಿ ವಿದ್ಯುತ್ ವ್ಯತ್ಯಯಗೊಂಡಿದೆ' ಎಂದು ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಿಡಿಎಲ್) ತಿಳಿಸಿದೆ.

ಮಳೆಯಿಂದ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಯಿತು.

'ನಗರದಲ್ಲಿ ಗಂಟೆಗೆ 92 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಶನಿವಾರ ರಾತ್ರಿ 11.30ರಿಂದ ಭಾನುವಾರ ಬೆಳಿಗ್ಗೆ 5.30ರವರೆಗೆ ದೆಹಲಿಯಲ್ಲಿ 8.1 ಸೆ.ಮೀ. ಮಳೆ ಸುರಿದಿರುವುದು ದಾಖಲಾಗಿದೆ' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಕೇರಳದಲ್ಲಿ ವರ್ಷಧಾರೆ: ಕೇರಳಕ್ಕೆ ಈ ವರ್ಷ ಮೇ 24ರಂದೇ ನೈರುತ್ಯ ಮುಂಗಾರು ಪ್ರವೇಶಿಸಿದ್ದು, ಭಾನುವಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ವ್ಯಾಪಕ ಮಳೆಯಾಗಿದೆ. ಕಳೆದ ವರ್ಷ ಭೂಕುಸಿತಕ್ಕೆ ಸಾಕ್ಷಿಯಾಗಿದ್ದ ವಯನಾಡ್‌ನ ಚೂರಲ್‌ಮಲದಲ್ಲಿ ನಿರಂತರ ಮಳೆಯಾಗುತ್ತಿದ್ದು, ಸ್ಥಳೀಯರಲ್ಲಿ ತೀವ್ರ ಕಳವಳ ಉಂಟುಮಾಡಿದೆ.

ಮುಂಡಕ್ಕೈ ಮತ್ತು ಚೂರಲ್‌ಮಲದಲ್ಲಿ ಹಾದುಹೋಗುವ ಪುನ್ನಪುಳ ನದಿಯು ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿದ್ದು, ತಗ್ಗು ಪ್ರದೇಶದ ನಿವಾಸಿಗಳು ಆತಂಕದಲ್ಲಿ ದಿನ ಕಳೆಯುತ್ತಿದ್ದಾರೆ.

ಕೋಯಿಕ್ಕೋಡ್, ಕಾಸರಗೋಡು ಜಿಲ್ಲೆಯ ಹಲವೆಡೆ ಮರಗಳು ಉರುಳಿಬಿದ್ದಿವೆ. ಕೊಲ್ಲಂ ಪಟ್ಟಣದ ಹೃದಯಭಾಗದಲ್ಲಿ ದೊಡ್ಡದಾದ ಫ್ಲೆಕ್ಸ್ ರಸ್ತೆಗೆ ಉರುಳಿಬಿದ್ದಿದ್ದು, ಭಾರಿ ಅನಾಹುತವೊಂದು ಸ್ವಲ್ಪದರಲ್ಲಿ ತಪ್ಪಿದೆ.

ದೆಹಲಿ ವಿಮಾನ ನಿಲ್ದಾಣದಲ್ಲಿ ಚಾವಣಿ ಕುಸಿತ

ನವದೆಹಲಿ (ಪಿಟಿಐ): ದೆಹಲಿ ವಿಮಾನ ನಿಲ್ದಾಣದಲ್ಲಿನ ಒಂದನೆಯ ಟರ್ಮಿನಲ್‌ನಲ್ಲಿ ಪ್ರಯಾಣಿಕರು ಬರುವಲ್ಲಿ ಇರುವ ಚಾವಣಿಯು ಭಾರಿ ಮಳೆ ಮತ್ತು ಗಾಳಿಗೆ ಸಿಲುಕಿ ಭಾನುವಾರ ಭಾಗಶಃ ಕುಸಿದುಬಿದ್ದಿದೆ ಎಂದು ಮೂಲವೊಂದು ಹೇಳಿದೆ.

ಇಲ್ಲಿನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ (ಐಜಿಐಎ) ಒಂದನೆಯ ಟರ್ಮಿನಲ್‌ಅನ್ನು ವಿಮಾನಗಳ ಕಾರ್ಯಾಚರಣೆಗೆ ಈಚೆಗಷ್ಟೇ ಮುಕ್ತಗೊಳಿಸಲಾಗಿದೆ. ಐಜಿಐಎ ದೇಶದ ಅತಿದೊಡ್ಡ ಹಾಗೂ ಅತ್ಯಂತ ಹೆಚ್ಚು ಕಾರ್ಯಾಚರಣೆ ಇರುವ ವಿಮಾನ ನಿಲ್ದಾಣವೂ ಹೌದು.

ಮಕ್ಕಳಿಗಾಗಿ ಅಂಬೇಡ್ಕರ್ –'ಪ್ರಜಾವಾಣಿ' ಸಹಯೋಗದಲ್ಲಿ ಕಮ್ಮಟ

'ಎ ಫಾರ್ ಅಂಬೇಡ್ಕರ್ ಎನ್ನಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಇನ್ನು ಮುಂದೆ ಮಕ್ಕಳಿಗೆ ಎ ಫಾರ್ ಆ್ಯಪಲ್ ಅಲ್ಲ, ಎ ಫಾರ್ ಅಂಬೇಡ್ಕರ್ ಎನ್ನುವುದನ್ನು ಕಲಿಸಬೇಕು. ಆಗ, ನಾವು ಊಹಿಸಲಾರದಷ್ಟು ರುಚಿಯ ಹಣ್ಣನ್ನು ಅವರಿಗೆ ಉಣಬಡಿಸಿದಂತಾಗುತ್ತದೆ' ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಸಲಹೆ ನೀಡಿದರು.

ಇಲ್ಲಿನ ಎಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಮೂಹವು 'ಮಹಾಬೆಳಕು ಸಂಸ್ಥೆ' ಸಹಯೋಗದಲ್ಲಿ 8ರಿಂದ 12ನೇ ತರಗತಿ ಮಕ್ಕಳಿಗಾಗಿ ಭಾನುವಾರ ಆಯೋಜಿಸಿದ್ದ 'ಮಕ್ಕಳಿಗಾಗಿ ಅಂಬೇಡ್ಕರ್' ಒಂದು ದಿನದ ಕಮ್ಮಟ ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರಬುದ್ಧ ಭಾರತ ನಿರ್ಮಾಣಕ್ಕೆ ಪ್ರಬುದ್ಧ ಮಕ್ಕಳ ಪೀಳಿಗೆಯ ನಿರ್ಮಾಣ ಅಗತ್ಯ. ಅಂಬೇಡ್ಕರ್ ಬರಹಗಳನ್ನು ಓದಿದರೆ ಪ್ರಪಂಚದ ಚರಿತ್ರೆಯ ಕಿಟಕಿಯೊಂದು ತೆರೆದುಕೊಳ್ಳುತ್ತದೆ. ಹೇಗೆ ಅಧ್ಯಯನ ಮಾಡಬೇಕೆಂಬುದಕ್ಕೆ ಅವರೇ ಮಾದರಿ. ಮಕ್ಕಳು ನಿತ್ಯ ಒಂದು ಪುಟವಾದರೂ ಅವರ ಬದುಕು- ಬರಹಗಳ ಕುರಿತು ಓದಬೇಕು' ಎಂದರು.

'ಅಂಬೇಡ್ಕರ್ ಕಿಂಗ್ ಲಿಯರ್ ನಾಟಕವನ್ನು ನಿರ್ದೇಶಿಸಿದ್ದರು. ವಿಮೋಚನಾ ಬರವಣಿಗೆಯಲ್ಲದೆ ಸೃಜನಶೀಲ ಬರವಣಿಗೆ ಮಾಡಿದ್ದರೆ, ಟಾಲ್‌ಸ್ಟಾಯ್ ಹೆಗಲ ಮೇಲೆ ಕೈ ಹಾಕಿಕೊಂಡು ಹೋಗುವಂಥ ಸನ್ನಿವೇಶವಿರುತ್ತಿತ್ತು' ಎಂದರು.

'ಇಂದಿನ ಪೀಳಿಗೆಗೆ ಅಂಬೇಡ್ಕರ್ ಹತ್ತಿರವಾಗುತ್ತಿದ್ದಾರೆ. ಈ ಮಕ್ಕಳ ಮೂರನೇ ತಲೆಮಾರಿಗೆ ಬಾಬಾಸಾಹೇಬರು ಪ್ರತಿನಿತ್ಯದ ದೀವಿಗೆ ಆಗುತ್ತಾರೆ' ಎಂದು ಆಶಿಸಿದರು.

ವೈವಿಧ್ಯಮಯ ಚಟುವಟಿಕೆ: ಕಮ್ಮಟದಲ್ಲಿ ಅಂಬೇಡ್ಕರ್ ಬದುಕಿನ ವಿವಿಧ ಘಟ್ಟಗಳ ಕುರಿತು ಸಾಕ್ಷ್ಯಚಿತ್ರ ಪ್ರದರ್ಶನ, ಕಿರು ಉಪನ್ಯಾಸಗಳು ಚಿತ್ರಕಲೆ ಸ್ಪರ್ಧೆ, ಗುಂಪು ಚಟುವಟಿಕೆಗಳು ನಡೆದವು. ಅಂಬೇಡ್ಕರ್ ಕುರಿತ ಹಾಡುಗಳ ಗಾಯನ ಹಾಗೂ ರಸಪ್ರಶ್ನೆಯೂ ನಡೆಯಿತು. ಕಮ್ಮಟದಲ್ಲಿ ಪಾಲ್ಗೊಂಡವರಿಗೆ 'ಮಕ್ಕಳಿಗಾಗಿ ಸಂವಿಧಾನ' ಕೃತಿಯನ್ನು ಉಚಿತವಾಗಿ ನೀಡಲಾಯಿತು.

ಸಚಿವರ ಅಳಿಯ ಸೇರಿ ಐವರ ವಿರುದ್ಧ ಎಫ್‌ಐಆರ್

₹25 ಕೋಟಿ ವರ್ಕ್ ಆರ್ಡರ್ ಆಮಿಷ; ₹1.21 ಕೋಟಿ ಪಡೆದು ವಂಚನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ₹20 ಕೋಟಿ ಹಾಗೂ ರಾಜ್ಯ ಸರ್ಕಾರದ ₹5 ಕೋಟಿಯ (ಒಟ್ಟು ₹25 ಕೋಟಿ) ಟೆಂಡರ್‌ಗಳ ವರ್ಕ್ ಆರ್ಡರ್(ಕಾರ್ಯಾದೇಶ) ಕೊಡಿಸುವುದಾಗಿ ನಂಬಿಸಿ ಉಪಗುತ್ತಿಗೆದಾರನಿಂದ ₹1.21 ಕೋಟಿ ಪಡೆದು ವಂಚಿಸಿದ ಆರೋಪದಡಿ ರಾಜ್ಯ ಸಚಿವರೊಬ್ಬರ ಅಳಿಯ ಸೇರಿ ಐವರ ವಿರುದ್ಧ ನಗರದ ಸೈಬರ್, ಆರ್ಥಿಕ ಮತ್ತು ಮಾದಕವಸ್ತು ತಡೆ (ಸೆನ್) ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪಗುತ್ತಿಗೆದಾರ ನೀಡಿದ ದೂರಿನ ಅನ್ವಯ ಕಲಬುರಗಿಯ ಲಕ್ಷ್ಮಿಕಾಂತ ಕಟ್ಟಿಮನಿ, ರಾಯಚೂರಿನ ಸಂತೋಷ ನಾಯಕ, ಕಿರಣ್, ಬೆಂಗಳೂರಿನ ಶ್ರೀಧರ ಹಾಗೂ ಕೊಪ್ಪಳದ ರವಿ ಮಾಲಿಪಾಟೀಲ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ದೂರುದಾರರು ಜಲಜೀವನ್ ಮಿಷನ್ ಕಾಮಗಾರಿಗಳ ಉಪಗುತ್ತಿಗೆಯನ್ನು ಪಡೆದು ಅವುಗಳ ಕೆಲಸ ಮಾಡುತ್ತಿದ್ದರು. ಕೆಲ ವರ್ಷಗಳಿಂದ ಪರಿಚಯಸ್ಥನಾಗಿದ್ದ ಲಕ್ಷ್ಮಿಕಾಂತ, ತನಗೆ ದೊಡ್ಡ ದೊಡ್ಡ ಅಧಿಕಾರಿಗಳು, ರಾಜಕಾರಣಿಗಳ ಪರಿಚಯವಿದೆ. ಅವರ ಸಹಕಾರದಿಂದ ಬಹಳಷ್ಟು ಜನರಿಗೆ ₹50 ಕೋಟಿವರೆಗೆ ಟೆಂಡರ್‌ಗಳನ್ನು ಕೊಡಿಸಿದ್ದಾಗಿ ಹೇಳಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಕೆಆರ್‌ಡಿಬಿಯ ₹20 ಕೋಟಿ ಹಾಗೂ ಸರ್ಕಾರಿ ಕಚೇರಿಗಳ ಕ್ಯಾಲೆಂಡರ್ ಪೂರೈಕೆಯ ₹5 ಕೋಟಿ ಟೆಂಡರ್‌ಗಳ ₹25 ಕೋಟಿಯ ವರ್ಕ್ ಆರ್ಡರ್ ಕೊಡಿಸುವುದಾಗಿ ಉಪಗುತ್ತಿಗೆದಾರನಿಗೆ ಆರೋಪಿಗಳು ನಂಬಿಸಿದ್ದರು. ಆರೋಪಿಗಳ ಬೇಡಿಕೆಯಂತೆ ಕಚೇರಿ ಖರ್ಚಿನ ₹1.21 ಕೋಟಿಯನ್ನು ಆರೋಪಿ ಸಂತೋಷ ನಾಯಕ ಖಾತೆಗೆ ಜಮಾ ಮಾಡಿದ್ದರು. ಕಟ್ಟಡ ಸಾಮಗ್ರಿಗಳು ಖರೀದಿಸಿದ್ದಾಗಿ ಬಿಲ್ ತೋರಿಸಿ ₹ 2.28 ಲಕ್ಷ ಪಡೆದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಬಹಳ ದಿನಗಳು ಕಳೆದರೂ ಉಪಗುತ್ತಿಗೆದಾರನಿಗೆ ವರ್ಕ್ ಆರ್ಡರ್ ಬರಲಿಲ್ಲ. ಆರೋಪಿಗಳಿಗೆ ಫೋನ್ ಮಾಡಿದಾಗ, 'ರಾಜ್ಯದಲ್ಲಿ ನಮ್ಮದೇ ಸರ್ಕಾರ ಇದೆ. ನಿಮಗೆ ಖಂಡಿತವಾಗಿ ಟೆಂಡರ್ ಆರ್ಡರ್ ಕೊಡಿಸುತ್ತೇವೆ' ಎಂದರು. ಟೆಂಡರ್‌ಗಾಗಿ ನೀಡಿದ ಹಣ ವಾಪಸ್ ಕೊಡುವಂತೆ ಒತ್ತಾಯಿಸಿದಾಗ ₹50 ಲಕ್ಷ ಚೆಕ್ ನೀಡಿದ್ದರು. ಹಣ ವರ್ಗಾವಣೆಗೆ ಯತ್ನಿಸಿದಾಗ ಆ ಚೆಕ್ ಬೌನ್ಸ್ ಆಗಿತ್ತು ಎಂದು ಹೇಳಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ದೂರುದಾರ, 'ರಾಜಕಾರಣಿಗಳ ಹೆಸರು ಹೇಳಿಕೊಂಡು ಪರಿಚಯ ಮಾಡಿಕೊಂಡು ಆರೋಪಿಗಳು, ನನ್ನ ಜಿಎಸ್‌ಟಿ ನಂಬರ್ ಮೇಲೆ ವರ್ಕ್ ಆರ್ಡರ್ ಕೊಡಿಸುವುದಾಗಿ ನಂಬಿಸಿ ನನ್ನಿಂದ ಹಣ ಪಡೆದರು. ಐವರು ಆರೋಪಿಗಳಲ್ಲಿ ಸಚಿವರೊಬ್ಬರ ಅಳಿಯ ಸಹ ಇದ್ದಾರೆ. ಹಣ ವಾಪಸ್ ಕೊಡುವುದಾಗಿ ಆರೋಪಿಗಳು ಭರವಸೆ ಕೊಟ್ಟಿದ್ದಾರೆ' ಎಂದರು.

ಸಂಕ್ಷಿಪ್ತ ಸುದ್ದಿ

ಕೋವಿಡ್: 47ಕ್ಕೆ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ ಒಂಬತ್ತು ಕೋವಿಡ್ ಪ್ರಕರಣಗಳು ಹೊಸದಾಗಿ ವರದಿಯಾಗಿದ್ದು, ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 47ಕ್ಕೆ ಏರಿಕೆಯಾಗಿದೆ. ಕೊರೊನಾ ವೈರಾಣು ಪತ್ತೆ ಸಂಬಂಧ 24 ಗಂಟೆಗಳಲ್ಲಿ 96 ಆರ್‌ಟಿ–ಪಿಸಿಆರ್ ಸೇರಿ 104 ಮಾದರಿಗಳ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 8.65 ರಷ್ಟಿದೆ. ಸಕ್ರಿಯ ಪ್ರಕರಣಗಳಲ್ಲಿ 46 ಮಂದಿ ಮನೆ ಆರೈಕೆಯಲ್ಲಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಕೂಡ್ಲಿ ಗುರುರಾಜಗೆ 'ಖಾದ್ರಿ ಶಾಮಣ್ಣ ಪ್ರಶಸ್ತಿ'

ಬೆಂಗಳೂರು: ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ನೀಡುವ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಗೆ ಪತ್ರಕರ್ತ ಕೂಡ್ಲಿ ಗುರುರಾಜ ಆಯ್ಕೆಯಾಗಿದ್ದಾರೆ.



ಕೂಡ್ಲಿ ಗುರುರಾಜ

ಪ್ರಶಸ್ತಿ ₹15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಮೈಸೂರಿನವರಾದ ಗುರುರಾಜ ಅವರು, ಕನ್ನಡದ ವಿವಿಧ ಪತ್ರಿಕೆಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಸದ್ಯ ಅವರು ಮೈಸೂರಿನ 'ಜನಮಿತ್ರ' ಪತ್ರಿಕೆಯ ವಿಶೇಷ ವರದಿಗಾರರಾಗಿದ್ದಾರೆ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಜೂನ್‌ನಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಪರವಾಗಿ ಪತ್ರಕರ್ತ ಎಚ್. ಆರ್. ಶ್ರೀಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಕ್ಸಲೆಂಟ್‌ನ ನೂತನ್ ಕೃಷ್ಣಗೆ 5ನೇ ರ‍್ಯಾಂಕ್

ಬೆಂಗಳೂರು: ಮೂಡುಬಿದಿರೆ ಕಲ್ಲಬೆಟ್ಟು ಎಕ್ಸಲೆಂಟ್ ಪಿಯು ಕಾಲೇಜಿನ ನೂತನ್ ಕೃಷ್ಣ ಭೈರವೇಶ್ ಡಿ. ಅವರು ಸಿಇಟಿಯಲ್ಲಿ ಬಿ–ಫಾರ್ಮಾ ಮತ್ತು ಫಾರ್ಮಾ– ಡಿ ವಿಭಾಗದಲ್ಲಿ 5ನೇ ರ‍್ಯಾಂಕ್, ನರ್ಸಿಂಗ್ ವಿಭಾಗದಲ್ಲಿ 6ನೇ ರ‍್ಯಾಂಕ್ ಪಡೆದಿದ್ದಾರೆ.

REGIONAL INSTITUTE OF EDUCATION
National Council of Educational Research and Training, New Delhi
Ministry of Education, Government of India, MYSURU - 570006
Email: principal@riemysore.ac.in, website: https://riemysore.ac.in

WALK-IN-INTERVIEW

The Regional Institute of Education, Mysuru will conduct Walk-in-Interview on **09th, 10th, 11th & 12th June, 2025** purely on contractual basis for the Academic Session 2025-26.

Sl. No.	Name of the Posts	Date of Interview
1	**Assistant Professor in -** Physics, Mathematics, Botany, Zoology, Chemistry, Pedagogy of Physical Science (Physics) & Pedagogy of Physical Science (Chemistry)	09.06.2025
2	**Assistant Professor in -** Pedagogy of Mathematics, Pedagogy of English, Pedagogy of Social Science, Education (DEE), English, Agriculture/Animal Husbandry & Assistant Programme Manager (PAC: 25.24)	10.06.2025
3	**Laboratory Assistant in -** Physics, Chemistry, Botany, Zoology & Psychology, Junior Project Fellow (PAC: 25.01 & 25.02)	11.06.2025
4	Project Assistant (MMTTC) & Computer Assistant (MMTTC)	12.06.2025

FOR MORE DETAILS PLEASE LOG ON TO **https://riemysore.ac.in**
Sd/- PRINCIPAL

ಮಾರ್ಗದರ್ಶಿಗಳನ್ನು ಒದಗಿಸಲಿರುವ 'ಗಲ್ಲಿ ಟೂರ್ಸ್'

ವಿಧಾನಸೌಧ ಮಾರ್ಗದರ್ಶಿ ಪ್ರವಾಸಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವವು ಹೇಗೆ ಕಾರ್ಯನಿರ್ವಹಿಸಲಿದೆ ಎಂಬುದನ್ನು ಜನರಿಗೂ ಅರ್ಥ ಮಾಡಿಸುವ ಉದ್ದೇಶದಿಂದ ವಿಧಾನಸೌಧ ಮಾರ್ಗದರ್ಶಿ ಪ್ರವಾಸ ಯೋಜನೆ ಆರಂಭಿಸಲಾಗಿದೆ' ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ವಿಧಾನಸೌಧದ ಬಾಂಕ್ವೆಟ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಸಮಾರಂಭದಲ್ಲಿ, ಪ್ರವಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. 'ದೇಶದಲ್ಲಿ ವಿಧಾನಸೌಧ ನಿರ್ಮಾಣ ಆಗಿದ್ದು ಮೊದಲು ಕರ್ನಾಟಕದಲ್ಲೇ. ನಮ್ಮ ರಾಜ್ಯದ ಪ್ರಜಾಪ್ರಭುತ್ವದ ನೆಲೆಗಳು 1890ರಿಂದ ಆರಂಭವಾಗುತ್ತದೆ. ರಾಜ್ಯದ ಈ ಪರಂಪರೆಯನ್ನು ಜನರಿಗೂ ಪರಿಚಯಿಸಬೇಕು ಎಂಬುದು ನಮ್ಮ ಉದ್ದೇಶ' ಎಂದರು.

'ಉತ್ತಮ ವೈದ್ಯರು, ಎಂಜಿನಿಯರ್, ವಕೀಲರು, ಅಧಿಕಾರಿಗಳನ್ನು ಸೃಷ್ಟಿಸುವ ಕಾಲೇಜುಗಳಿವೆ. ಆದರೆ, ಉತ್ತಮ ಜನಪ್ರತಿನಿಧಿಗಳನ್ನು ತಯಾರು ಮಾಡುವ ಕಾಲೇಜು ಇಲ್ಲ. ಹೀಗಾಗಿ ರಾಜ್ಯಶಾಸ್ತ್ರ ಕಾಲೇಜು ತೆರೆಯಲು ಚಿಂತನೆ ನಡೆದಿದೆ' ಎಂದರು.

ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್, ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಕೆ.ವಿ., ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಸಲ್ಮಾ ಕೆ.ಫಹೀಂ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಖಾಸಗಿ ಕಂಪನಿಯ ನಿರ್ವಹಣೆ: ರಾಜ್ಯ ಪ್ರವಾಸೋದ್ಯಮ ಇಲಾಖೆ, ವಿಧಾನ ಸೌಧದ ಸಚಿವಾಲಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸಹಭಾಗಿತ್ವದಲ್ಲಿ ಈ ಪ್ರವಾಸ ಕಾರ್ಯಕ್ರಮ ನಡೆಯಲಿದೆ. ಈ ಪ್ರವಾಸಕ್ಕೆ ಮಾರ್ಗದರ್ಶಿಗಳನ್ನು 'ಗಲ್ಲಿ ಟೂರ್ಸ್' ನವೋದ್ಯಮವು ಒದಗಿಸಲಿದೆ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆಎಸ್‌ಟಿಡಿಸಿ) ಜಾಲತಾಣದಲ್ಲಿ ಟಿಕೆಟ್‌ಗಳನ್ನು ಕಾಯ್ದಿರಿಸಬಹುದಾಗಿದೆ. ವಿಧಾನಸೌಧದ 3ನೇ ದ್ವಾರದ ಬಳಿ ಕೆಎಸ್‌ಟಿಡಿಸಿ ಕೌಂಟರ್ ಆರಂಭವಾಗಲಿದ್ದು, ಅಲ್ಲಿಯೂ ಟಿಕೆಟ್ ಖರೀದಿಸಬಹುದಾಗಿದೆ.

ಪೌರ ಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ 'ವಿಧಾನಸೌಧ ಮಾರ್ಗದರ್ಶಿ ನಡಿಗೆ ಪ್ರವಾಸ'ದ ವೇಳೆ ವಿವರಣೆ ನೀಡಿದ ಮಾರ್ಗದರ್ಶಿ –ಪ್ರಜಾವಾಣಿ ಚಿತ್ರ

90	1.5 ಕಿ.ಮೀ.	₹50	30
ನಿಮಿಷ ಪ್ರವಾಸದ ಅವಧಿ	ಪ್ರವಾಸದ ವೇಳೆ ಕ್ರಮಿಸಬೇಕಾದ ದೂರ	ವಯಸ್ಕರಿಗೆ ಟಿಕೆಟ್ ದರ. 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಉಚಿತ ಪ್ರವೇಶ	ಪ್ರತಿ ತಂಡದಲ್ಲಿ ಇರಬಹುದಾದ ಪ್ರವಾಸಿಗರ ಸಂಖ್ಯೆ

- ಪ್ರತಿ ಭಾನುವಾರ, 2 ಮತ್ತು 4ನೇ ಶನಿವಾರಗಳಂದು ಪ್ರವಾಸ. ಬೆಳಿಗ್ಗೆ 8 ರಿಂದ ಸಂಜೆ 5ರವರೆಗೆ
- ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ವಿವರಣೆ. ಪ್ರವಾಸದ ಸಮಯಕ್ಕೂ 20 ನಿಮಿಷ ಮೊದಲು ಬಂದು ತಪಾಸಣೆಗೆ ಒಳಪಡಬೇಕು
- ಟಿಕೆಟ್ ಕಾಯ್ದಿರಿಸಿದವರು, ಖರೀದಿಸಿದವರು ಆಧಾರ್ ಕಾರ್ಡ್ ತೋರಿಸುವುದು ಕಡ್ಡಾಯ
- ಕೆಎಸ್‌ಟಿಡಿಸಿ, ವಿಧಾನಸೌಧದ ಭದ್ರತಾ ಸಿಬ್ಬಂದಿ ನೀಡುವ ಸೂಚನೆಗಳನ್ನು ಪಾಲಿಸುವುದು ಕಡ್ಡಾಯ

ಪ್ರಜಾಪ್ರಭುತ್ವದ ದೇಗುಲವಿದು. ಪ್ರವಾಸ ಮುಗಿಸಿದ ಪ್ರತಿಯೊಬ್ಬರಲ್ಲೂ ಪ್ರಜಾಪ್ರಭುತ್ವದಲ್ಲಿ ತನ್ನ ಪಾತ್ರ ಮತ್ತು ಕನಸು, ಗುರಿಗಳ ಬೀಜಾಂಕುರವಾಗಬೇಕು

ಎಚ್‌.ಕೆ. ಪಾಟೀಲ, ಪ್ರವಾಸೋದ್ಯಮ ಸಚಿವ

ವಿಳಾಸ ತಪ್ಪಾಗಿದ್ದಕ್ಕೆ ಸಂಬಂಧಿಸಿದಂತೆ ಗ್ರಾಹಕರೊಂದಿಗೆ ನಡೆದಿದ್ದ ಗಲಾಟೆ

ಹಲ್ಲೆ: ಡೆಲಿವರಿ ಯುವಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಳಾಸ ತಪ್ಪಾಗಿದ್ದಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಯಲ್ಲಿ ಗ್ರಾಹಕನ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ ಜೆಪ್ಟೊ ಕಂಪನಿಯ ಡೆಲಿವರಿ ಯುವಕ ವಿಷ್ಣುವರ್ಧನ್ ಎಂಬಾತನನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗ್ರಾಹಕ ಶಶಾಂಕ್ ಅವರ ದೂರು ಆಧರಿಸಿ ಯುವಕನನ್ನು ಬಂಧಿಸಿ, ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಸಾಮಗ್ರಿ ತೆಗೆದುಕೊಳ್ಳಲು ಬಂದ ಮಹಿಳೆಯನ್ನು ತಪ್ಪು ವಿಳಾಸ ಏಕೆ ನೀಡಿದ್ದೀರಿ ಎಂದು ಪ್ರಶ್ನಿಸಿದೆ.

ಈ ವಿಚಾರಕ್ಕೆ ನಮ್ಮ ಇಬ್ಬರ ಮಧ್ಯೆ ಗಲಾಟೆ ನಡೆಯುತ್ತಿತ್ತು. ಆಗ ಬಂದ ಶಶಾಂಕ್ ಅವರು ನನ್ನ ಜತೆ ಅಸಭ್ಯವಾಗಿ ವರ್ತಿಸಿ, ಹಲ್ಲೆಗೆ ಮುಂದಾದರು. ಆಗ ಗಲಾಟೆ ವಿಕೋಪಕ್ಕೆ ತಿರುಗಿ ಹಲ್ಲೆ ನಡೆಸಿದ್ದೇನೆ ಹೊರತು ದುರುದ್ದೇಶದಿಂದ ಹಲ್ಲೆ ಮಾಡಿಲ್ಲ' ಎಂದು ವಿಷ್ಣುವರ್ಧನ್ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾರೆ ಎಂಬುದು ಗೊತ್ತಾಗಿದೆ.

ಕಣ್ಣಿನ ಎಡಭಾಗದ ಕೆಳಗೆ ಪೆಟ್ಟು ಬಿದ್ದಿದ್ದರಿಂದ ರಾಜಾಜಿನಗರದ ನೇತ್ರಾಲಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿ ಶಶಾಂಕ್ ತಿಳಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ವೈದ್ಯಕೀಯ ದಾಖಲೆ ಹಾಜರು ಪಡಿಸುವಂತೆ ಅವರಿಗೆ ಸೂಚಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ರಾಜಾಜಿನಗರ ಕ್ಷೇತ್ರದ ಶಾಸಕ ಎಸ್.ಸುರೇಶ್ ಕುಮಾರ್ ಅವರು ಶಶಾಂಕ್ ಅವರ ನಿವಾಸಕ್ಕೆ ತೆರಳಿ ಆರೋಗ್ಯ ವಿಚಾರಿಸಿ, ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡರು.

'ಈ ಘಟನೆಯು ಆಘಾತಕಾರಿ ಮತ್ತು ಒಪ್ಪುವಂತಹದಲ್ಲ. ಗ್ರಾಹಕರ ಸುರಕ್ಷತೆಗೆ ಆದ್ಯತೆ ನೀಡಲಾಗುವುದು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಪೊಲೀಸರ ತನಿಖೆಗೆ ಅಗತ್ಯ ಸಹಕಾರ ನೀಡಲಾಗುವುದು. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಜೆಪ್ಟೊ ಕಂಪನಿ ಹೇಳಿಕೆ ನೀಡಿದೆ.

ಬೈಕ್ ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ರಸ್ತೆ ದಾಟುವಾಗ ದ್ವಿಚಕ್ರ ವಾಹನ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಶನಿವಾರ ರಾತ್ರಿ 10.15ಕ್ಕೆ ಕೋನೇನ ಅಗ್ರಹಾರದ ಸಮೀಪದ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ ಪ್ರವೇಶ ದ್ವಾರದ ಬಳಿ ಸಂಭವಿಸಿದೆ.

ತಮಿಳುನಾಡು ಕೃಷ್ಣಗಿರಿಯ ರಮೇಶ್ ಜ್ಯೋತಿಮಣಿ (39) ಮೃತರು.

ರಮೇಶ್ ಅವರು ಬೊಮ್ಮನಹಳ್ಳಿಯ ಸಂಬಂಧಿಕರ ಮನೆಗೆ ತೆರಳಲು ರಾತ್ರಿ ತಮಿಳುನಾಡಿನಿಂದ ಬಸ್‌ನಲ್ಲಿ ಕೋನೇನ ಅಗ್ರಹಾರಕ್ಕೆ ಬಂದಿದ್ದರು. ಈ ವೇಳೆ ಎಲೆಕ್ಟ್ರಾನಿಕ್ ಸಿಟಿ ಸಂಪರ್ಕಿಸುವ ಮೇಲ್ಸೇತುವೆ ಪ್ರವೇಶ ದ್ವಾರದ ಬಳಿ ರಸ್ತೆ ದಾಟುವಾಗ ವೇಗವಾಗಿ ಬಂದ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿದೆ.

ಅಪಘಾತದ ರಭಸಕ್ಕೆ ರಸ್ತೆಗೆ ಉರುಳಿ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ರಮೇಶ್ ಅವರನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ಸಾಗಿಸಿದರು. ಪರೀಕ್ಷಿಸಿದ ವೈದ್ಯರು ಮಾರ್ಗ ಮಧ್ಯೆಯೇ ಮೃತಪಟ್ಟಿರುವುದಾಗಿ ದೃಢಪಡಿಸಿದರು.

ಸ್ಥಳಕ್ಕೆ ಮಡಿವಾಳ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ದ್ವಿಚಕ್ರ ವಾಹನ ಸವಾರನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ. ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಡೆನೂರು ಮನು ವಿರುದ್ಧ ಅತ್ಯಾಚಾರ ಪ್ರಕರಣ

31 ತಿಂಗಳ ವಾಟ್ಸ್‌ಆ್ಯಪ್ ಸಂದೇಶ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹ ಕಲಾವಿದೆ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ನಟ ಮಡೆನೂರು ಮನು ಬಂಧನ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು, ಕಳೆದ 31 ತಿಂಗಳಲ್ಲಿ ಇಬ್ಬರ ಮಧ್ಯೆ ವಿನಿಮಯವಾಗಿರುವ ಸಾವಿರಾರು ವಾಟ್ಸ್ ಆ್ಯಪ್ ಸಂದೇಶಗಳನ್ನು ಸಂಗ್ರಹಿಸಿ, ಪರಿಶೀಲನೆ ನಡೆಸುತ್ತಿದ್ದಾರೆ.

ಸಂತ್ರಸ್ತೆ ಹಾಗೂ ಆರೋಪಿಯ ನಡುವಿನ ಆಡಿಯೊ ಹಾಗೂ ವಿಡಿಯೊ ಸಂಭಾಷಣೆ ವೇಳೆ ನಟ-ನಟಿಯರ ಹೆಸರುಗಳು ಪ್ರಸ್ತಾಪವಾಗಿವೆ. ಈ ಕಾರಣದಿಂದ ಶೀಘ್ರದಲ್ಲೇ ಆ ನಟ-ನಟಿಯರಿಗೂ ನೋಟಿಸ್ ಜಾರಿಗೊಳಿಸಿ, ಹೇಳಿಕೆ ದಾಖಲಿಸಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಮಡೆನೂರು ಮನು

ಸಂತ್ರಸ್ತೆ ಹಾಗೂ ಆರೋಪಿಯ ತಲಾ ಎರಡು ಮೊಬೈಲ್‌ಗಳನ್ನು ಜಪ್ತಿ ಮಾಡಿ, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ರವಾನಿಸಲಾಗಿದೆ.

'ಮನು ನನ್ನ ಮೇಲೆ ಅತ್ಯಾಚಾರ ಮಾಡುವುದನ್ನು ಮೊಬೈಲ್‌ನಲ್ಲಿ ವಿಡಿಯೊ ರೆಕಾರ್ಡ್ ಮಾಡಿದ್ದಾನೆ' ಎಂದು ಸಂತ್ರಸ್ತೆ ಆರೋಪಿಸಿದ್ದರು. ಆದರೆ, ಮನು ಮೊಬೈಲ್‌ಗಳಲ್ಲಿ ಆ ರೀತಿಯ ಯಾವುದೇ ವಿಡಿಯೊಗಳು ಪತ್ತೆಯಾಗಿಲ್ಲ. ಪ್ರಕರಣ ದಾಖಲಾದ ಬೆನ್ನಲ್ಲೇ ಆ ವಿಡಿಯೊಗಳನ್ನು ಅಳಿಸಿ ಹಾಕಿರುವ ಸಾಧ್ಯತೆ ಇದೆ. ಹಾಗಾಗಿ ದತ್ತಾಂಶ ಮರುಸಂಗ್ರಹಕ್ಕೆ ಮೊಬೈಲ್‌ಗಳನ್ನು ಎಫ್ಎಸ್ಎಲ್‌ಗೆ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಹರಿದಾಡಿದ ಆಡಿಯೊ

ಸಂತ್ರಸ್ತೆಯನ್ನು ಮದುವೆ ಆಗಿರುವುದಾಗಿ ಆರೋಪಿ ಮನು ಹೇಳಿರುವ ಆಡಿಯೊ ತುಣುಕೊಂದು ಜಾಲತಾಣದಲ್ಲಿ ಹರಿದಾಡುತ್ತಿದೆ.

'ನಾನು ಆಕೆಯನ್ನು ಮದುವೆ ಆಗಿದ್ದೇನೆ. ಎಲ್ಲಿ ಬೇಕಾದರೂ ಈ ಮಾತನ್ನು ಹೇಳುತ್ತೇನೆ. ಆಕೆ ನನ್ನ ಹೆಂಡತಿ. ಏನು ಬೇಕಾದರೂ ಮಾಡುತ್ತೇನೆ. ದಂಪತಿ ವಿಚಾರದಲ್ಲಿ ಯಾರೂ ಮಧ್ಯಪ್ರವೇಶಿಸುವ ಅಗತ್ಯವಿಲ್ಲ' ಎಂಬ ಮಾತುಗಳು ಆಡಿಯೊದಲ್ಲಿವೆ.

ಓಂ ಪ್ರಕಾಶ ಹತ್ಯೆ: ಪೊಲೀಸ್ ತನಿಖೆ ಅಂತಿಮ ಹಂತಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಓಂ ಪ್ರಕಾಶ್ ಹತ್ಯೆ ಪ್ರಕರಣದ ತನಿಖೆ ಅಂತಿಮ ಹಂತ ತಲುಪಿದ್ದು, ಸಿಸಿಬಿ ಪೊಲೀಸರು ಶೀಘ್ರದಲ್ಲೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವ ಸಾಧ್ಯತೆಯಿದೆ.

ಪ್ರಕರಣ ಸಂಬಂಧ ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರನ್ನು ಬಂಧಿಸಿ, ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಲಾಗಿದೆ. 'ತಾನೇ ಕೊಲೆ ಮಾಡಿದ್ದಾಗಿ ವಿಚಾರಣೆ ವೇಳೆ ಆರೋಪಿ ಪಲ್ಲವಿ ತಪ್ಪೊಪ್ಪಿಕೊಂಡಿದ್ದಾರೆ. ಕೃತ್ಯ ನಡೆದ ವೇಳೆ ಪುತ್ರಿ ಕೃತಿ ಸಹ ಮನೆಯಲ್ಲೇ ಇದ್ದ ಕಾರಣ ಆಕೆಯ ವಿರುದ್ಧವೂ ಪ್ರಕರಣ ದಾಖಲಿಸಲಾಗಿತ್ತು. ಆದರೆ, ತನಿಖೆ ವೇಳೆ ಆಕೆಯ ವಿರುದ್ಧ ಯಾವುದೇ ಸಾಕ್ಷ್ಯಗಳು ಲಭ್ಯವಾಗಿಲ್ಲ. ಹೀಗಾಗಿ ಪಲ್ಲವಿ ವಿರುದ್ಧ ಮಾತ್ರ ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ನಡೆಸಲಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಕೌಟುಂಬಿಕ ಕಾರಣಗಳಿಂದಲೇ ಹತ್ಯೆ: ಸಿಸಿಬಿ ತನಿಖೆಯಲ್ಲಿ ಓಂ ಪ್ರಕಾಶ್ ಹತ್ಯೆಗೆ ಪ್ರಮುಖ ಕಾರಣಗಳು ಪತ್ತೆಯಾಗಿವೆ. ಓಂ ಪ್ರಕಾಶ್ ಅವರು ಕುಟುಂಬದ ಬಗ್ಗೆ ತಳೆದ ನಿರ್ಲಕ್ಷ್ಯ ಹಾಗೂ ಕೌಟುಂಬಿಕ ಮನಸ್ತಾಪವೇ ಕೊಲೆಗೆ ಕಾರಣ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ಪಲ್ಲವಿ ಮತ್ತು ಓಂ ಪ್ರಕಾಶ್

'ಪತ್ನಿ ಮತ್ತು ಮಗಳ ಬಗ್ಗೆ ಗಮನ ಕೊಡುತ್ತಿರಲಿಲ್ಲ. ಮಗಳ ಮದುವೆ ಬಗ್ಗೆಯೂ ಆಸಕ್ತಿ ತೋರಲಿಲ್ಲ. ಆರ್ಥಿಕವಾಗಿ ಸದೃಢರಾಗಿದ್ದರೂ ಪತ್ನಿ, ಮಗಳ ಖರ್ಚಿಗೆ ಹಣ ಕೊಡುತ್ತಿರಲಿಲ್ಲ. ಸಣ್ಣ ವಿಚಾರಕ್ಕೆ ಗಲಾಟೆ ನಡೆದಾಗ ಓಂ ಪ್ರಕಾಶ್ ಅವರು ತಮ್ಮ ಸಹೋದರಿ ಮನೆಗೆ ಹೋಗುತ್ತಿದ್ದರು. ಈ ನಡುವೆ ಪಲ್ಲವಿ ಮತ್ತು ಕೃತಿ ಮಾನಸಿಕ ಸಮಸ್ಯೆಗಳಿಗೆ ತುತ್ತಾಗಿದ್ದರು. ಪತಿ ತನ್ನನ್ನು ಕೊಲೆ ಮಾಡುತ್ತಾರೆ ಎಂದು ಪಲ್ಲವಿ ಆತಂಕಕ್ಕೆ ಒಳಗಾಗಿದ್ದರು. ಹಾಗಾಗಿ ಓಂ ಪ್ರಕಾಶ್ ಅವರನ್ನು ಪಲ್ಲವಿ ಹತ್ಯೆ ಮಾಡಿದ್ದಾರೆ ಎಂಬುದು ಸಿಸಿಬಿ ತನಿಖೆಯಲ್ಲಿ ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ವರದಕ್ಷಿಣೆ ನೀಡುವಂತೆ ಕಿರುಕುಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀತಿಸಿ ಮದುವೆಯಾದ ಬಳಿಕ ಸಂಸಾರಕ್ಕೆ ಹೊಸ ಮನೆ ಮಾಡುವುದಾಗಿ ಹಣ, ಚಿನ್ನ ಪಡೆದು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿರುವ ಪತಿ ಹಾಗೂ ಅವರ ಕುಟುಂಬದವರ ವಿರುದ್ಧ ಪಶ್ಚಿಮ ವಿಭಾಗದ ಮಹಿಳಾ ಪೊಲೀಸ್ ಠಾಣೆಗೆ ಪತ್ನಿ ದೂರು ನೀಡಿದ್ದಾರೆ.

ಸಂತ್ರಸ್ತೆ ದೂರು ಆಧರಿಸಿ, ಪತಿ ಹೇಮಂತ್ ಕುಮಾರ್, ಅತ್ತೆ ಶಿವಶಂಕರಿ, ಪತಿಯ ಅಣ್ಣ ಶಶಿಕುಮಾರ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕುಣಿಗಲ್ ಮೂಲದ ಸಂತ್ರಸ್ತೆ, ನಗರದ ಮಾಲ್‌ವೊಂದರಲ್ಲಿ ಕೆಲಸ ಮಾಡುವ ವೇಳೆ ಹೇಮಂತ್ ಪರಿಚಯವಾಗಿ ಪರಸ್ಪರ ಪ್ರೀತಿಸಿ ಫೆಬ್ರುವರಿಯಲ್ಲಿ ದೇವಸ್ಥಾನವೊಂದರಲ್ಲಿ ಮದುವೆಯಾಗಿದ್ದರು. ಬಳಿಕ ಸ್ನೇಹಿತನ ಕೊಠಡಿಯಲ್ಲಿ ಇಬ್ಬರೂ ಸಂಸಾರ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಮದುವೆಯಾದ ದಿನದಿಂದ ಪತಿ ನಿತ್ಯ ನನ್ನ ಜತೆ ಗಲಾಟೆ ಮಾಡುತ್ತಿದ್ದರು. ಅವಾಚ್ಯ ಶಬ್ಧಗಳಿಂದ ನಿಂದಿಸಿ, ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡಿದ್ದಾರೆ. ಅತ್ತೆ ಹಾಗೂ ಮೈದುನ ಸಹ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಹೊಸ ಮನೆ ಮಾಡುವುದಾಗಿ ₹1.5 ಲಕ್ಷ ನಗದು ಮತ್ತು 15 ಗ್ರಾಂ ಚಿನ್ನ ಪಡೆದುಕೊಂಡ ಬಳಿಕ ಹೇಮಂತ್ ಕುಮಾರ್ ನನ್ನನ್ನು ದೂರ ಮಾಡಿದ್ದಾನೆ' ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.

'ಹೇಮಂತ್ ಕುಟುಂಬದವರು ವರದಕ್ಷಿಣೆ ನೀಡುವಂತೆ ಕಿರುಕುಳ ನೀಡುತ್ತಿದ್ದಾರೆ. ಗರ್ಭಿಣಿ ಎಂದು ಗೊತ್ತಿದ್ದರೂ ಮನೆಯಿಂದ ಹೊರ ಹಾಕಿದ್ದಾರೆ. ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ' ಎಂದು ಮನವಿ ಮಾಡಿದ್ದಾರೆ.

ಮಠದ ಆವರಣಕ್ಕೆ ಚಪ್ಪಲಿ ಎಸೆತ

ಬೆಂಗಳೂರು: ಇಂದಿರಾನಗರದ ರಾಘವೇಂದ್ರ ಮಠದ ಆವರಣಕ್ಕೆ ಯುವತಿಯೊಬ್ಬಳು ಚಪ್ಪಲಿ ಹಾಕಿ ಹೋಗಿರುವ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ.

ಭಾನುವಾರ ಮುಂಜಾನೆ 5.30ಕ್ಕೆ ಇಂದಿರಾನಗರ ಮೆಟ್ರೊ ನಿಲ್ದಾಣ ಸಮೀಪದ ರಾಘವೇಂದ್ರ ಮಠದ ಬಳಿ ಬಂದ ಯುವತಿ, ಅಲ್ಲೆ ಬಿದ್ದಿದ್ದ ಚಪ್ಪಲಿಯನ್ನು ತೆಗೆದು ಕಿಟಕಿ ಮೂಲಕ ಮಠದ ಸಭಾಂಗಣಕ್ಕೆ ಎಸೆದಿದ್ದಾಳೆ. ಯುವತಿಯ ಕೃತ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ಮಠದ ಅಧಿಕಾರಿಗಳು ಇಂದಿರಾನಗರ ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಕ್ರೀದ್ ... ಮುಸ್ಲಿಂ ಸಮುದಾಯ ತ್ಯಾಗ ಬಲಿದಾನದ ಸಂಕೇತವಾಗಿ ಆಚರಿಸುವ ಬಕ್ರೀದ್ ಹಬ್ಬದ ಪ್ರಯುಕ್ತ ಸಿರಾದಿಂದ ಮಾರಾಟಕ್ಕೆ ತಂದಿರುವ ಕುರಿಗಳೊಂದಿಗೆ ಕುರಿಗಾಹಿಯೊಬ್ಬರು ಆರ್.ಟಿ. ನಗರದ ಮಠದಳ್ಳಿ ರಸ್ತೆಯಲ್ಲಿ ಭಾನುವಾರ ಖರೀದಿದಾರರಿಗಾಗಿ ಕಾಯುತ್ತಿದ್ದರು ಚಿತ್ರ: ರಂಜು ಪಿ

ಜೈಲು ಅಧಿಕಾರಿಗಳಿಗೆ ನೋಟಿಸ್ ನೀಡಲು ಸಿದ್ಧತೆ

ನಗದು, ಚಾಕು ಪತ್ತೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆಸಿದ ಶೋಧದ ವೇಳೆ ನಗದು, ಚಾಕು ಮತ್ತು ಮೊಬೈಲ್ ಪತ್ತೆಗೆ ಸಂಬಂಧಿಸಿದಂತೆ ಜೈಲು ಮತ್ತು ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆಎಸ್ಐಎಸ್ಎಫ್) ಅಧಿಕಾರಿ ಹಾಗೂ ಸಿಬ್ಬಂದಿಯ ವಿಚಾರಣೆ ನಡೆಸಲು ಆಗ್ನೇಯ ವಿಭಾಗದ ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಕೈದಿಗಳು ಮೊಬೈಲ್, ಸ್ಟೌ ಸೇರಿದಂತೆ ನಿಷೇಧಿತ ವಸ್ತುಗಳನ್ನು ಬಳಸುತ್ತಿರುವುದು ದಾಳಿ ವೇಳೆ ಪತ್ತೆಯಾಗಿತ್ತು. ಇದಕ್ಕೆ ಸಿಬ್ಬಂದಿ ಹಾಗೂ ಅಧಿಕಾರಿಗಳ ಲೋಪವೇ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಆಗ್ನೇಯ ವಿಭಾಗದ ಹುಳಿಮಾವು, ಬಂಡೆಪಾಳ್ಯ, ಬೇಗೂರು, ಎಲೆಕ್ಟ್ರಾನಿಕ್ ಸಿಟಿ ಹಾಗೂ ಪರಪ್ಪನ ಅಗ್ರಹಾರ ಠಾಣೆ ಇನ್‌ಸ್ಪೆಕ್ಟರ್‌ಗಳು ಮತ್ತು ಸಿಬ್ಬಂದಿ ಸೇರಿ 175 ಮಂದಿಯ ತಂಡ ದಾಳಿ ನಡೆಸಿತ್ತು. ಕೈದಿಗಳ ಬ್ಯಾರಕ್‌ಗಳಲ್ಲಿ ₹16 ಸಾವಿರ ನಗದು, ಒಂದು ಮೊಬೈಲ್, ಒಂದು ಇಂಡಕ್ಷನ್ ಸ್ಟೌ ಹಾಗೂ ನಾಲ್ಕು ಚಾಕುಗಳು ಪತ್ತೆಯಾಗಿದ್ದವು.

ಜೈಲಿನ ಸಿಬ್ಬಂದಿ ಹಾಗೂ ಕೆಎಸ್ಐಎಸ್ಎಫ್ ಅಧಿಕಾರಿಗಳು ಕೈದಿಗಳೊಂದಿಗೆ ಶಾಮೀಲಾಗಿರುವ ಕಾರಣ ನಿಷೇಧಿತ ವಸ್ತುಗಳು ಬಳಕೆಯಾಗುತ್ತಿವೆ ಎಂದು ಪೊಲೀಸರು ಆರೋಪಿಸಿದ್ದಾರೆ.

ದಾಳಿ ಸಂಬಂಧ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಎಸಿಪಿ ಕೆ.ಎಂ.ಸತೀಶ್ ನೀಡಿರುವ ದೂರಿನ ಮೇರೆಗೆ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಜೈಲು ಸಿಬ್ಬಂದಿ ಹಾಗೂ ಕೆ ಎ ಸ್ ಐ ಎ ಸ್ ಎ ಫ್ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಕರಣದಲ್ಲಿ ಕೈದಿಗಳಾದ ಚಲುವ, ಇಷರ್ಾದ್, ಆಕಾಶ್ ಹಾಗೂ ಮಾರುತಿ ಅವರನ್ನು ಸಹ ಆರೋಪಿಗಳನ್ನಾಗಿ ಪರಿಗಣಿಸಲಾಗಿದೆ.

ಜೈಲಿನಲ್ಲಿ ನಿಷೇಧಿತ ವಸ್ತುಗಳ ಬಳಕೆಗೆ ಜೈಲು ಅಧಿಕಾರಿಗಳು ಅವಕಾಶ ಕಲ್ಪಿಸಿರುವುದು ಕಾನೂನು ಬಾಹಿರ. ಈ ನಿಟ್ಟಿನಲ್ಲಿ ಅಧಿಕಾರಿಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಈ ಸಂಬಂಧ ತನಿಖೆ ಚುರುಕುಗೊಂಡಿದ್ದು, ಕರ್ತವ್ಯಲೋಪವೆಸಗಿರುವ ಅಧಿಕಾರಿ, ಸಿಬ್ಬಂದಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಕೈದಿಗಳಿಂದಲೂ ಮಾಹಿತಿ ಸಂಗ್ರಹಿಸಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಜೈಲಿನಲ್ಲಿ ಹೊಡೆದಾಟ ಪ್ರಕರಣ ದಾಖಲಾಗಿತ್ತು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಜೈಲಿನಲ್ಲಿ ಶೋಧ ನಡೆಸಲಾಗಿದೆ. ನಗದು, ಮೊಬೈಲ್ ಪತ್ತೆಯಾಗಿರುವ ಸಂಬಂಧ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ' ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದರು.

ಕಾಂಗ್ರೆಸ್ ಬೆಂಬಲಿತ 11 , ಎನ್‌ಡಿಎ ಬೆಂಬಲಿತ 3 ಅಭ್ಯರ್ಥಿಗಳಿಗೆ ಜಯ

ಕಾಂಗ್ರೆಸ್ ತೆಕ್ಕೆಗೆ ಬಮೂಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ (ಬಮೂಲ್) 2025-2030ರ ಅವಧಿಯ ಆಡಳಿತ ಮಂಡಳಿಯ 11 ನಿರ್ದೇಶಕ ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಏಳು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸಿದ್ದು, ಬಮೂಲ್ ಆಡಳಿತವನ್ನು 'ಕೈ' ವಶ ಮಾಡಿಕೊಂಡಿದೆ.

ಬಿಜೆಪಿ-ಜೆಡಿಎಸ್ (ಎನ್‌ಡಿಎ) ಮೈತ್ರಿಕೂಟ ಎರಡು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ವಿಚಾರಣೆಗೆ ಬಾಕಿ ಇರುವುದರಿಂದ ಬೆಂಗಳೂರು ಉತ್ತರ ಮತ್ತು ಬೆಂಗಳೂರು ಪೂರ್ವ ಕ್ಷೇತ್ರಗಳ ಫಲಿತಾಂಶವನ್ನು ಕಾಯ್ದಿರಿಸಲಾಗಿದೆ ಎಂದು ಚುನಾವಣಾ ಅಧಿಕಾರಿ ತಿಳಿಸಿದ್ದಾರೆ.

ಬಮೂಲ್ ಆಡಳಿತ ಮಂಡಳಿಯ 14 ಸ್ಥಾನಗಳಿಗೆ ಚುನಾವಣೆ ನಡೆದಿದೆ. ಮೂರು ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿತ್ತು. ಉಳಿದ 11 ಸ್ಥಾನಗಳಿಗೆ ಸ್ಪರ್ಧೆ ಇತ್ತು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಮಾಜಿ ಸಂಸದ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ತಮ್ಮ ಡಿ.ಕೆ. ಸುರೇಶ್ ಅವರು ಈ ಚುನಾವಣೆಯ ಅಖಾಡಕ್ಕೆ ಇಳಿದ ಬಳಿಕ ಹಣಾಹಣಿ ಮತ್ತಷ್ಟು ತೀವ್ರಗೊಂಡಿತ್ತು.

ಸುರೇಶ್ ಸೇರಿದಂತೆ ಮೂವರು ಅವಿರೋಧವಾಗಿ ಆಯ್ಕೆಯಾಗಿದ್ದರು. ರಾಮನಗರ ಜಿಲ್ಲೆಯ ಆರು ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ನಗರದ ಡೇರಿ ಸರ್ಕಲ್ ಸಮೀಪದ ಐಟಿಐ ಕಾಲೇಜಿನಲ್ಲಿ ಭಾನುವಾರ ಚುನಾವಣೆ, ನಂತರ ಮತ ಎಣಿಕೆ ಕಾರ್ಯ ನಡೆಯಿತು. 14 ಕ್ಷೇತ್ರಗಳಿಂದ 2132 ಮಂದಿ ಮತದಾನದ ಹಕ್ಕು ಪಡೆದಿದ್ದರು.

ಡಿ.ಕೆ.ಸುರೇಶ್, ಕನಕಪುರ

ರಾಜಣ್ಣ, ಕುದೂರು

ಕೃಷ್ಣಯ್ಯ ಕೆ.ಎಂ. ಬೆಂ.ದಕ್ಷಿಣ

ಆನಂದಕುಮಾರ್ ದೊಡ್ಡಬಳ್ಳಾಪುರ

ಹರೀಶ ಕುಮಾರ್, ಹಾರೋಹಳ್ಳಿ

ಲಿಂಗೇಶ್ ಕುಮಾರ್, ಚನ್ನಪಟ್ಟಣ

ಸತೀಶ್ ಗೌಡ ಹೊಸಕೋಟೆ

ಮುನಿರಾಜು, ದೇವನಹಳ್ಳಿ

ಅಶೋಕ, ಮಾಗಡಿ



ಪಿ.ನಾಗರಾಜು, ರಾಮನಗರ

ಬೈರೇಗೌಡ, ನೆಲಮಂಗಲ

ಬಮೂಲ್ ಚುನಾವಣಾ ಫಲಿತಾಂಶ

ಕ್ಷೇತ್ರ	ಅಭ್ಯರ್ಥಿ	ಬೆಂಬಲಿತ ಪಕ್ಷ
ಬೆಂಗಳೂರು ಉತ್ತರ	ಫಲಿತಾಂಶ ಕಾಯ್ದಿರಿಸಿದೆ	
ಬೆಂಗಳೂರು ದಕ್ಷಿಣ	ಕೃಷ್ಣಯ್ಯ ಕೆ.ಎಂ	ಕಾಂಗ್ರೆಸ್
ಬೆಂಗಳೂರು ಪೂರ್ವ	ಫಲಿತಾಂಶ ತಡೆಹಿಡಿಯಲಾಗಿದೆ	
ದೇವನಹಳ್ಳಿ	ಎಸ್.ಪಿ.ಮುನಿರಾಜು	ಕಾಂಗ್ರೆಸ್
ದೊಡ್ಡಬಳ್ಳಾಪುರ	ಬಿ.ಸಿ.ಆನಂದಕುಮಾರ್	ಎನ್‌ಡಿಎ
ಹೊಸಕೋಟೆ	ಸತೀಶ್ ಗೌಡ.ಬಿ.ವಿ.	ಕಾಂಗ್ರೆಸ್
ನೆಲಮಂಗಲ	ಬೈರೇಗೌಡ	ಎನ್‌ಡಿಎ
ರಾಮನಗರ	ಪಿ.ನಾಗರಾಜು	ಕಾಂಗ್ರೆಸ್
ಚನ್ನಪಟ್ಟಣ	ಎಸ್.ಲಿಂಗೇಶ್‌ಕುಮಾರ್	ಕಾಂಗ್ರೆಸ್
ಮಾಗಡಿ	ಅಶೋಕ್ ಎಚ್.ಎನ್	ಕಾಂಗ್ರೆಸ್
ಹಾರೋಹಳ್ಳಿ	ಹರೀಶ್ ಕುಮಾರ್ ಎಚ್.ಎಸ್	ಕಾಂಗ್ರೆಸ್
ಅವಿರೋಧ ಆಯ್ಕೆ		
ಆನೇಕಲ್	ರಮೇಶ್ ಆರ್.ಕೆ	ಕಾಂಗ್ರೆಸ್
ಕನಕಪುರ	ಡಿ.ಕೆ.ಸುರೇಶ್	ಕಾಂಗ್ರೆಸ್
ಕುದೂರು	ರಾಜಣ್ಣ	ಕಾಂಗ್ರೆಸ್

ಮಾತಿನ ಚಕಮಕಿ: ಮತದಾನದ ಸಮಯದಲ್ಲಿ ಮಧ್ಯಾಹ್ನದ ವೇಳೆಗೆ ಮತಗಟ್ಟೆ ಕೇಂದ್ರದ ಬಳಿ ನಾಟಕೀಯ ಬೆಳವಣಿಗೆ ನಡೆಯಿತು. ಬಮೂಲ್ ವ್ಯಾಪ್ತಿಯ ವಿವಿಧ ಕ್ಷೇತ್ರಗಳ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರು ಅಲ್ಲಿ ಜಮಾಯಿಸಿದ್ದರು.

ಡಿ.ಕೆ.ಸುರೇಶ್, ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್, ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಮತಗಟ್ಟೆ ಕೇಂದ್ರಕ್ಕೆ ಭೇಟಿ ನೀಡಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಡಿ.ಕೆ.ಸುರೇಶ್ ಪರ, ಬಿಜೆಪಿಯವರು ಪ್ರಧಾನಿ ಮೋದಿ ಪರ, ಜೆಡಿಎಸ್‌ನವರು ದೇವೇಗೌಡರ ಪರ ಜೈಕಾರ ಕೂಗಿದರು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡುತ್ತಿದ್ದಾರೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ವಿರುದ್ಧ ಧಿಕ್ಕಾರ ಕೂಗಿದರು. ಈ ವೇಳೆ ಎರಡೂ ಪಕ್ಷದ ಕಾರ್ಯಕರ್ತರ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಯೂನುಸ್ ಸರ್ಕಾರದ ವಿರುದ್ಧ ಪ್ರತಿಭಟನೆ

ನವದೆಹಲಿ(ಪಿಟಿಐ): ಬಾಂಗ್ಲಾದೇಶದಲ್ಲಿ ಮುಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರದ ನೀತಿಗಳ ಬಗ್ಗೆ ಆಡಳಿತ ಮತ್ತು ವ್ಯಾಪಾರ ವಲಯದಲ್ಲಿ ರಾತ್ರೋರಾತ್ರಿ ವ್ಯಾಪಕ ಪ್ರತಿಭಟನೆಗಳು ಮತ್ತು ತೀವ್ರ ಅಸಮಾಧಾನ ಭುಗಿಲೆದ್ದಿದೆ.

ಸಚಿವಾಲಯದ ಸಿಬ್ಬಂದಿ, ರಾಷ್ಟ್ರೀಯ ಕಂದಾಯ ಮಂಡಳಿಯ ಅಧಿಕಾರಿಗಳು ಮತ್ತು ಢಾಕಾ ದಕ್ಷಿಣ ನಗರ ಪಾಲಿಕೆ ನೌಕರರ ಪ್ರತಿಭಟನೆಗಳನ್ನು ಉಲ್ಲೇಖಿಸಿ 'ಪ್ರೊಥಮ್ ಆಲೊ' ಪತ್ರಿಕೆ ವರದಿಯನ್ನು ಪ್ರಕಟಿಸಿದೆ.

1971ರ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಬುದ್ಧಿಜೀವಿಗಳನ್ನು ಹತ್ಯೆ ಮಾಡಿದ ರೀತಿಯಲ್ಲಿಯೇ ದೇಶದಲ್ಲಿ ಉದ್ಯಮಿಗಳನ್ನು ಕೊಲ್ಲಲಾಗುತ್ತಿದೆ ಎಂದು ಬಾಂಗ್ಲಾದೇಶ ಟೆಕ್ಸ್‌ಟೈಲ್ಸ್ ಮಿಲ್ಸ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಉದ್ಯಮಿ ಶೌಕತ್ ಅಜೀಜ್ ರಸೆಲ್ ಹೇಳಿದ್ದಾರೆ. ಹೆಚ್ಚಿನ ಜನರು ನಿರುದ್ಯೋಗಿಗಳಾಗುವುದರಿಂದ ಕ್ಷಾಮದಂತಹ ಪರಿಸ್ಥಿತಿಯು ತಲೆದೋರಲಿದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಕಳೆದ ಎಂಟು ತಿಂಗಳಲ್ಲಿ ಬಾಂಗ್ಲಾ ದೇಶ ಹೂಡಿಕೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಒಬ್ಬನೇ ಒಬ್ಬ ಹೂಡಿಕೆದಾರನನ್ನು ಕರೆತರಲು ಸಾಧ್ಯವಾಗಿಲ್ಲ' ಎಂದು ರಸೆಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಎಸ್ಎಸ್ಎಲ್‌ಸಿ ಪರೀಕ್ಷೆ–2 ಇಂದಿನಿಂದ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಇದೇ 26ರಿಂದ ರಾಜ್ಯದಾದ್ಯಂತ ಆರಂಭವಾಗಲಿದೆ.

ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಮೇ 26 ರಿಂದ ಜೂನ್ 2ರವರೆಗೆ ಪರೀಕ್ಷೆಯನ್ನು ನಡೆಸಲಿದೆ.

ಬಿಜೆಪಿ ಮುಖಂಡನ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ಬಮೂಲ್ ನಿರ್ದೇಶಕರ ಚುನಾವಣೆ (ಮೇ 25) ಕಾರಣದಿಂದ ತಾಲ್ಲೂಕಿನ ದೇವರ ಹೊಸಹಳ್ಳಿ ಗ್ರಾಮದ ಡೇರಿ ಅಧ್ಯಕ್ಷ ಶಂಕರರಾಜು ಅವರ ಅಪಹರಣ ಆರೋಪಕ್ಕೆ ಸಂಬಂಧಿಸಿದಂತೆ ದಾಬಸ್‌ಪೇಟೆ ಪೊಲೀಸರು ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಜಗದೀಶ್ ಚೌಧರಿ ಅವರನ್ನು ಶನಿವಾರ ರಾತ್ರಿ ಬಂಧಿಸಿ, ಬಳಿಕ ಬಿಡುಗಡೆ ಮಾಡಿದರು.

ಜಗದೀಶ್ ಚೌಧರಿ ಬಂಧನ ವಿರೋಧಿಸಿ, ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಠಾಣೆ ಮುಂಭಾಗ ಜಮಾಯಿಸಿ, ಪೊಲೀಸರ ವಿರುದ್ಧ ಘೋಷಣೆ ಕೂಗಿದರು.

'ಮೇ 23ರ ಬೆಳಿಗ್ಗೆ ಶಂಕರರಾಜು ಅವರು ಮದುವೆ ಸಮಾರಂಭಕ್ಕೆ ತುಮಕೂರಿಗೆ ಹೋದವರು ರಾತ್ರಿಯಾದರೂ ವಾಪಸ್ ಬಂದಿರಲಿಲ್ಲ. ಬಮೂಲ್ ಚುನಾವಣೆ ಕಾರಣದಿಂದ ರಾತ್ರಿ 10.30ಕ್ಕೆ ಜಗದೀಶ್ ಅವರು ಶಂಕರ್ ರಾಜು ಪತ್ನಿಗೆ ಕರೆ ಮಾಡಿ, 'ನಿಮ್ಮ ಪತಿಯನ್ನು ಕರೆದುಕೊಂಡು ಬಂದಿದ್ದೇನೆ' ಎಂದಿದ್ದಾರೆ. ಪತಿಗೆ ಫೋನ್ ಕೊಡುವಂತೆ ಅವರು ಕೇಳಿದಾಗ, 'ಈ ವಿಚಾರಕ್ಕೆ ನೀವು ತಲೆ ಹಾಕಬೇಡಿ. ಪರಿಣಾಮ ಸರಿ ಇರುವುದಿಲ್ಲ' ಎಂದು ಹೇಳಿ ಕರೆ ಸ್ಥಗಿತಗೊಳಿಸಿದ್ದಾರೆ. ಇದರಿಂದ ಗಾಬರಿಗೊಂಡ ಶಂಕರರಾಜು ಪತ್ನಿ ಶಿವಮ್ಮ ದೂರು ದಾಖಲಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಬೆಂಗಳೂರಿನಲ್ಲಿ ಜಗದೀಶ್ ಚೌಧರಿ ಅವರನ್ನು ಬಂಧಿಸಿ, ಠಾಣೆಗೆ ಕರೆತಂದು ವಿಚಾರಣೆ ನಡೆಸಿದರು. ಈ ವೇಳೆ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಠಾಣೆಗೆ ಬಂದು ಬಿಡುಗಡೆ ಮಾಡುವಂತೆ ಆಗ್ರಹಿಸಿದರು. ಪೊಲೀಸರು ಹಾಗೂ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು.

ವಿಷಯ ತಿಳಿದು ಠಾಣೆಗೆ ಬಂದ ತುಮಕೂರು ಗ್ರಾಮಾಂತರ ಶಾಸಕ ಸುರೇಶ್ ಗೌಡ, ಅಧಿಕಾರಿಗಳಿಂದ ಮಾಹಿತಿ ಪಡೆದರು. ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸದಂತೆ ಕಾರ್ಯಕರ್ತರಿಗೆ ಮನವಿ ಮಾಡಿದರು. ಜಗದೀಶ್ ಚೌಧರಿ ಹಾಗೂ ಶಂಕರರಾಜು ಅವರ ವಿಚಾರಣೆ ನಡೆಸಿ, ಹೇಳಿಕೆ ಪಡೆದು ಬಿಡುಗಡೆಗೊಳಿಸಿದರು.

ಬಂತು ಮಾಸ್ಕ್ ನಗರದಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ವ್ಯಕ್ತಿಯೊಬ್ಬರು ಮುಖಗವಸು ಧರಿಸಿ ಓಡಾಡುತ್ತಿರುವ ದೃಶ್ಯ ಭಾನುವಾರ ಕಂಡುಬಂದಿತು –ಪ್ರಜಾವಾಣಿ ಚಿತ್ರ

1,300 ಕಡೆ 'ಈ ದೇವಾಲಯ ಅಸ್ಪೃಶ್ಯತೆ ಮುಕ್ತ ದೇವಾಲಯ' ಫಲಕ

ಹನುಮನಹಳ್ಳಿ: ದಲಿತರ ಗೃಹ ಪ್ರವೇಶ

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ಅಸ್ಪೃಶ್ಯತೆ ನಿವಾರಣೆ ಅರಿವು ಭಾರತ ನಡೆಸುತ್ತಿರುವ 'ದಲಿತರ ಗೃಹ ಪ್ರವೇಶ' ಹಾಗೂ 'ಸಮಾನತೆಗಾಗಿ ಸಹಭೋಜನ' ಕಾರ್ಯಕ್ರಮ ತಾಲ್ಲೂಕಿನ ಹನುಮನಹಳ್ಳಿಯಲ್ಲಿ ಭಾನುವಾರ ನಡೆಯಿತು.

ಶಿಕ್ಷಕ ಸುಬ್ರಮಣಿ ಅವರ ಮನೆಯಲ್ಲಿ 'ಸಮಾನತೆಗಾಗಿ ಸಹಭೋಜನ'ದಲ್ಲಿ ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ, ನಿವೃತ್ತ ಜಿಲ್ಲಾಧಿಕಾರಿ ಶಾಂತರಾಜ, ತಹಶೀಲ್ದಾರ್ ವಿ.ಗೀತಾ, ಮುಜರಾಯಿ ತಹಶೀಲ್ದಾರ್ ಶ್ರೀನಿವಾಸರೆಡ್ಡಿ, ಹಿರಿಯ ವಕೀಲ ಎಂ.ಎಸ್ ಶ್ರೀನಿವಾಸ ರೆಡ್ಡಿ, ಅರಿವು ಭಾರತ ತಂಡದ ಮುಖ್ಯಸ್ಥ ಡಾ. ಶಿವಪ್ಪ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಮುಖಂಡರು ಒಟ್ಟಿಗೆ ಕುಳಿತು ಊಟ ಮಾಡಿದರು.

ಇದಕ್ಕೂ ಮುನ್ನ ನಲ್ಲೂರಿನ ವೀರಾಂಜನೇಯ ದೇವಾಲಯಕ್ಕೆ ಪರಿಶಿಷ್ಟರ ಸಮುದಾಯದ ಒಟ್ಟಿಗೆ ಪ್ರವೇಶ ಮಾಡಲಾಯಿತು. 'ಈ ದೇಗುಲ ಸರ್ವರಿಗೂ ಪ್ರವೇಶವಿದೆ' ಎಂಬ ನಾಮ ಫಲಕ ಅಳವಡಿಸಿ. 'ಈ ದೇವಾಲಯ ಅಸ್ಪೃಶ್ಯತೆ ಮುಕ್ತ ದೇವಾಲಯ' ಎಂದು ಜಿಲ್ಲಾಧಿಕಾರಿ ಘೋಷಿಸಿದರು.

ಜಿಲ್ಲೆಯ 1,300 ದೇವಾಲಯಗಳಿಗೂ ಇದೇ ಫಲಕ ಅಳವಡಿಸುವ ಕಾರ್ಯ ಆರಂಭಿಸಿದ್ದೇವೆ ಎಂದು ಜಿಲ್ಲಾಧಿಕಾರಿ ಎಂ.ಆರ್. ರವಿ ತಿಳಿಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಎಂ.ಆರ್. ರವಿ, ಜಿಲ್ಲೆಯಲ್ಲಿ ಅರಿವು ಭಾರತ ನಡೆಸುತ್ತಿರುವ ಸಾಮಾಜಿಕ ಬದಲಾವಣೆಯ ಕೆಲಸಗಳು ರಾಜ್ಯ ಮತ್ತು ದೇಶಕ್ಕೆ ಮಾದರಿಯಾಗಲಿವೆ. ಇಲ್ಲಿನ ಪ್ರಯೋಗಗಳನ್ನು ಮತ್ತಷ್ಟು ವಿಸ್ತರಿಸುವ ಕೆಲಸ ಎಲ್ಲಾ ಕಡೆಗಳಲ್ಲೂ ನಡೆಯಬೇಕು ಎಂದು ಹೇಳಿದರು.

ಅಸಮಾನತೆ ತೊಲಗಿಸಲು ದಲಿತರಿಗಾಗಿ 'ಗೃಹ ಪ್ರವೇಶ' ಮತ್ತು 'ದೇವಾಲಯ ಪ್ರವೇಶ' ಕಾರ್ಯಕ್ರಮ-ಗಳು ಹತ್ತು ವರ್ಷದಿಂದ ನಿರಂತರವಾಗಿ ನಡೆಯುತ್ತಿದೆ. ಈಗ ಅವುಗಳನ್ನು ಬೇರೆ ಬಗೆಯಲ್ಲಿ ವಿಸ್ತರಿಸುವ ಕೆಲಸ ಮಾಡಬೇಕಿದೆ. ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಕಾರ್ಯಾಗಾರಗಳನ್ನು ಏರ್ಪಡಿಸುವ ಮೂಲಕ ಬದಲಾವಣೆಯ ವೇಗವನ್ನು ಹೆಚ್ಚಿಸಬಹುದು ಎಂದು ಹೇಳಿದರು.

ತಹಶೀಲ್ದಾರ್ ವಿ.ಗೀತಾ, ಶಿಕ್ಷಣ ಪಡೆದವರು ಸಂವಿಧಾನ ಆಶಯ ಪಾಲಿಸಬೇಕು. ತಾಲ್ಲೂಕಿನ ಎಲ್ಲಾ ದೇವಾಲಯಗಳನ್ನು ಅಸ್ಪೃಶ್ಯತೆ ಮುಕ್ತ ದೇವಾಲಯ-ವಾಗಿಸಲು ಶ್ರಮಿಸುವುದಾಗಿ ಹೇಳಿದರು. ಎಲ್ಲರಿಗೂ ಸಮಾನತೆಯ ಪ್ರತಿಜ್ಞೆ ವಿಧಿ ಬೋಧಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಹಾಗೂ ಅಧಿಕಾರಿಗಳು ಹನುಮನಹಳ್ಳಿ ಸುಬ್ರಮಣಿ ಮತ್ತು ನಲ್ಲೂರು ಸೋಮಪ್ಪ ಅವರಿಗೆ 'ಗ್ರಾಮರತ್ನ' ಪುರಸ್ಕಾರ ನೀಡಿ ಗೌರವಿಸಿದರು.

ಅರಿವು ಭಾರತ್ ಡಾ.ಜಿ.ಶಿವಪ್ಪ ಅರಿವು, ವಾರಿಧಿ ಮಂಜುನಾಥ ರೆಡ್ಡಿ, ಜಿ.ಪಂ ಮಾಜಿ ಸದಸ್ಯ ಉತ್ತನೂರು ಅರವಿಂದ್, ದಲಿತ ಮುಖಂಡ ಟಿ ವಿಜಯ ಕುಮಾರ್, ಜನಪ್ರಕಾಶನ ರಾಜಶೇಖರ ಮೂರ್ತಿ, ಪರ್ವ ಫಿಲ್ಮ್ ವಿನಯ್, ರಾಜಕಲ್ಲಹಳ್ಳಿ ಶ್ರೀನಿವಾಸ್, ನಾಗನಾಳ ರಮೇಶ್, ಕರಡುಬಂಡೆ ಮೂರ್ತಿ, ಕೊಂಡರಾಜನಹಳ್ಳಿ ಮಂಜುಳ, ವೆಂಕಟಾ ಚಲಪತಿ, ರಾಧಾಮಣಿ, ವಿ. ಜಿ. ಮಂಜುನಾಥ್, ಹನುಮನಹಳ್ಳಿ ಶ್ರೀನಿವಾಸ್, ಸುಬ್ರಮಣಿ, ಇದ್ದರು.

ಮುಳಬಾಗಿಲು ತಾಲ್ಲೂಕಿನ ಹನುಮನಹಳ್ಳಿಯಲ್ಲಿ ಸಮಾನತೆಗಾಗಿ ಸಹ ಭೋಜನದಲ್ಲಿ ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ, ಅಧಿಕಾರಿಗಳು ಮತ್ತು ಪರಿಶಿಷ್ಟರು ಒಟ್ಟಿಗೆ ಊಟ ಮಾಡಿದರು

ಮಾನವೀಯತೆ ಸದಾ ಕೆಲಸ ಮಾಡಲಿ

'ಸ್ವತಂತ್ರ ಭಾರತವು ನಮ್ಮನ್ನು ಬದಲಾವಣೆಗೆ ಒತ್ತಾಯಿಸುತ್ತಿದೆ. ಇನ್ನು ತಡಮಾಡದೆ ಎಲ್ಲಾ ಬಾಗಿಲುಗಳು ಎಲ್ಲರಿಗೂ ಮುಕ್ತವಾಗಿ ತೆರೆಯಬೇಕು. ಮನೆಯಲ್ಲಿ ಮನಸ್ಸಿನಲ್ಲಿ ಯಾರಿಗೂ ಯಾವುದೇ ತಾರತಮ್ಯ ಇರಬಾರದು. ಮಾನವೀಯತೆ ಸದಾ ಕೆಲಸ ಮಾಡುತ್ತಿರಬೇಕು' ಎಂದು ನಿವೃತ್ತ ಜಿಲ್ಲಾಧಿಕಾರಿ ಶಾಂತರಾಜ್ ಹೇಳಿದರು.

ಮೇಲಾಗಾಣಿ ಗ್ರಾಮದಲ್ಲಿ ಅಸ್ಪೃಶ್ಯತೆ ಸಡಿಲಗೊಂಡಿದ್ದು, ಸಮಸಮಾಜದ ಕನಸನ್ನು ನನಸಾಗಿಸಲು ಎಲ್ಲರೂ ಕೈಜೋಡಿಸಬೇಕು

ಎಂ.ಎಸ್ ಶ್ರೀನಿವಾಸ ರೆಡ್ಡಿ, ವಕೀಲ



ಪೋಷಕರಿಗೆ ಹೇಗೆ ಮನವರಿಕೆ ಮಾಡಲಿ?

ಅಪ್ಪ-ಅಮ್ಮ ಪಿಯುಸಿಯಲ್ಲಿ ವಿಜ್ಞಾನ ವಿಭಾಗ ತೆಗೆದುಕೊ ಅಂತಿದಾರೆ. ನನಗದರಲ್ಲಿ ಆಸಕ್ತಿ ಇಲ್ಲ. ಕಲಾವಿಭಾಗಕ್ಕೆ ಹೋಗಬೇಕಿದೆ. ಅಪ್ಪ ಅಮ್ಮನಿಗೆ ಮನವರಿಕೆ ಮಾಡಿ ಕೊಡಲು ಆಗುತ್ತಿಲ್ಲ. ಏನು ಮಾಡಲಿ?

ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ಇದು ಬಹಳ ಮನೆಗಳಲ್ಲಿ ಇರುವ ಸಾಮಾನ್ಯ ಸಮಸ್ಯೆ. ಪಾಲಕರಿಗೆ ತಮ್ಮ ಮಕ್ಕಳನ್ನು ಎಂಜಿನಿಯರ್, ಡಾಕ್ಟರ್ ಮಾಡುವ ಆಸೆ. ಅದಕ್ಕಾಗಿಯೇ ಅವರು ಬಹಳಷ್ಟು ಶ್ರಮಿಸಿರುತ್ತಾರೆ. ಮಕ್ಕಳಿಗೆ ಅದು ಇಷ್ಟ ಇರುವುದಿಲ್ಲ. ಇದು ಸೂಕ್ಷ್ಮವಾದ ಸಮಸ್ಯೆ. ಯಾರ ಪರವಾಗಿ ಮಾತನಾಡಿದರೂ ನೂರಕ್ಕೆ ನೂರು ಸರಿಯಾಗುವುದಿಲ್ಲ.

ಕೆಲವು ಸಲ ಮಕ್ಕಳಿಗೆ ತಮ್ಮ ಸಾಮರ್ಥ್ಯದ ಅರಿವು ಇರುವುದಿಲ್ಲ. ಹನುಮಂತನಿಗೆ ತನಗೆ ಸಮುದ್ರವನ್ನು ಹಾರುವ, ಲಂಕೆಯನ್ನು ತಲುಪುವ ಶಕ್ತಿ ಇದೆ ಎನ್ನುವುದರ ಅರಿವು ಇರಲಿಲ್ಲ. ಉಳಿದವರಿಗೆ ಮಾತ್ರ ಹನುಮಂತನ ಶಕ್ತಿಯ ಮೇಲೆ ವಿಶ್ವಾಸ ಇತ್ತು. ಉಳಿದವರು ಅವನನ್ನು ಹೊಗಳಿ, ಪ್ರೋತ್ಸಾಹಿಸಿದ ನಂತರ, ಆತ ಸಮುದ್ರವನ್ನು ಹಾರಿ, ಲಂಕೆಯನ್ನು ತಲುಪಿ, ಸೀತಾಮಾತೆಯನ್ನು ಹುಡುಕಿ, ಮಾತನಾಡಿಸಿಕೊಂಡು, ಲಂಕೆಯನ್ನು ದಹಿಸಿ, ವಾಪಸು ಬರುತ್ತಾನೆ. ಹೀಗೆಯೇ ನಮ್ಮ ಮಕ್ಕಳಲ್ಲಿಯೂ ಅಪಾರವಾದ ಶಕ್ತಿ ಇರುತ್ತದೆ. ಅವರು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು. ಅವರ ಸುಪ್ತಶಕ್ತಿಯ ಬಗ್ಗೆ ಬಹಳ ಸಲ ಪಾಲಕರಿಗೆ, ಕೆಲವು ಸಲ ಶಿಕ್ಷಕರಿಗೆ ತಿಳಿದಿರುತ್ತದೆ. ಆಗ ಅವರು ಆ ಮಗುವಿನ ಮನಸ್ಸನ್ನು ಧನಾತ್ಮಕವಾಗಿ ಪ್ರೇರೇಪಿಸಲಿಕ್ಕೆ ಪ್ರಯತ್ನಿಸುವುದು ತಪ್ಪಲ್ಲ. ಕೆಲವರಿಗೆ ಇದರಿಂದ ಅನುಕೂಲವಾಗುತ್ತದೆ.

ಪಾಲಕರ/ಶಿಕ್ಷಕರ ಮಾತನ್ನು ಕೇಳಿದ ಮಕ್ಕಳು ಮುಂದೆ ಮಹತ್ತರವಾದುದ್ದನ್ನು ಸಾಧಿಸಿದ್ದು ಇದೆ. ಪಾಲಕರ/ ಶಿಕ್ಷಕರ ಮಾತಿನಂತೆ ನಡೆದು ಬಂದಿದ್ದರಿಂದ ಈ ಹಂತವನ್ನು ತಲುಪಲಿಕ್ಕೆ ಸಾಧ್ಯವಾಗಿದೆ ಎಂದು ಕೃತಜ್ಞತೆಯನ್ನು ಸಲ್ಲಿಸಿದ್ದನ್ನು ಕಾಣುತ್ತೇವೆ.

ಕೆಲವು ಸಲ, ಮಕ್ಕಳ ಇಷ್ಟದ ವಿರುದ್ಧ ಪಾಲಕರು ಒತ್ತಾಯ ಮಾಡುವುದು ಒಳ್ಳೆಯದಲ್ಲ. ಅದರಿಂದ ಧನಾತ್ಮಕವಾದ ಪರಿಣಾಮಗಳಾಗುವುದು ಕಡಿಮೆ. ಮಗುವಿನ ಆಸಕ್ತಿಗೆ ಅನುಗುಣವಾಗಿ ಪ್ರೋತ್ಸಾಹಿಸುವುದು ಒಳ್ಳೆಯದು. ಹಾಗಾದಾಗ ಮಗು ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಳ್ಳುತ್ತದೆ. 'ನಿನ್ನ ಜೀವನ, ನಿನ್ನ ಆಯ್ಕೆ. ಅದಕ್ಕೆ ನಮ್ಮ ಇತಿ ಮಿತಿಯಲ್ಲಿ ಪ್ರೋತ್ಸಾಹ ಮಾಡುವುದು ನಮ್ಮ ಕರ್ತವ್ಯ' ಎಂದು ಪಾಲಕರು ಸ್ಪಷ್ಟವಾಗಿ ಹೇಳಬಹುದು. ಇಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಸೌಹಾರ್ದಯುತವಾಗಿ ಹಂಚಿಕೊಳ್ಳಬಹುದು. ಇದರಿಂದ ಇಬ್ಬರಿಗೂ ಒಳ್ಳೆಯದಾಗುತ್ತದೆ. ಇನ್ನು, ವಿಜ್ಞಾನವನ್ನು ಓದಿದರೆ ಮಾತ್ರ ಹೆಚ್ಚು ಒಳ್ಳೆಯದು. ಬೇರೆ ವಿಷಯಗಳನ್ನು ಓದಿದರೆ ಅಷ್ಟೇನೂ ಒಳ್ಳೆಯದಲ್ಲ ಎನ್ನುವುದು ಸರಿಯಲ್ಲ. ಈಗ ಎಲ್ಲಾ ಕ್ಷೇತ್ರಗಳಲ್ಲಿಯೂ ಅವಕಾಶಗಳು ಹೇರಳವಾಗಿವೆ. ಸರಿಯಾಗಿ ಕೆಲಸವನ್ನು ಮಾಡುವವರ ಕೊರತೆ ಇದೆ. ಹಾಗಾಗಿ, ಆಸಕ್ತಿ ಇರುವ ವಿಷಯವನ್ನು ಶ್ರದ್ಧೆಯಿಂದ ಓದಿಕೊಂಡರೆ, ಸರಿಯಾಗಿ ಕೆಲಸವನ್ನು ಕಲಿತುಕೊಂಡರೆ, ಮಕ್ಕಳು ಉತ್ತಮವಾದ ಬದುಕನ್ನು ಬದುಕಬಹುದು. ಕಲೆಯ ವಿಷಯಗಳನ್ನು ಓದಿಕೊಂಡರೆ ಅವಕಾಶಗಳು ಹೇರಳವಾಗಿವೆ ಎನ್ನುವುದನ್ನು ಪಾಲಕರೂ ಅರ್ಥ ಮಾಡಿಕೊಳ್ಳಬೇಕು.

ಸರ್ಕಾರಿ/ ಖಾಸಗಿ ಕ್ಷೇತ್ರಗಳಲ್ಲಿ ಹಲವಾರು ಅವಕಾಶಗಳಿವೆ. ಇಷ್ಟವಿದ್ದರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಮರ್ಪಕವಾಗಿ ಎದುರಿಸಿ, ಬೇರೆ ಬೇರೆ ಹುದ್ದೆಗಳನ್ನು ಅಲಂಕರಿಸಬಹುದು.

ಬದುಕುವ ಛಲ ಇರುವವರಿಗೆ ಬದುಕುವುದು ಯಾವತ್ತಿಗೂ ಒಂದು ಸವಾಲಾಗಿ ಕಾಣುವುದಿಲ್ಲ. ಒಬ್ಬರಂತೆ ಒಬ್ಬರಿಲ್ಲ. ಹಾಗೆಯೇ, ಒಬ್ಬರ ಬದುಕಿನಂತೆ ಇನ್ನೊಬ್ಬರ ಬದುಕಿಲ್ಲ. ಇಷ್ಟದ ವಿಷಯವನ್ನು ಶ್ರದ್ಧೆಯಿಂದ ಓದಿ. ಜೀವನದಲ್ಲಿ ಶ್ರದ್ಧೆಯಷ್ಟೇ ಮುಖ್ಯ. ಶ್ರದ್ಧೆಗೆ ಯಶಸ್ಸು ತಾನಾಗಿಯೇ ಒಲಿದು ಬರುತ್ತದೆ ಎಂಬುದನ್ನು ಮರೆಯಬೇಡಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

49) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

ಉತ್ತರ:- ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್-ಉದ್-ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು. ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು, ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್-ಉದ್-ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್-ಉದ್-ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು.

50) ಬಕ್ಸಾರ್ ಯುದ್ಧದ ಪರಿಣಾಮಗಳು ಯಾವುವು?

ಉತ್ತರ:- ಬಕ್ಸಾರ್ ಯುದ್ಧದ ಪರಿಣಾಮಗಳು:-

1. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟು ಕೊಡಬೇಕಾಯಿತು
3. ಔದ್‌ನ ನವಾಬನಾದ ಷುಜಾ-ಉದ್-ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.

51) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?

ಉತ್ತರ:- ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು.

52) ಬಕ್ಸಾರ್ ಕದನದ ಕುರಿತು ವಿವರವಾಗಿ ಬರೆಯಿರಿ

ಉತ್ತರ: ಮೀರ್ ಖಾಸಿಂ ಒಬ್ಬ ಸಮರ್ಥ ಆಡಳಿತಗಾರ. ಈತನು ಸಹ ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು. ಎರಡು ಲಕ್ಷ ಪೌಂಡ್ ಹಣದ ಜೊತೆಗೆ ಕೆಲವು ಪ್ರದೇಶಗಳನ್ನು ಕಂಪನಿಗೆ ಬಿಟ್ಟುಕೊಟ್ಟನು. ಆದರೆ, ಶೀಘ್ರವೇ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು. ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕ ಮುಕ್ತ ಎಂದು ಘೋಷಿಸಿದನು. ಇದರಿಂದಾಗಿ ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧೆಗಿಳಿದರು. ಪರಿಣಾಮ, ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಹೊಡೆತ ಬಿದ್ದಿತು. ಬ್ರಿಟಿಷರಿಗೆ ನವಾಬನನ್ನು ವಿರೋಧಿಸಲು ಇದಿಷ್ಟೇ ಸಾಕಿತ್ತು. ಅವರು ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು. ಬ್ರಿಟಿಷರ ಕುಟಿಲತೆಯನ್ನೆಲ್ಲ ಅರಿತಿದ್ದ ಮೀರ್ ಖಾಸಿಮನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು. ಭಾರತೀಯ ವ್ಯಾಪಾರಿಗಳು ಮತ್ತು ವಿವಿಧ ಕಸುಬುದಾರರು ಅವನ ಬೆಂಬಲಕ್ಕೆ ನಿಂತರು. ಈ ನಿಟ್ಟಿನಲ್ಲಿ ಮುಂದುವರೆದ ಮೀರ್ ಖಾಸಿಮನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜ್-ಉದ್-ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಪರಿಣಾಮವಾಗಿ, ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು. ಅಂತಿಮವಾಗಿ ಯುದ್ಧದಲ್ಲಿ ಮೀರ್ ಖಾಸಿಂ ಸೋತು ಪಲಾಯನ ಮಾಡಿದರೆ, ಷಾ ಆಲಂ ಶರಣಾಗತನಾದನು. ಬ್ರಿಟಿಷ್ ಶಕ್ತಿಗೆ ತಡೆಯೊಡ್ಡುವ ಈ ಒಕ್ಕೂಟದ ಪ್ರಯತ್ನ ಸಂಪೂರ್ಣ ವಿಫಲವಾಯಿತು..

ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.

1) ಬಂಗಾಳದಲ್ಲಿ ದ್ವಿ ಪ್ರಭುತ್ವವನ್ನು ಜಾರಿಗೆ ತಂದವನು.......

2) 17ನೇ ಶತಮಾನದ ಭಾರತದಲ್ಲಿ ಯುರೋಪಿನ ವ್ಯಾಪಾರವು ....ಏಕಸ್ವಾಮ್ಯತೆಗೆ ಒಳಪಟ್ಟಿತ್ತು.

3) ಮೊದಲನೇ ಕರ್ನಾಟಿಕ್ ಯುದ್ಧವು ಇಂಗ್ಲಿಷರು ಮತ್ತು .... ರ ನಡುವೆ ನಡೆಯಿತು.

4) ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ ....

5) ಪ್ಲಾಸಿ ಕದನದಲ್ಲಿ ಇಂಗ್ಲಿಷ್ ಸೇನೆಯ ನೇತೃತ್ವ ವಹಿಸಿದ್ದವನು.................

ಉತ್ತರ:- 1) ರಾಬರ್ಟ್ ಕ್ಲೈವ್ 2) ಇಟಲಿ 3) ಫ್ರೆಂಚ್ 4) ಸರ್‌ಐರ್‌ಕೂಟ್ 5) ರಾಬರ್ಟ್ ಕ್ಲೈವ್

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಕಾಲಾನುಕ್ರಮದಲ್ಲಿ ಜೋಡಿಸಿ

1) ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು

2) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

3) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು

4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಕಾಲಾನುಕ್ರಮದಲ್ಲಿ ಜೋಡಿಸಿ

ಉತ್ತರ:- 1) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು

2) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು

3) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

PUC- PHYSICS

Chapter – 1

ELECTRIC CHARGES AND FIELDS

Problems:-

7. Four charges +q, +q, -q, -q are placed respectively at the four corners of a square of side a. Find the magnitude and direction of the electric field at the centre of the square.

Soln:- Here, $AC = \sqrt{a^2 + a^2} = \sqrt{2}\,a = BD$

$$\therefore AO = BO = CO = DO = \frac{\sqrt{2}}{2}a = \frac{a}{\sqrt{2}}$$

Step- 1. Electric field at O due to charge at A is

(............Contd)

$$E_A = \frac{1}{4\pi \epsilon_0}\frac{q}{AO^2}$$

$$= \frac{1}{4\pi \epsilon_0}\frac{2q}{a^2}, \text{ along OC}$$



Similarly, $E_B = \frac{1}{4\pi \epsilon_0}\frac{2q}{a^2}$; along OD

$$E_C = \frac{1}{4\pi \epsilon_0}\frac{2q}{a^2}, \text{ along OC}$$

$$E_D = \frac{1}{4\pi \epsilon_0}\frac{2q}{a^2}, \text{ along OD}$$

Step- 2. *Total electric field at 0 along OC,*

$$E_1 = E_A + E_C$$

$$= \frac{1}{4\pi \epsilon_0}\frac{2q}{a^2} + \frac{1}{4\pi \epsilon_0}\frac{2q}{a^2}$$

$$(\text{or})\ E_1 = \frac{1}{4\pi \epsilon_0}\frac{4q}{a^2}$$

Step- 3. ***Total electric field at 0 along OD,***

$$E_2 = E_B + E_D = \frac{1}{4\pi \epsilon_0}\frac{4q}{a^2}.$$

Step- 4. Since, E_1 and E_2 are perpendicular to each other, therefore, resultant electric field at O is

$$E = \sqrt{E_1^2 + E_2^2} = \sqrt{2E_1^2} \quad (\because E_1 = E_2)$$

$$= \sqrt{2}E_1 = \frac{1}{4\pi \epsilon_0}\frac{4\sqrt{2}q}{a^2};$$

parallel to BC or AD.

4. A Liquid drop having 6 excess electrons is kept stationary under a uniform electric field of 25.5 kVm^{-1}. The density of liquid is $1.26 \times 10^3\ kgm^{-3}$. Find the radius of the drop.

Soln:- *STEP 1* - When liquid drop is held stationary, net force acting on it is zero.

Forces acting on the drop:

i) Weight of the drop vertically downward

and

ii) Force due to electric field (F = qE) vertically upward.

Here, weight of drop, W = mg

But $m = \left(\frac{4}{3}\pi r^3\right)\rho$, where $\left(\frac{4}{3}\pi r^3\right)$ is the volume, ρ is density of liquid and r is radius of drop

$$\therefore \quad W = \frac{4}{3}\pi r^3 \rho g$$

And electric force, F = qE = 6e x E

STEP 2 - Since drop is stationary, so

$$W - F = 0 \text{ or } W = F$$

$$\text{or} \quad \frac{4}{3}\pi r^3 \rho g = 6eE$$

$$(\text{or})\ r^3 = \frac{3 \times 6eE}{4\pi\rho g}$$

Hence, $e = 1.6 \times 10^{-19} C$

$E = 25.5 \times 10^3\ Vm^{-1}$

$\rho = 1.26 \times 10^3\ kg\ m^{-3}$

$g = 9.8\ m\ s^{-2}$

$$\therefore r^3 = \frac{3 \times 6 \times 1.6 \times 10^{-19} \times 25.5 \times 10^3}{4 \times 3.142 \times 1.26 \times 10^3 \times 9.8}$$

$$= 0.0789 \times 10^{-18}$$

∴ radius of drop,

$$r = (0.0789 \times 10^{-18})^{1/3}$$

$$= 4.3 \times 10^{-7}\ m.$$

5. A pendulum bob of mass 80 mg and carrying charge of 2×10^{-8} C is at rest at a certain angle with the vertical in a horizontal uniform electric field of 20,000 Vm^{-1}. Find the tension in thread of the pendulum and the angle, it makes with the vertical.

Soln:-

Let T be the tension in the thread of the pendulum. Various forces acting on the pendulum are:

i) Weight (*mg*) of the bob of the pendulum.
ii) Tension (T) in the thread.
iii) Force (F) due to electric field (F = qE).



STEP 1 - Resolve T into two components.

i) T cos θ, which balance mg

ii) T sin θ which is equal and opposite to qE because the bob is in equilibrium

STEP 1 - Resolve T into two components.

i) T cos θ, which balance mg

ii) T sin θ which is equal and opposite to qE because the bob is in equilibrium

then, $T\cos\theta = mg$

and $T\sin\theta = qE$

STEP 2 - **Dividing (ii) by (i),**

$$\tan\theta = \frac{qE}{mg}$$

Here $q = 2 \times 10^{-8}$ C,

$E = 20{,}000\ Vm^{-1}$

$m = 80 \times 10^{-6}$ kg (1 milligram = 10^{-6} kg)

$= 8 \times 10^{-5}$ kg

$g = 9.8\ m\ S^{-2}$

(Contd.......)

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಎಜುಕೇಷನ್ ಫೌಂಡೇಷನ್

ಕೋಟಕ್ ಜೂನಿಯರ್ ಸ್ಕಾಲರ್‌ಷಿಪ್ ನೀಡುತ್ತಿದೆ.

ಅರ್ಹತೆ: ಅರ್ಜಿದಾರರು 2025ರಲ್ಲಿ ತಮ್ಮ 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ (ಎಸ್‌ಎಸ್‌ಸಿ/ಸಿಬಿಎಸ್‌ಇ/ಐಸಿಎಸ್‌ಇ) ಶೇ85ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. 2025-26ರ ಶೈಕ್ಷಣಿಕ ವರ್ಷಕ್ಕೆ 11ನೇ ತರಗತಿಗೆ ಪ್ರವೇಶ ಪಡೆದಿರಬೇಕು. ವಾರ್ಷಿಕ ಆದಾಯವು ₹ 3,20,000 ಇರಬೇಕು.

ಆರ್ಥಿಕ ಸಹಾಯ: 11 ಮತ್ತು 12ನೇ ತರಗತಿಯಲ್ಲಿ ಮಾಸಿಕ ₹ 3,500ರ ವಿದ್ಯಾರ್ಥಿವೇತನ, 21 ತಿಂಗಳವರೆಗೆ ಒಟ್ಟು₹ 73,500. ಜತೆಗೆ ಮಾರ್ಗದರ್ಶನ ಸಹಾಯ, ಶೈಕ್ಷಣಿಕ ನೆರವು, ವೃತ್ತಿ ಮಾರ್ಗದರ್ಶನ ಇರುತ್ತದೆ.

ಅರ್ಜಿ ಸಲ್ಲಿಸಲು ಕೊನೆ ದಿನ: 30-06-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/KJSP3

ಮಿರೇ ಅಸೆಟ್ ಫೌಂಡೇಷನ್

ಮಿರೇ ಅಸೆಟ್ ಫೌಂಡೇಷನ್ ಭಾರತದಾದ್ಯಂತ ಪ್ರಸ್ತುತ ಪದವಿಪೂರ್ವ ಅಥವಾ ಸ್ನಾತಕೋತ್ತರ ಕೋರ್ಸ್‌ಗಳನ್ನು ಕಲಿಯುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ.

ಅರ್ಹತೆ: ಪದವಿಪೂರ್ವ ಅಥವಾ ಸ್ನಾತಕೋತ್ತರ ಕೋರ್ಸ್‌ಗಳನ್ನು ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 8,00,000 ಮೀರಬಾರದು.

ಆರ್ಥಿಕ ಸಹಾಯ: ₹50 ಸಾವಿರ.

ಅರ್ಜಿ ಸಲ್ಲಿಸಲು ಕೊನೆ ದಿನ: 20-06-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/MAFS3

ಅಹಿಂಸಾ ಫೆಲೋಷಿಪ್

ಅಹಿಂಸಾ ಫೆಲೋಷಿಪ್ ಪದವೀಧರರಿಗಾಗಿ ಮರ್ಸಿ ಫಾರ್ ಅನಿಮಲ್ಸ್ ಇಂಡಿಯಾ ಫೌಂಡೇಷನ್ ನೀಡುತ್ತಿರುವ ಅವಕಾಶ. 8-ತಿಂಗಳ ಪೂರ್ಣಾವಧಿಯ ಈ ಫೆಲೋಷಿಪ್ ಭಾರತದಲ್ಲಿ ಪ್ರಾಣಿ ಸಂರಕ್ಷಣಾ ಕಾನೂನುಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಗಳು ಮತ್ತು ಜಿಲ್ಲಾಡಳಿತಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ಆಸಕ್ತರಿಗೆ ನೀಡಲಾಗುತ್ತದೆ.

ಅರ್ಹತೆ: 2024ರ ಡಿಸೆಂಬರ್ 31ಕ್ಕೆ 21ರಿಂದ 39 ವರ್ಷಗಳ ವಯೋಮಿತಿಯಲ್ಲಿರುವ ಭಾರತೀಯ ನಾಗರಿಕರಿಗೆ ಮುಕ್ತವಾಗಿದೆ. ಅರ್ಜಿದಾರರು ಯಾವುದೇ ವಿಭಾಗದಲ್ಲಿ ಪದವಿಯನ್ನು ಹೊಂದಿರಬೇಕು. ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಉತ್ತಮ ಸಂವಹನ ಕೌಶಲವಿರಬೇಕು.

ಆರ್ಥಿಕ ಸಹಾಯ: ₹20,000ದವರೆಗೆ ಮಾಸಿಕ ಸ್ಟೈಪೆಂಡ್ ಮತ್ತು ಇತರ ಪ್ರಯೋಜನಗಳು.

ಅರ್ಜಿ ಸಲ್ಲಿಸಲು ಕೊನೆ ದಿನ: 29-06-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/AAFM1

CMR UNIVERSITY
Private University Estd in Karnataka State by Act No. 45 of 2013
BENGALURU | RECOGNISED BY UGC

Create the Future

APPLY NOW!

ADMISSION OPEN FOR AY 2025-26

UP TO 100% SCHOLARSHIP ON KEA-FIXED TUITION FEE FOR ELIGIBLE CANDIDATES*

*T&C apply

B.Tech. School of Engineering & Technology (SOET)

PROGRAMMES OFFERED

- Computer Science & Engineering
- Computer Science & Engineering (AI & ML)
- Computer Science & Engineering (Data Science)
- Computer Engineering*
  *With specialisation in AI & ML/Internet of Things
- Computer Science and Technology*
  *With specialisation in AI & ML/Internet of Things
- Information Technology



B.Arch. School of Architecture (SOA)

PROGRAMME OFFERED

- Bachelor of Architecture
- Studio mode of learning: Engages with scales from miniature objects to metropolis.
- Maker-centered approach: Empowers students to reflect on their intentions, choices, and actions.
- Exhibition hall for student projects: Curated space showcasing student innovation and design excellence.

B.Des. School of Design (SOD)

PROGRAMMES OFFERED

B.Des.
- Communication Design
- Product Design
- Fashion Design
- Interior Design

B.Sc.
- Sound Engineering
- Visual Effects & Animation

*T&C apply

PROVIDING OPPORTUNITIES TO GET SCHOLARSHIPS WORTH ₹12 CRORES*

LIMITED SEATS AT CONCESSIONAL FEE

CET codes: B.Tech. - E257 B.Arch. - E245

COMEDK code: B.Tech. - E187 B.Arch. - E187A

We honour JEE, Comedk, CUET and all National-level tests. Direct admission for CUET students

93429 00666
admissions@cmr.edu.in
www.cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

❦ ಸುಭಾಷಿತ ❦

ಸಮಸ್ಯೆಗಳು ಎದುರಾದಾಗ ಬೇರೆಯವರನ್ನು ಅವಲಂಬಿಸುವುದಕ್ಕಿಂತ ಅವುಗಳಿಗೆ ನೀವೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿ. –ಗೌತಮ ಬುದ್ಧ

ಇ.ಡಿ ಕುರಿತು ಕೋರ್ಟ್ ಎಚ್ಚರಿಕೆಯ ಮಾತು ಏಜೆನ್ಸಿಯ ದುರ್ಬಳಕೆ ಕೊನೆಗೊಳ್ಳಲಿ

ಜಾರಿ ನಿರ್ದೇಶನಾಲಯವು (ಇ.ಡಿ) ತಮಿಳುನಾಡಿನಲ್ಲಿ ಕೈಗೊಂಡ ಕೆಲವು ಕ್ರಮಗಳ ವಿಚಾರವಾಗಿ ಸುಪ್ರೀಂ ಕೋರ್ಟ್ ಆಡಿರುವ ಟೀಕೆಯ ಮಾತುಗಳು, ಇ.ಡಿ.ಯ ಮೇಲೆ ನೇರವಾಗಿ ತಪ್ಪು ಹೊರಿಸಿದಂತೆ ಇವೆ. ಆ ಮಾತುಗಳನ್ನು ಒಂದು ಎಚ್ಚರಿಕೆ ಎಂದೂ ಪರಿಗಣಿಸಬಹುದು. ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮದಲ್ಲಿ (ಟಾಸ್ಮಾಕ್) ಅಕ್ರಮ ನಡೆದಿದೆ ಎಂದು ಆರೋಪಿಸಿ ಇ.ಡಿ ನಡೆಸುತ್ತಿದ್ದ ತನಿಖೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಇ.ಡಿ ನಡೆಸುತ್ತಿರುವ ತನಿಖೆಯ ಬಗ್ಗೆ ಗಂಭೀರ ಕಳವಳವನ್ನು ಕೋರ್ಟ್ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠ, ಮೂಲ ಅಪರಾಧದಲ್ಲಿ ಟಾಸ್ಮಾಕ್ ಭಾಗಿಯಾಗಿಲ್ಲದಿದ್ದರೂ ಮಾರ್ಚ್ 6ರಿಂದ 8ರ ನಡುವೆ ಇ.ಡಿ ಅಧಿಕಾರಿಗಳು ಚೆನ್ನೈನಲ್ಲಿರುವ ಟಾಸ್ಮಾಕ್ ಕಚೇರಿಯಲ್ಲಿ ಬಲವಂತದಿಂದ ಶೋಧ ಕಾರ್ಯಾಚರಣೆ ಹಾಗೂ ಮುಟ್ಟುಗೋಲು ಪ್ರಕ್ರಿಯೆಗಳನ್ನು ನಡೆಸಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ. ಅಕ್ರಮ ವರ್ಗಾವಣೆಗೆ ಬಳಸಲಾದ ಹಣವನ್ನು ಸೃಷ್ಟಿಸಿಕೊಡುವ ಅಪರಾಧವನ್ನು 'ಮೂಲ ಅಪರಾಧ' ಎಂದು ಗುರುತಿಸಲಾಗುತ್ತದೆ. ಭ್ರಷ್ಟಾಚಾರ, ಟೆಂಡರ್‌ನಲ್ಲಿ ಕಾನೂನಿನ ಉಲ್ಲಂಘನೆ ಹಾಗೂ ಮದ್ಯದ ಬಾಟಲಿಗಳ ಮೇಲೆ ಬೆಲೆಯನ್ನು ಹೆಚ್ಚಿನ ಮಟ್ಟದಲ್ಲಿ ನಮೂದಿಸಿದ್ದರ ಬಗ್ಗೆ ತಮಿಳುನಾಡಿನ ಸರ್ಕಾರವೇ ಪ್ರಕರಣ ದಾಖಲು ಮಾಡಿದೆ. ರಾಜ್ಯ ಸರ್ಕಾರವು ಆಗಲೇ ತನಿಖೆ ನಡೆಸುತ್ತಿದ್ದರೂ ಇ.ಡಿ ಅಲ್ಲಿ ಮಧ್ಯಪ್ರವೇಶ ಮಾಡಿದ್ದು ಏಕೆ ಎಂದು ಕೇಳಿರುವ ಪೀಠ, 'ಇ.ಡಿ ತನ್ನ ಎಲ್ಲ ಮಿತಿಗಳನ್ನೂ ಮೀರುತ್ತಿದೆ' ಎಂದು ಹೇಳಿದೆ. ಕ್ರಿಮಿನಲ್ ವಿಚಾರದಲ್ಲಿ ನಿಗಮವೊಂದರ ವಿರುದ್ಧ ಪ್ರಕರಣ ದಾಖಲು ಮಾಡಲು ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಕೋರ್ಟ್ ಕೇಳಿದೆ. ಇ.ಡಿಯನ್ನು ಉದ್ದೇಶಿಸಿ ಕೋರ್ಟ್ 'ನೀವು ಒಕ್ಕೂಟ ವ್ಯವಸ್ಥೆಯನ್ನು ಸಂಪೂರ್ಣವಾಗಿ ಉಲ್ಲಂಘಿಸುತ್ತಿದ್ದೀರಿ' ಎಂದು ಖಾರವಾಗಿ ಹೇಳಿದೆ. ಇ.ಡಿ ನಡೆಸಿದ ಶೋಧವನ್ನು ಪ್ರಶ್ನಿಸಿ ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರ ಹಾಗೂ ಟಾಸ್ಮಾಕ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಕೋರ್ಟ್ ಈ ಮಾತುಗಳನ್ನು ಹೇಳಿದೆ.



ಸರ್ಕಾರದ ಸಂಸ್ಥೆಗಳನ್ನು ಪ್ರಜೆಗಳಿಗೆ ಕಿರುಕುಳ ನೀಡುವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವುದು ಪ್ರಜಾಸತ್ತಾತ್ಮಕ ನಡೆ ಅಲ್ಲ

ನ್ಯಾಯಾಲಯವು ಈ ಹಿಂದೆಯೂ ಕೆಲವು ಪ್ರಕರಣಗಳಲ್ಲಿ ಇ.ಡಿ ನಡೆಯನ್ನು ಟೀಕಿಸಿದೆ. ಕೇಂದ್ರ ಸರ್ಕಾರದ ಈ ಏಜೆನ್ಸಿಯು ಆಧಾರ ಇಲ್ಲದ ಆರೋಪಗಳನ್ನು ಹೊರಿಸುವುದು ಒಂದು ಪದ್ಧತಿಯಾಗಿ ಆಗಿಬಿಟ್ಟಿದೆ ಎಂದು ಕೋರ್ಟ್ ಹೇಳಿತ್ತು. ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಅರ್ಜಿಯೊಂದರ ವಿಚಾರಣೆ ಸಂದರ್ಭದಲ್ಲಿ ಈ ಮಾತನ್ನು ಅದು ಹೇಳಿತ್ತು. ಜಾರಿ ನಿರ್ದೇಶನಾಲಯವು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯನ್ನು ಜನರಿಗೆ ಕಿರುಕುಳ ನೀಡಲು, ಆರೋಪಿಗಳನ್ನು ಜೈಲಿನಲ್ಲಿ ಇರಿಸಲು ಬಳಸಿಕೊಳ್ಳುತ್ತಿದೆ, ಏಜೆನ್ಸಿಯು ಅತಿಯಾಗಿ ವರ್ತಿಸುತ್ತಿದೆ, ಅಮಾನವೀಯವಾಗಿ ನಡೆದುಕೊಳ್ಳುತ್ತಿದೆ ಎಂದು ಕೂಡ ಕೋರ್ಟ್ ಹೇಳಿತ್ತು.

ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿನ ಸಂಸ್ಥೆಗಳನ್ನು ಗುರಿಯಾಗಿಸಿ, ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳ ನಾಯಕರನ್ನು ಗುರಿಯಾಗಿಸಿ ಇ.ಡಿ ಹೊಂದಿರುವ ಉತ್ಸಾಹಕ್ಕೆ ಟಾಸ್ಮಾಕ್ ಪ್ರಕರಣ ಇನ್ನೊಂದು ನಿದರ್ಶನವಾಗಿ ಕಾಣುತ್ತದೆ. ನ್ಯಾಯಾಲಯ ಆಡಿರುವ ಮಾತುಗಳನ್ನು ಈ ನೆಲೆಯಲ್ಲಿಯೇ ಅರ್ಥ ಮಾಡಿಕೊಳ್ಳಬೇಕು. ಕೇಂದ್ರದಲ್ಲಿ ಬಿಜೆಪಿ ಆಡಳಿತ ಚುಕ್ಕಾಣಿ ಹಿಡಿದ 2014ರ ನಂತರದಲ್ಲಿ, ಇ.ಡಿಯು ರಾಜಕಾರಣಿಗಳ ವಿರುದ್ಧ ಪ್ರಕರಣ ದಾಖಲಿಸುವುದು ಹಲವು ಪಟ್ಟು ಹೆಚ್ಚಾಗಿದೆ. ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಮುಖಂಡರನ್ನು ಕಿರುಕುಳಕ್ಕೆ ಗುರಿಪಡಿಸಲು ಇರುವ ಅಸ್ತ್ರಗಳಾಗಿ ಇ.ಡಿ ಮತ್ತು ಸಿಬಿಐ ಪರಿವರ್ತನೆ ಕಂಡಿವೆ. ಇ.ಡಿ ತನಿಖೆಯನ್ನು ಎದುರಿಸಿದ ಹಲವರು ಬಿಜೆಪಿ ಸೇರಿದ ನಂತರದಲ್ಲಿ ತನಿಖೆಯ ಬಿಸಿಯಿಂದ ಪಾರಾಗಿರುವುದೂ ಇದೆ. ಇ.ಡಿ ದಾಖಲಿಸುವ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣವು ಬಹಳ ಕಡಿಮೆ ಇದೆ. 2023ರ ಜನವರಿವರೆಗೆ ಇ.ಡಿ ದಾಖಲಿಸಿದ 5,906 ಪ್ರಕರಣಗಳ ಪೈಕಿ 25ರಲ್ಲಿ ಮಾತ್ರ ಶಿಕ್ಷೆ ಆಗಿದೆ. ಅಂದರೆ, ಬಹುತೇಕ ಪ್ರಕರಣಗಳನ್ನು ದಾಖಲು ಮಾಡಿದ್ದು ಕಿರುಕುಳ ನೀಡುವ ಉದ್ದೇಶದಿಂದ ಎಂಬುದು ಗೊತ್ತಾಗುತ್ತದೆ. ಸರ್ಕಾರದ ಸಂಸ್ಥೆಗಳನ್ನು ಪ್ರಜೆಗಳಿಗೆ ಕಿರುಕುಳ ನೀಡುವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವುದು ಪ್ರಜಾಸತ್ತಾತ್ಮಕ ನಡೆ ಅಲ್ಲ. ಇಂತಹ ಏಜೆನ್ಸಿಗಳನ್ನು ರಾಜಕೀಯ ವಿರೋಧಿಗಳ ನೇತೃತ್ವದ ಸರ್ಕಾರಗಳ ವಿರುದ್ಧ ಬಳಕೆ ಮಾಡುವುದು ಒಕ್ಕೂಟ ವ್ಯವಸ್ಥೆಗೆ ಬೆದರಿಕೆ ಒಡ್ಡಿದಂತೆ.

ಮಗನ ಜೀವ ತೆಗೆದಿದ್ದ ಸೈನಿಕನ ಆತಿಥ್ಯ ಸ್ವೀಕರಿಸಿದ್ದು ಆ ಅಪ್ಪನಲ್ಲಿ ಮಿಶ್ರ ಭಾವವನ್ನು ಸ್ಫುರಿಸಿತು

ಯುದ್ಧ: ಖೇತ್ರಪಾಲ್–ನಾಸೇರ್ ದೃಷ್ಟಾಂತ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

'ಶಾಂತಿಕಾಲದಲ್ಲಿ ಮಕ್ಕಳು ತಮ್ಮ ಅಪ್ಪಂದಿರ ಅಂತ್ಯಸಂಸ್ಕಾರ ನಡೆಸುತ್ತಾರೆ, ಯುದ್ಧದ ಸಂದರ್ಭದಲ್ಲಿ ಅಪ್ಪಂದಿರು ತಮ್ಮ ಮಕ್ಕಳ ಅಂತ್ಯಸಂಸ್ಕಾರ ನಡೆಸುತ್ತಾರೆ' ಎಂದು ಗ್ರೀಕ್ ಇತಿಹಾಸಕಾರ ಹೆರೊಡೋಟಸ್ 2,000ಕ್ಕೂ ಹೆಚ್ಚು ವರ್ಷಗಳ ಹಿಂದೆ ಹೇಳಿದ್ದ. ಭಯೋತ್ಪಾದಕರು ಜನರನ್ನು ಕೊಂದಾಗ ಯಾರು ಯಾರ ಅಂತ್ಯಸಂಸ್ಕಾರ ನಡೆಸುತ್ತಾರೋ, ಯಾರಿಗೆ ಗೊತ್ತು?

ನನ್ನ ಮನಸ್ಸು 1971ರ ಬಾಂಗ್ಲಾ ಯುದ್ಧದ ನೆನಪುಗಳತ್ತ ಹೊರಳುತ್ತಿದೆ. ಸೇನೆಯಲ್ಲಿದ್ದ ನಾವು ಆಗ 20ರ ಹರೆಯದವರು. ಯುದ್ಧದ ಮಾತುಗಳು ಕೇಳಿಬರುತ್ತಿದ್ದವು. ಪೂರ್ವ ಪಾಕಿಸ್ತಾನದಲ್ಲಿ ಮಿಲಿಟರಿ ಕಾನೂನು ಹೇರಲಾಗಿತ್ತು. ಶೇಖ್ ಮುಜೀಬುರ್ ರೆಹಮಾನ್ ಸೇರಿದಂತೆ ಹಲವರನ್ನು ಅಲ್ಲಿ ಬಂಧಿಸಲಾಗಿತ್ತು. ಅಲ್ಲಿಂದ ಭಾರತದತ್ತ ನುಗ್ಗಿ ಬರುತ್ತಿದ್ದ ನಿರಾಶ್ರಿತರನ್ನು ಶಿಬಿರಗಳಲ್ಲಿ ಇರಿಸಲಾಗಿತ್ತು. ನಿರಾಶ್ರಿತರು ಭಾರತದತ್ತ ಬರುವುದನ್ನು ತಡೆಯುವುದು ಸಾಧ್ಯವೇ ಇಲ್ಲದ ಪರಿಸ್ಥಿತಿ ಎದುರಾದಾಗ, ಅಲ್ಲಿನ ಜನರನ್ನು ಪಾಕಿಸ್ತಾನದ ಸೇನೆಯ ಹಿಡಿತದಿಂದ ಬಿಡುಗಡೆಗೊಳಿಸಲು ಭಾರತೀಯ ಸೇನೆಯು ಆಕ್ರಮಣ ನಡೆಸಬೇಕಾಯಿತು.

ಪಾಕಿಸ್ತಾನದ ಸೇನೆಯು ಅವಮಾನಕಾರಿ ಸೋಲು ಕಂಡಿತು. ಈ ಯುದ್ಧದಲ್ಲಿ ಪಾಕಿಸ್ತಾನದ 6,000 ಸೈನಿಕರು ಮೃತಪಟ್ಟರು, ಭಾರತದ 2,000 ಯೋಧರು ಇನ್ನಿಲ್ಲವಾದರು. ಗಡಿ ಪ್ರದೇಶಗಳಲ್ಲಿನ ನೂರಾರು ನಾಗರಿಕರು ಜೀವ ಕಳೆದುಕೊಂಡರು, ಸಹಸ್ರಾರು ಮಂದಿಯ ಜೀವನಾಧಾರ ನಾಶವಾಯಿತು.

ನನ್ನ ಬ್ಯಾಚ್‌ನ ಯುವಕ, ಸೆಕೆಂಡ್ ಲೆಫ್ಟಿನೆಂಟ್ ಅರುಣ್ ಖೇತ್ರಪಾಲ್ ಅವರು ಪಶ್ಚಿಮದ ಗಡಿಯಲ್ಲಿ ಸುಟ್ಟುಹೋಗುತ್ತಿದ್ದ ತಮ್ಮ ಯುದ್ಧಟ್ಯಾಂಕ್‌ನಲ್ಲಿ ನಿಂತು, ಕೊನೆಯ ಉಸಿರಿರುವವರೆಗೂ ಧೈರ್ಯದಿಂದ ಹೋರಾಡಿ ಹುತಾತ್ಮರಾದರು. ಅವರಿಗೆ ದೇಶದ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ 'ಪರಮವೀರ ಚಕ್ರ' ನೀಡಿ ಗೌರವಿಸಲಾಯಿತು. ಅವರ ತಂದೆ ಬ್ರಿಗೇಡಿಯರ್ ಎಂ.ಎಲ್. ಖೇತ್ರಪಾಲ್ ಅವರೂ ಹಿಂದೆ ಯುದ್ಧದಲ್ಲಿ ಭಾಗಿಯಾಗಿದ್ದವರೇ. ದುಃಖತಪ್ತರಾಗಿ ತಮ್ಮ ಮಗನ ಅಂತಿಮಸಂಸ್ಕಾರ ನೆರವೇರಿಸಿದ ಅವರು 'ದೇಶದ ರಕ್ಷಣೆಗಾಗಿ ಪ್ರಾಣ ಅರ್ಪಿಸಿದ ನನ್ನ ಮಗನ ಬಗ್ಗೆ ಹೆಮ್ಮೆಯಿದೆ' ಎಂದು ಹೇಳಿದ್ದರು.

ಖೇತ್ರಪಾಲ್ ಅವರು ತಮಗೆ 81 ವರ್ಷ ವಯಸ್ಸಾದಾಗ, ತಾವು ಜನಿಸಿದ್ದ ಪಾಕಿಸ್ತಾನದ ಸರಗೋಧಾಕ್ಕೆ ಭೇಟಿ ನೀಡಿದ್ದರು. ದೇಶ ವಿಭಜನೆಗೂ ಮೊದಲು ಅವರು ಜನಿಸಿದ್ದರು. ಅಲ್ಲಿ ಅವರಿಗೆ ತಮ್ಮ ಹಳೆಯ ದಿನಗಳೆಲ್ಲ ನೆನಪಾದವು. ಲಾಹೋರ್ ವಿಮಾನ ನಿಲ್ದಾಣದಲ್ಲಿ ಅವರನ್ನು ಬ್ರಿಗೇಡಿಯರ್ ಖ್ವಾಜಾ ಮೊಹಮ್ಮದ್ ನಾಸೆರ್ ಬರಮಾಡಿಕೊಂಡರು. ಬ್ರಿಗೇಡಿಯರ್ ಖೇತ್ರಪಾಲ್ ಅವರಿಗೆ ಬ್ರಿಗೇಡಿಯರ್ ನಾಸೆರ್ ಅವರೇ ಆತಿಥ್ಯ ನೀಡಿದರು. ಖೇತ್ರಪಾಲ್ ಅವರು ನಾಸೆರ್ ಅವರ ಮನೆಯಲ್ಲಿ ಅವರ ಕುಟುಂಬದ ಜೊತೆ ಮೂರು ದಿನ ಇದ್ದರು.

ನಾಸೆರ್ ಮತ್ತು ಅವರ ಕುಟುಂಬದವರು ತಮಗೆ ತೋರಿದ ಗೌರವ ಕಂಡು ಖೇತ್ರಪಾಲ್ ಅವರು ಭಾವಪರವಶರಾಗಿದ್ದರು. ಖೇತ್ರಪಾಲ್ ಅವರನ್ನು ಬಹಳ ವಿಶೇಷವಾದ ವ್ಯಕ್ತಿಯೆಂಬಂತೆ ಅಲ್ಲಿ ನೋಡಿಕೊಳ್ಳಲಾಗಿತ್ತು. ಆದರೂ ತಮ್ಮ ನಡುವೆ ಏನೋ ಸರಿ ಇಲ್ಲ ಎಂದು ಖೇತ್ರಪಾಲ್ ಅವರಿಗೆ ಅನ್ನಿಸಿತು. ಖೇತ್ರಪಾಲ್ ಅವರು ವಾಪಸ್ಸಾಗಬೇಕಿದ್ದ ಹಿಂದಿನ ರಾತ್ರಿ ನಾಸೆರ್ ಅವರು ಬಹಳ ಪ್ರಯತ್ನಪೂರ್ವಕವಾಗಿ ಒಂದು ವಿಷಯ ಹೇಳಿದರು. 'ಸರ್, ನಿಮಗೆ ನಾನು ವರ್ಷಗಳಿಂದ ಹೇಳುವುದೊಂದು ಇತ್ತು. ಆದರೆ ನಿಮ್ಮನ್ನು ಸಂಪರ್ಕಿಸುವುದು ಹೇಗೆಂಬುದು ಗೊತ್ತಾಗಿರಲಿಲ್ಲ... ಈಗ ನಾವು ಆತ್ಮೀಯರಾಗಿಬಿಟ್ಟಿದ್ದೇವೆ. ಇದು ನನ್ನ ಕೆಲಸವನ್ನು ಇನ್ನಷ್ಟು ಕಠಿಣವಾಗಿಸಿದೆ. ಇದು, ಭಾರತದಲ್ಲಿ ರಾಷ್ಟ್ರೀಯ ಹೀರೊ ಆಗಿರುವ ನಿಮ್ಮ ಮಗನಿಗೆ ಸಂಬಂಧಿಸಿದ್ದು' ಎಂದು ಮಾತು ಶುರುಮಾಡಿದರು.

'ಆ ಕೆಟ್ಟ ದಿನ ನಿಮ್ಮ ಮಗ ಮತ್ತು ನಾನು ಸೈನಿಕರಾಗಿದ್ದೆವು. ಒಬ್ಬರಿಗೆ ಇನ್ನೊಬ್ಬರು ಗೊತ್ತಿರಲಿಲ್ಲ. ನಾವಿಬ್ಬರೂ ನಮ್ಮ ದೇಶದ ಗೌರವಕ್ಕಾಗಿ, ರಕ್ಷಣೆಗಾಗಿ ಹೋರಾಡುತ್ತಿದ್ದೆವು. ನಿಮ್ಮ ಮಗ ನನ್ನ ಕೈಯಲ್ಲಿ ಪ್ರಾಣಬಿಟ್ಟ ಎಂಬುದನ್ನು ಹೇಳಲು ವಿಷಾದವಾಗುತ್ತಿದೆ. ಅರುಣ್ ತೋರಿದ ಧೈರ್ಯ ಅಸಾಮಾನ್ಯವಾಗಿತ್ತು, ಅವರು ತಮ್ಮ ಟ್ಯಾಂಕ್ ಅನ್ನು ನಿರ್ಭೀತಿಯಿಂದ ಮುನ್ನುಗ್ಗಿಸಿದರು. ತಮ್ಮ ಜೀವದ ಬಗ್ಗೆ ಲೆಕ್ಕಿಸಲೇ ಇಲ್ಲ. ಕೊನೆಯಲ್ಲಿ ನಾವಿಬ್ಬರು ಮಾತ್ರವೇ ಉಳಿದುಕೊಂಡಿದ್ದೆವು. ಪರಸ್ಪರರನ್ನು ಗುರಿಯಾಗಿಸಿ ಇಬ್ಬರೂ ಏಕಕಾಲದಲ್ಲಿ ಗುಂಡು ಹಾರಿಸಿದೆವು. ನಾನು ಉಳಿಯಬೇಕು, ಅರುಣ್ ಸಾಯಬೇಕು ಎಂಬುದು ವಿಧಿಯ ತೀರ್ಮಾನವಾಗಿತ್ತು... ನಿಮ್ಮ ಮಗ ಮಾಡಿದ ಕೆಲಸಕ್ಕೆ ನನ್ನದೊಂದು ಸೆಲ್ಯೂಟ್, ನಿಮಗೂ ನನ್ನದೊಂದು ಸೆಲ್ಯೂಟ್... ಕೊನೆಯಲ್ಲಿ ಪರಿಗಣನೆಗೆ ಬರುವುದು ವ್ಯಕ್ತಿತ್ವ ಮತ್ತು ಮೌಲ್ಯ ಮಾತ್ರ' ಎಂದು ನಾಸೆರ್ ಹೇಳಿದರು.

ಖೇತ್ರಪಾಲ್ ಮೌನಕ್ಕೆ ಜಾರಿದರು. ತಮ್ಮ ಪುತ್ರನ ಜೀವ ತೆಗೆದಿದ್ದ ಸೈನಿಕನ ಆತಿಥ್ಯ ಸ್ವೀಕರಿಸಿದ್ದು ಮಿಶ್ರ ಭಾವವನ್ನು ಸ್ಫುರಿಸಿತು. ಸೈನಿಕರಾಗಿದ್ದ ಖೇತ್ರಪಾಲ್ ತಮಗೆ ಆತಿಥ್ಯ ನೀಡಿದ ಧೀರ ಸೈನಿಕನನ್ನು ಮೆಚ್ಚಿಕೊಂಡರು. ನಾಸೆರ್ ನೇತೃತ್ವದ ಯುದ್ಧ ಟ್ಯಾಂಕ್‌ಗಳ ತಂಡವನ್ನು ಖೇತ್ರಪಾಲ್ ಅವರ ಪುತ್ರ ನಾಶಪಡಿಸಿದ್ದರು. ಅನುಕಂಪ ಎಂಬುದು ಎಲ್ಲೆಡೆಯೂ ಕಾಣುವಂಥದ್ದು, ಅದು ರಾಷ್ಟ್ರೀಯತೆಯನ್ನೂ ಮೀರಿ ನಿಲ್ಲುತ್ತದೆ ಎಂಬುದನ್ನು, ಮನಸ್ಸಿಗೆ ನಾಟುವ ಈ ಪ್ರಸಂಗವು ಹೇಳುತ್ತದೆ.

ಪಾಕಿಸ್ತಾನದ ಜೊತೆ ಕದನ ವಿರಾಮಕ್ಕೆ ಭಾರತ ಒಪ್ಪಿದ್ದನ್ನು ಕೇಳಿ, ಮನೆಯ ಜಗುಲಿಗಳಲ್ಲಿ ಆರಾಮವಾಗಿ ಕುಳಿತಿದ್ದ ಯುದ್ಧದಾಹಿಗಳು ಉನ್ಮಾದಕ್ಕೆ ಬಿದ್ದವರಂತೆ ವರ್ತಿಸಿದ್ದರು. ಡೊನಾಲ್ಡ್ ಟ್ರಂಪ್ ಹೇಳಿದ್ದಕ್ಕಾಗಿ ಕದನ ವಿರಾಮಕ್ಕೆ ಪ್ರಧಾನಿ ನರೇಂದ್ರ ಮೋದಿ ಒಪ್ಪಿದ್ದಾರೆ ಎಂದು ವಿರೋಧ ಪಕ್ಷಗಳ ಕೆಲವರು ಟೀಕಿಸಿದರು. ಮಧ್ಯಪ್ರದೇಶದ ಸಚಿವರೊಬ್ಬರು ಕರ್ನಲ್ ಸೋಫಿಯಾ ಖುರೇಷಿ ಅವರ ಬಗ್ಗೆ ಕೆಳಮಟ್ಟದ ಮಾತು ಆಡಿ ತಮ್ಮ ಮಾನವನ್ನು ತಾವೇ ಕಳೆದುಕೊಂಡರು.

ಆರಾಮ ಕುರ್ಚಿಯಲ್ಲಿ ಕುಳಿತು ರಕ್ತಕ್ಕಾಗಿ ಹಾತೊರೆಯುವವರನ್ನು, 'ಎಕ್ಸ್'ನಲ್ಲಿ ಸೇನಾನಿಗಳಂತೆ ವರ್ತಿಸುವವರನ್ನು ಉದ್ದೇಶಿಸಿ ಸೇನಾಪಡೆಯ ನಿವೃತ್ತ ಮುಖ್ಯಸ್ಥ ಎಂ.ಎಂ. ನರವಣೆ ಅವರು, ಯುದ್ಧವೆಂದರೆ ಬಾಲಿವುಡ್‌ನ ರೊಮ್ಯಾಂಟಿಕ್ ಸಿನಿಮಾ ಅಲ್ಲ ಎಂದು ಎಚ್ಚರಿಸಿದರು. ಸಶಸ್ತ್ರ ಪಡೆಯ ಸೈನಿಕನು ದೇಶವನ್ನು ರಕ್ಷಿಸಲು, ಆದೇಶ ಬಂದಾಗ ಆಕ್ರಮಣ ನಡೆಸಲು ಯಾವತ್ತಿಗೂ ಸಿದ್ಧನಾಗಿರುತ್ತಾನೆ. ಆದರೆ ಆತ ಯುದ್ಧವನ್ನು ಬಯಸುವುದಿಲ್ಲ. ಆತ ಶಾಂತಿಯ ಪರ. ನರವಣೆ ಹೇಳಿದಂತೆ, ರಾಜತಾಂತ್ರಿಕ ಮಾರ್ಗ ಮತ್ತು ಮಾತುಕತೆಯು ಮೊದಲ ಆಯ್ಕೆಯಾಗಿರಬೇಕು.

ಭವಿಷ್ಯದಲ್ಲಿ ಪಾಕಿಸ್ತಾನಕ್ಕೆ ಮತ್ತು ಭಯೋತ್ಪಾದನೆಗೆ ಭಾರತ ಹೇಗೆ ಪ್ರತಿಕ್ರಿಯಿಸಬೇಕು ಎಂಬ ಪ್ರಶ್ನೆ ಇಂದಿಗೂ ಇದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸ್ಪಷ್ಟವಾಗಿ ಉತ್ತರಿಸಿದ್ದಾರೆ. ಪಾಕಿಸ್ತಾನವು ಭಯೋತ್ಪಾದನೆಗೆ ಪ್ರಚೋದನೆ ನೀಡಿದರೆ, ಅದನ್ನು ಭಯೋತ್ಪಾದಕರಿಗೆ ಸಮನಾಗಿ ಕಾಣಲಾಗುತ್ತದೆ, ಪ್ರತೀಕಾರವು ತ್ವರಿತವಾಗಿ ಇರಲಿದೆ ಎಂದು ಹೇಳಿದ್ದಾರೆ.

ಆದರೆ ಈ ಉದ್ದೇಶ ಈಡೇರಬೇಕು ಎಂದಾದರೆ, ಭಾರತವು ಬಲಿಷ್ಠವಾದ ಮಿಲಿಟರಿಯನ್ನು ಕಟ್ಟಬೇಕಿದೆ. ಬಲಿಷ್ಠವಾದ ಅರ್ಥವ್ಯವಸ್ಥೆ ಇಲ್ಲದೆ ಭಾರತವು ಬಲಿಷ್ಠವಾದ ಮಿಲಿಟರಿಯನ್ನು ಕಟ್ಟಲು ಆಗದು. ಸಾಮಾಜಿಕ ಸೌಹಾರ್ದ ಇಲ್ಲದ ವಿನಾ ದೇಶದಲ್ಲಿ ಸಮೃದ್ಧಿ ಇರುವುದಿಲ್ಲ. ಧ್ರುವೀಕೃತ ಸಮಾಜದಲ್ಲಿ ಸಂಘರ್ಷ ನಿರಂತರವಾಗಿದ್ದರೆ ವಿದೇಶಿ ಹೂಡಿಕೆ ಹೊರಹೋಗುತ್ತದೆ, ಉದ್ದಿಮೆಗಳು ಬೆಳೆಯುವುದಿಲ್ಲ. ಯುವಕರಿಗೆ ನೌಕರಿ ಇದ್ದರೆ, ಅವರ ಮನಸ್ಸನ್ನು ಕೆಡಿಸಿ ಕೈಗೆ ಬಂದೂಕು ಕೊಡುವುದು ಸುಲಭವಲ್ಲ.

ಪಾಕಿಸ್ತಾನದ ಮಿಲಿಟರಿಯನ್ನು ನಿಶ್ಶಕ್ತಗೊಳಿಸಿದರೂ ಅಲ್ಲಿಂದ ನಡೆಯುವ ಭಯೋತ್ಪಾದನೆ ಸುಲಭಕ್ಕೆ ನಿಲ್ಲುವುದಿಲ್ಲ. ಐಎಸ್‌ಐ ಮೂಲಕ ಪಾಕಿಸ್ತಾನದ ಸೇನೆಯು ನಾಗರಿಕ ಸರ್ಕಾರವನ್ನು ನಿಯಂತ್ರಿಸುತ್ತದೆ, ಭಯೋತ್ಪಾದನೆಯನ್ನು ಪೋಷಿಸುತ್ತದೆ, ಇಸ್ಲಾಮಿಕ್ ಮೂಲಭೂತವಾದಿಗಳ ಜೊತೆ ನಿಕಟ ಸಂಪರ್ಕ ಹೊಂದಿದೆ. ಭಯೋತ್ಪಾದಕರಿಗೆ ಮತ್ತು ಪಾಕಿಸ್ತಾನದ ಸೇನೆಯಲ್ಲಿನ ಕೆಲವರಿಗೆ ಶಾಂತಿ ಬೇಕಿಲ್ಲ.

ಭಾರತವು ಗಟ್ಟಿತನ ಪ್ರದರ್ಶಿಸಬೇಕು, ಭಯೋತ್ಪಾದನೆಯನ್ನು ಎದುರಿಸಲು ಶಕ್ತಿಶಾಲಿಯಾದ ಗೂಢಚರ ಜಾಲವನ್ನು ಕಟ್ಟಬೇಕು. ಇದೇ ಹೊತ್ತಿನಲ್ಲಿ ಎಲ್ಲ ಧರ್ಮಗಳ ಮೂಲಭೂತವಾದಿಗಳನ್ನೂ ಏಕಾಂಗಿಯಾಗಿಸಬೇಕು. ಎಲ್ಲ ಜಾತಿ ಮತ್ತು ಧರ್ಮಗಳನ್ನು ಸಮಾನವಾಗಿ ಕಾಣಬೇಕು. ಶಕ್ತಿಶಾಲಿಯಾದ ಮಿಲಿಟರಿಯನ್ನು ಕಟ್ಟುವುದು ಎಷ್ಟು ಮುಖ್ಯವೋ ಇದೂ ಅಷ್ಟೇ ಮುಖ್ಯ.

ಲೇಖಕ: ಭಾರತೀಯ ಸೇನೆಯ ನಿವೃತ್ತ ಕ್ಯಾಪ್ಟನ್

ಚುರುಮುರಿ

ಹಾವಿನ ಹೆಸರಿನಲ್ಲಿ...

• ಸುಮಂಗಲಾ

'ಅಲ್ಲಾ... ಒಬ್ಬ ಮನುಷ್ಯಂಗೆ ಹಾವು ಎಷ್ಟ್ ಸಲ ಕಚ್ಚಬೌದು?' ಬೆಕ್ಕಣ್ಣ ಸುದ್ದಿ ಓದುತ್ತ ಕೇಳಿತು.

'ಭಾಳ ಅಂದ್ರ ಜೀವಮಾನದಾಗೆ ಮೂರ್ನಾಲ್ಕು ಸಲ ಕಚ್ಚಬೌದೇನೋ' ಎಂದೆ.

'ಮಧ್ಯಪ್ರದೇಶದಾಗೆ ಒಬ್ಬನೇ ವ್ಯಕ್ತಿಗೆ 38 ಸಲ ಹಾವು ಕಚ್ಚೈತಂತೆ' ಎಂದಿತು ಬೆಕ್ಕಣ್ಣ.

'ಹಾವಿನ ದ್ವೇಷ ಹನ್ನೆರಡು ವರ್ಷ ಅಂತಾರಲ್ಲ... ಹಂಗೆ ಹಾವುಗಳು ಅವನನ್ನೇ ಹುಡುಕ್ಕೊಂಡು ಹೋಗಿ ಕಚ್ಚಿರಬಹುದು. ಅಷ್ಟ್ ಸಲ ಹಾವು ಕಚ್ಚಿದ್ರೂ ಅವಂಗೆ ಏನೂ ಆಗಿಲ್ಲೇನು?' ಎಂದೆ ಅಚ್ಚರಿಯಿಂದ.

'ಏನೂ ಆಗಿಲ್ಲ... ಎದಕ್ಕಂದ್ರೆ ಹಾವು ಕಚ್ಚಿದ್ದು ಕಾಗದದ ಮ್ಯಾಗೆ, ಅಂದ್ರ ನಕಲಿ ದಾಖಲೆವಳಗೆ! ಅಸಲಿಗೆ ಅವಂಗ ಹಾವೂ ಕಚ್ಚಿಲ್ಲ, ಪರಿಹಾರಧನ ಅವನ ಹೆಸರಿಗೂ ಹೋಗಿಲ್ಲ, ಬರೇ ವಂಚನೆ' ಎನ್ನುತ್ತ ಬೆಕ್ಕಣ್ಣ ಸುದ್ದಿ ತೋರಿಸಿತು.

ಸುಮಾರು 219 ಮಂದಿಗೆ ಹೊಲದಲ್ಲಿ ಕೆಲಸ ಮಾಡುವಾಗ ಹಾವು ಕಚ್ಚಿದೆ ಅಂತ ತೋರಿಸಿ, ಸರ್ಕಾರದಿಂದ ಪರಿಹಾರಧನ ಕೊಡಿಸಿದ್ದಾರೆ. ಅವುಗಳಲ್ಲಿ ಅರ್ಧದಷ್ಟು ಸುಳ್ಳು ಹೆಸರುಗಳು. ಪ್ರಾಕೃತಿಕ ವಿಕೋಪ ನಿರ್ವಹಣೆಯಡಿ ಸರ್ಕಾರದ ಬೊಕ್ಕಸದಿಂದ ಒಟ್ಟು 11 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ನಕಲಿ ಬ್ಯಾಂಕ್ ಅಕೌಂಟಿಗೆ ವರ್ಗಾಯಿಸಿಕೊಂಡಿದ್ದಾರೆ. ಇದೆಲ್ಲದರ ಮಾಸ್ಟರ್‌ಮೈಂಡ್ ಒಬ್ಬ ಕಾರಕೂನ. ಹಾವಿನ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ಲಪಟಾಯಿಸಲಾಗಿದೆ... ಎಂದೆಲ್ಲ ಇದ್ದ ಸುದ್ದಿ ಓದಿ ನಾನು ಬೆರಗಾದೆ.

'ನಾಕೈದು ವರ್ಷದಿಂದ ನಡೆಸಿದ್ದ ವಂಚನೆ ಪ್ರಕರಣ ಇತ್ತೀಚೆಗೆ ತನಿಖೆಯಿಂದ ಹೊರಗೆ ಬಂದೈತಂತೆ. ಎಂತೆಂಥಾ ವಂಚಕರಿರತಾರೆ' ಎಂದು ಬೆಕ್ಕಣ್ಣ ಹಣೆ ಚಚ್ಚಿಕೊಂಡಿತು.

'ಎಲ್ಲಾ ಥರದ ಅವ್ಯವಹಾರದ ಪ್ರಕರಣ ಕೇಳಿದ್ವಿ. ಪಾಪದ ಹಾವಿನ ಹೆಸರಲ್ಲಿ ಇಷ್ಟ್ ದೊಡ್ಡ ಮಟ್ಟದ ವಂಚನೆ ಇದೇ ಮೊದಲನೇ ಸಲ ಕೇಳಿದ್ದು. ಅವರಿಗೆ ಛಲೋತ್ನಾಗಿ ಶಿಕ್ಷೆ ಕೊಡಬಕು' ಎಂದೆ ಸಿಟ್ಟಿನಿಂದ.

'ಈಗ ಈ ಸಂಬಂಧ ಇಪ್ಪತ್ತೊಂದು ಮಂದೀನ ಹಿಡದಾರಲ್ಲ... ಅವರನ್ನು ಖರೇ ಅಂದ್ರ ಒಂದ್ ಸಲ ಹಾವಿನ ಬಾಯಿಗೆ ಕೊಡಬಕು...' ಎನ್ನುತ್ತ ಬೆಕ್ಕಣ್ಣ ನಕ್ಕಿತು.

ದಿನದ ಟ್ವೀಟ್

ಶಿಕ್ಷಣ: ಬೇಡ ಹಿತಾಸಕ್ತಿ ಸಂಘರ್ಷ

ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಸ್ವತಂತ್ರ ನಿಯಂತ್ರಣಾ ಪ್ರಾಧಿಕಾರವನ್ನು ಸ್ಥಾಪಿಸಬೇಕು. ಶಿಕ್ಷಣ ಒದಗಿಸುವುದರ ಜೊತೆಗೆ ತನ್ನದೇ ಶಾಲೆಗಳನ್ನು ನಿಯಂತ್ರಣಕ್ಕೆ ಒಳಪಡಿಸುವ ಕೆಲಸವನ್ನೂ ಸರ್ಕಾರವೇ ನಿರ್ವಹಿಸುವುದು ಸ್ಪಷ್ಟವಾಗಿಯೂ ಹಿತಾಸಕ್ತಿ ಸಂಘರ್ಷವಾಗುತ್ತದೆ. ಸರ್ಕಾರಿ ಶಾಲೆಗಳ ವೈಫಲ್ಯಕ್ಕೆ ಇದೇ ಪ್ರಮುಖ ಕಾರಣವಾಗಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಇಲ್ಲಿಯವರೆಗೆ ಎಷ್ಟು ಜನ ನಕಲಿ ಪ್ರಮಾಣಪತ್ರ ಪಡೆದು ಪರಿಶಿಷ್ಟ ಜಾತಿಗೆ ಸೇರಿದ್ದಾರೆ ಎಂಬುದನ್ನು ಪತ್ತೆ ಮಾಡಿ ಎಂದು ಒಳಮೀಸಲಾತಿ ಕುರಿತ ಏಕಸದಸ್ಯ ಆಯೋಗಕ್ಕೆ ಪತ್ರ ಬರೆದಿದ್ದೇನೆ. ಆ ಬಳಿಕ ಅಕ್ರಮ ಪ್ರವೇಶಕ್ಕೆ ಮುಚ್ಚಳ ಬೀಳಲಿದೆ. ಸುಳ್ಳು ಪ್ರಮಾಣಪತ್ರ ಪಡೆದವರಿಗೆ ಜೈಲು ಗ್ಯಾರಂಟಿ.

ಎಚ್.ಆಂಜನೇಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 26-5-2000

• **ಸಂಘ ಪರಿವಾರದ ಆರ್ಥಿಕ ನೀತಿ ವಿರುದ್ಧ ಹರಿಹಾಯ್ದ ಅಡ್ವಾಣಿ**

ಹೈದರಾಬಾದ್, ಮೇ 25 (ಪಿಟಿಐ)– ಸಂಘ ಪರಿವಾರದ ಆರ್ಥಿಕ ನೀತಿಯನ್ನು ಕಟುವಾಗಿ ಟೀಕಿಸುವ ಮೂಲಕ ಕೇಂದ್ರ ಗೃಹ ಸಚಿವ ಎಲ್.ಕೆ. ಅಡ್ವಾಣಿ ಅವರು ಇಂದು ಇಲ್ಲಿ ಅಚ್ಚರಿಯನ್ನುಂಟು ಮಾಡಿದರು.

'ಸ್ವದೇಶಿ' ಭಾವನೆಯನ್ನು ಬಹುರಾಷ್ಟ್ರೀಯ ಕಂಪನಿಗಳ ವಿರೋಧಿ ಹಾಗೂ ವಿದೇಶಿ ತಂತ್ರಜ್ಞಾನದ ವಿರೋಧಿ ಎಂದು ಅರ್ಥೈಸುವುದನ್ನು ಪ್ರಬಲವಾಗಿ ವಿರೋಧಿಸಿದ ಅವರು, ಸ್ವದೇಶಿ ಎಂಬ ಪದದ ಮೂಲಕ ನಾವು ಹಿಂದಕ್ಕೆ ಹೋಗುವಂತಾಗಬಾರದು ಎಂದರು.

ವಾಜಪೇಯಿ ನೇತೃತ್ವದ ಸರ್ಕಾರದ ಆರ್ಥಿಕ ಧೋರಣೆಯನ್ನು ವಿರೋಧಿಸುವ ಸ್ವದೇಶಿ ಜಾಗರಣ ಮಂಚ್ ಇಲ್ಲಿ ಏರ್ಪಡಿಸಿರುವ 'ಸ್ವದೇಶಿ ಮೇಳ'ವನ್ನು ಉದ್ಘಾಟಿಸಿದ ಅವರು, 'ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದೇ ಸ್ವದೇಶಿ ತತ್ವ ಎಂದು ಅರ್ಥ ಮಾಡಿಕೊಳ್ಳಲಾಗಿದೆ. ಆದರೆ ಬದಲಾದ ದೇಶೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಗೆ ಅನುಗುಣವಾಗಿ ಸ್ವದೇಶಿ ಪದದ ವ್ಯಾಖ್ಯೆಯನ್ನು ಬದಲಾಯಿಸಿಕೊಳ್ಳಬೇಕು ಹಾಗೂ ಅದು ಸಕಾರಾತ್ಮಕವಾಗಿರಬೇಕು' ಎಂದರು.

• **ಕೈಗಾ ಘಟಕ: ಕೇಂದ್ರಕ್ಕೆ ಪ್ರಸ್ತಾವ**

ಬೆಂಗಳೂರು, ಮೇ 25– ಕಾರವಾರದ ಬಳಿ ಕೈಗಾದಲ್ಲಿ ಮೂರು ಮತ್ತು ನಾಲ್ಕನೇ ಅಣು ವಿದ್ಯುತ್ ಉತ್ಪಾದನಾ ಘಟಕಗಳನ್ನು ನಿರ್ಮಿಸಲು ಅಣುಶಕ್ತಿ ಆಯೋಗವು ಕೇಂದ್ರ ಸರ್ಕಾರಕ್ಕೆ ಶೀಘ್ರವೇ ಪ್ರಸ್ತಾವ ಸಲ್ಲಿಸಲಿದೆ.

'2800 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಘಟಕಗಳನ್ನು ನಿರ್ಮಿಸಲಾಗುವುದು' ಎಂದು ಅಣುಶಕ್ತಿ ಆಯೋಗದ ಅಧ್ಯಕ್ಷ ಆರ್. ಚಿದಂಬರಂ ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 26-5-1975

• **ವಿದ್ಯುಚ್ಛಕ್ತಿ ಮಂಡಳಿಗೆ ತೀವ್ರ ಹಣದ ಮುಗ್ಗಟ್ಟು: ಗ್ರಾಮ ವಿದ್ಯುದೀಕರಣಕ್ಕೆ ಧಕ್ಕೆ**

ಬೆಂಗಳೂರು, ಮೇ 25– ಐದನೇ ಯೋಜನೆಯು ಇನ್ನೂ ಇತ್ಯರ್ಥವಾಗದೆ ಡೋಲಾಯಮಾನ ಪರಿಸ್ಥಿತಿಯಲ್ಲಿ ಇರುವುದರಿಂದ, ಕರ್ನಾಟಕ ವಿದ್ಯುತ್ ಮಂಡಳಿ ತೀವ್ರ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದು, ತನ್ನ ಮಹತ್ವದ ಕಾರ್ಯಗಳಿಗೆ ಹಣಕ್ಕಾಗಿ ಕಣ್ಣುಕಣ್ಣು ಬಿಡುವ ಪರಿಸ್ಥಿತಿಯಲ್ಲಿದೆ.

ಗ್ರಾಮೀಣ ವಿದ್ಯುದೀಕರಣ, ನೀರಾವರಿ ಬಾವಿಗಳು, ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಮೊದಲಾದವು ಮಂಡಳಿಯು ತ್ವರಿತವಾಗಿ ನಿರ್ವಹಿಸಬೇಕಾದ ಕಾರ್ಯಗಳಾಗಿವೆ.

• **'ಪ್ರಧಾನಿಯದು ಕಪಟದ ಮಾತು'**

ಬರೋಡ, ಮೇ 25– ಪ್ರಧಾನಿ ಇಂದಿರಾ ಗಾಂಧಿಯವರ ಚುನಾವಣಾ ಭಾಷಣಗಳನ್ನು 'ಭ್ರಮೆ ಮತ್ತು ಕಪಟದಿಂದ ಕೂಡಿದ ಭಾಷಣ'ಗಳೆಂದು ಕರೆದ ಜನತಾರಂಗದ ಸಂಚಾಲಕ ಮೊರಾರ್ಜಿ ದೇಸಾಯಿ ಅವರು, ಗುಜರಾತ್ ಜನತೆ ಬಗ್ಗೆ ಪ್ರಧಾನಿ ವ್ಯಕ್ತಪಡಿಸಿದ ಸಹಾನುಭೂತಿ 'ಕೇವಲ ಸ್ವಾರ್ಥದಿಂದ ಕೂಡಿದ್ದು, ಅಲ್ಲದೆ ತಾತ್ಕಾಲಿಕವಾದದ್ದು' ಎಂದು ಹೇಳಿದ್ದಾರೆ.

ಇಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮೊರಾರ್ಜಿಯವರು, 'ಕೇಂದ್ರವು ಈಗ ಗುಜರಾತಿನ ಕ್ಷಾಮಪೀಡಿತ ಪ್ರದೇಶಗಳಿಗೆ ಕಾಳು ಮತ್ತು ಮೇವಿನ ಸರಬರಾಜನ್ನು ಹೆಚ್ಚಿಸಿದೆ. ಇದು ಗುಜರಾತ್ ಜನತೆಯ ಕಣ್ಣಿಗೆ ಮಣ್ಣೆರಚುವ ತಂತ್ರ. ಜೂನ್ 11ರಂದು ಕೊನೆಯ ಮತವು ಮತಪೆಟ್ಟಿಗೆಗೆ ಬಿದ್ದಿತೋ ಇಲ್ಲವೋ, ಈ ಹೆಚ್ಚಿನ ಸರಬರಾಜು ಮಾಯವಾಗುತ್ತದೆ' ಎಂದು ಹೇಳಿದರು.

ಸಂಗತ

ಪರೀಕ್ಷಾ ಫಲಿತಾಂಶ: ಭವಿಷ್ಯದ ಅಳತೆಗೋಲಲ್ಲ

ಅನುತ್ತೀರ್ಣರಾದ ಮಕ್ಕಳನ್ನು ತಾತ್ಸಾರ ಮಾಡದೆ, ವಾತ್ಸಲ್ಯದಿಂದ ಕಂಡು ಸಮಾಜದ ಆಸ್ತಿಯಾಗುವಂತೆ ಅವರನ್ನು ರೂಪಿಸಬೇಕಾಗಿದೆ

• ರೇವಣ್ಣ ಎಂ.ಜಿ.

ಕೆಲವು ದಿನಗಳ ಹಿಂದೆ ಹಬ್ಬಕ್ಕೆಂದು ಗೆಳೆಯರೊಬ್ಬರ ಮನೆಗೆ ಹೋಗಿದ್ದೆ. ಮನೆಯಲ್ಲಿ ಓಡಾಡಿಕೊಂಡಿದ್ದ ಅವರ ಮಗನನ್ನು ಕರೆದು, 'ನಿನ್ನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಏನಾಯಿತು?' ಎಂದು ಕೇಳಿದೆ. ಆತ ಪ್ರತಿಕ್ರಿಯಿಸುವ ಮುಂಚೆಯೇ ಅವನ ತಂದೆ, 'ಅಯ್ಯೋ, ಇವನಿಂದಾಗಿ ನಾನು ಊರಲ್ಲಿ ತಲೆ ಎತ್ತಿ ಓಡಾಡದಂತಾಗಿದೆ. ಫೇಲಾಗಿ ನನ್ನ ಮರ್ಯಾದೆ ಕಳೆದುಬಿಟ್ಟ' ಎಂದರು. ಈ ಮಾತಿನಿಂದ ಆ ಹುಡುಗನ ಮನಸ್ಸಿನ ಮೇಲೆ ಆಗಬಹುದಾದ ಪರಿಣಾಮವನ್ನು ನೆನೆದು ದಿಗಿಲಾಯಿತು.

ಅಂಕಗಳಿಗೆ ಗ್ರೇಡ್ ಕೊಡುವುದನ್ನು, ಫೇಲ್ ಎಂಬುದರ ಬದಲಿಗೆ ನಾಟ್ ಕಂಪ್ಲೀಟೆಡ್ ಎಂದು ನಮೂದಿಸುವ ಪದ್ಧತಿಯನ್ನು ಜಾರಿಗೆ ತಂದಿದ್ದರೂ ಒಂದೇ ವರ್ಷ ಮೂರು ಬಾರಿ ಪರೀಕ್ಷೆ ಬರೆಯಬಹುದಾದ ಅವಕಾಶವನ್ನು ಕಲ್ಪಿಸಲಾಗಿದ್ದರೂ ಜನಮಾನಸದಲ್ಲಿ ಫಲಿತಾಂಶದ ಬಗೆಗಿರುವ ನಕಾರಾತ್ಮಕ ಧೋರಣೆ ಕಡಿಮೆಯಾಗಿಲ್ಲ ಎಂಬುದಕ್ಕೆ ಇವರ ಮಾತೇ ನಿದರ್ಶನ.

ಫೇಲಾಗುವುದು ಅವಮಾನ, ಅದರಿಂದ ಅವರ ಭವಿಷ್ಯಕ್ಕೆ ಕುಂದುಂಟಾದಂತೆಯೇ ಸರಿ ಎಂಬಂತಹ ವಾತಾವರಣ ಸಮಾಜದಲ್ಲಿ ಸೃಷ್ಟಿಯಾಗಿರುವುದೇ ಪೋಷಕರ ಈ ಬಗೆಯ ಮನಃಸ್ಥಿತಿಗೆ ಕಾರಣವಿರಬಹುದು. ಯಾವುದೇ ಶೈಕ್ಷಣಿಕ ವಿದ್ಯಾರ್ಹತೆ ಗಳಿಸದೆ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಪಡೆದಿರುವ ಹಲವು ಸಿನಿಮಾ ನಟರು, ಕಲಾವಿದರು, ರಾಜಕಾರಣಿಗಳು, ಉದ್ಯಮಿಗಳು, ಕ್ರೀಡಾಪಟುಗಳ ಬಗ್ಗೆ ಹೆಮ್ಮೆಯಿಂದ ಮಾತನಾಡುವವರೂ ತಮ್ಮ ಮನೆಯ ಮಗ ಅಥವಾ ಮಗಳು ಶೈಕ್ಷಣಿಕವಾಗಿ ಹಿಂದುಳಿದಿದ್ದರೆ ಆಕಾಶವೇ ಕಳಚಿ ತಮ್ಮ ಮೇಲೆ ಬಿದ್ದಂತೆ ತೊಳಲಾಡುತ್ತಾರೆ.

ತೊದಲುವಿಕೆಯ ಕಾರಣದಿಂದ ಬಾಲ್ಯದಲ್ಲಿ ತಾತ್ಸಾರಕ್ಕೆ ಒಳಗಾದರೂ ವಿಶ್ವಮೆಚ್ಚಿದ ವಿಜ್ಞಾನಿಯಾದ ಐನ್‌ಸ್ಟೀನ್, ಶಾಲೆಗೆ ಸರಿಯಾಗಿ ಹೋಗದೆಯೂ ಸಾಧಕರಾದ ರವೀಂದ್ರನಾಥ ಟ್ಯಾಗೋರ್, ನಮ್ಮ ನಾಡಿನ ಪರಿಸರವಾದಿ ಸಾಲುಮರದ ತಿಮ್ಮಕ್ಕ, ಅನಕ್ಷರಸ್ಥರಾದರೂ ಶಾಲೆ ಕಟ್ಟಲು ಶ್ರಮಿಸಿದ ಹರೇಕಳ ಹಾಜಬ್ಬ ಅಂತಹವರ ಸಾಲು ಸಾಲು ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಆದರೂ ಫೇಲಾಗುವ ಮಕ್ಕಳು ತಾತ್ಸಾರಕ್ಕೆ ಒಳಗಾಗುತ್ತಲೇ ಇದ್ದಾರೆ.

ಒಂದೆರಡು ವರ್ಷಗಳ ಹಿಂದೆ, 8ನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆ ಪಾಸು ಮಾಡಿದ ಅಭ್ಯರ್ಥಿಯೊಬ್ಬರನ್ನು ಪತ್ರಕರ್ತರು 'ನಿಮಗೆ ಈ ಪರೀಕ್ಷೆ ಪಾಸು ಮಾಡಲೇಬೇಕು ಎಂದು ಏಕೆ ಅನ್ನಿಸಿತು?' ಎಂದು ಕೇಳಿದಾಗ, 'ನಾನು ಪಿಯುಸಿಯಲ್ಲಿ ಫೇಲಾಗಿ ಒಂದು ವರ್ಷ ಊರಲ್ಲಿದ್ದೆ. ಆಗ ನನಗಾದ ಅವಮಾನ, ಮತ್ತೆ ಮೇಲೇಳುವ ಸ್ಫೂರ್ತಿಯನ್ನು ನೀಡಿತು' ಎಂದು ಹೇಳಿದ್ದರು.

'ನಮ್ಮ ಈವರೆಗಿನ ಕಲಿಸುವಿಕೆಯಲ್ಲಿದ್ದ ಅತಿದೊಡ್ಡ ತಪ್ಪೆಂದರೆ, ಎಲ್ಲ ವಿದ್ಯಾರ್ಥಿಗಳೂ ಒಂದೇ ಎಂದು ಭಾವಿಸುವುದು, ಎಲ್ಲ ವಿಷಯಗಳನ್ನೂ ಒಂದೇ ಬಗೆಯಲ್ಲಿ ಅವರೆಲ್ಲರಿಗೂ ಕಲಿಸುವುದನ್ನು ಸಮರ್ಥಿಸಿಕೊಳ್ಳುವುದು' ಎಂಬ ಶಿಕ್ಷಣ ಮನೋವಿಜ್ಞಾನಿ ಹವರ್ಡ್ ಗಾರ್ಡ್‌ನರ್ ಅವರ ಹೇಳಿಕೆ ಗಮನಾರ್ಹವಾಗಿದೆ.

ಬೇರೆ ಬೇರೆ ಕ್ಷೇತ್ರಗಳಲ್ಲಿ ಮಕ್ಕಳಿಗಿರುವ ಆಸಕ್ತಿ ಮತ್ತು ಸಾಮರ್ಥ್ಯಕ್ಕಿಂತ, ಅವರ ಉತ್ತಮ ವ್ಯಕ್ತಿತ್ವಕ್ಕಿಂತ ಅವರು ಪಡೆದ ಫಲಿತಾಂಶವೇ ಮುಖ್ಯವಾಗುತ್ತಿದೆ. ಇದರಿಂದ ಎಷ್ಟೋ ಮಕ್ಕಳು ಕೀಳರಿಮೆಯಿಂದ, ಖಿನ್ನತೆಯಿಂದ ಬಳಲುವಂತಾಗಿದೆ. ಇಂತಹ ಮಕ್ಕಳಿಗೆ ಬದುಕಿನ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು, ತಮ್ಮ ಸಾಮರ್ಥ್ಯವನ್ನು ಕಂಡುಕೊಂಡು ಮುನ್ನಡೆಯಲು ಬೇಕಾದ ಸೂಕ್ತ ಮಾರ್ಗದರ್ಶನ ನೀಡಿ, ಉತ್ತಮ ಮಾನವ ಸಂಪನ್ಮೂಲವಾಗಿ ರೂಪಿಸುವ ಅಗತ್ಯವಿದೆ.

ಹಳಿಗಳ ಮೇಲೆ ರೈಲು ಸರಾಗವಾಗಿ ಚಲಿಸಲು ಎಂಜಿನ್ ಮತ್ತು ಇಂಧನ ಇದ್ದರಷ್ಟೇ ಸಾಲದು. ಲೋಕೊ ಪೈಲಟ್‌ನಿಂದ ಹಿಡಿದು ಸಂಚಾರ ಫಲಕ ತೋರಿಸುವವರವರೆಗೆ ಎಷ್ಟೋ ಕಾಣದ ಕೈಗಳ ಶ್ರಮವೂ ಅತ್ಯಗತ್ಯವಾಗಿರುತ್ತದೆ. ಹಾಗೆಯೇ ಸಮಾಜ ಎಂಬ ಬಂಡಿ ಹಳಿ ತಪ್ಪದಂತೆ ಸಾಗಲು ವಿದ್ಯಾರ್ಹತೆ ಮತ್ತು ಉತ್ತಮ ಉದ್ಯೋಗ ಪಡೆದವರಷ್ಟೇ ಇದ್ದರೆ ಸಾಲದು ಎಂಬ ಅರಿವು ನಮ್ಮೆಲ್ಲರಲ್ಲೂ ಮೂಡಬೇಕಿದೆ.



'ಕಿಸೆಯಲಿ ಹಣವಿದೆ, ತಿರುಗಲು ಕಾರಿದೆ| ತಿಂಡಿ ತಿನಿಸುಗಳ ಸಾಲು| ಪೆನ್ನಿದೆ ಗನ್ನಿದೆ ಶಿಸ್ತಿನ ಸ್ಕೂಲಿದೆ| ಎಲ್ಲಿದೆ ಪ್ರೀತಿಯ ನೆರಳು?' ಎಂಬ ಕವಿ ಮಾತು, ಗಿಡಮರಗಳು, ಜಲಮೂಲಗಳು ಕಣ್ಮರೆಯಾಗುತ್ತಿರುವಂತೆ ಮಾನವೀಯ ಮೌಲ್ಯಗಳೂ ನಶಿಸುತ್ತಿವೆ ಎಂಬುದನ್ನು ಸೂಚಿಸುತ್ತದೆ. ಇಂತಹ ಹೊತ್ತಿನಲ್ಲಿ ಸಮಾಜವನ್ನು ಪ್ರೀತಿಯ ಸೆಲೆಯಾಗಿಸಬೇಕಿರುವುದು ನಮ್ಮೆಲ್ಲರ ಹೊಣೆಗಾರಿಕೆಯೂ ಹೌದು.

ಟಿ.ಪಿ. ಕೈಲಾಸಂ ಅವರ 'ಟೊಳ್ಳುಗಟ್ಟಿ' ನಾಟಕದಲ್ಲಿ ಪುಟ್ಟು ಎಂಬ ಬಾಲಕನ ಪಾತ್ರವೊಂದಿದೆ. ಅವನು ಓದಿನಲ್ಲಿ ಮುಂದಿರುತ್ತಾನೆ. ಆದರೆ ಆರೋಗ್ಯ ಸರಿಯಿಲ್ಲದ ತಾಯಿಯ ನರಳಾಟ ಕಂಡು 'ನನಗೆ ಓದಲು ಆಗ್ತಾ ಇಲ್ಲ' ಎಂದು ಗೊಣಗುತ್ತಾನೆ. ಓದಿನಲ್ಲಿ ಹಿಂದಿದ್ದ ಅವನ ತಮ್ಮ ಮಾಧು, 'ನಿನಗೆ ಓದೇ ಹೆಚ್ಚಾ? ನಾವು ಈ ಭೂಮಿಯಲ್ಲಿ ವಾಸಿಸೋಕೆ ದೇವರಿಗೆ ಕೊಡಬೇಕಾದ ಬಾಡಿಗೆ ಏನೆಂದರೆ, ನಮ್ಮ ಸುತ್ತಮುತ್ತಲೂ ವಾಸಿಸುವ ಜನರಿಗೆ ಉಪಯೋಗವಾಗುವಂತೆ ಇರುವುದು' ಎಂದು ಹೇಳುತ್ತಾನೆ.

ಮಾಧುವಿನಂತಹ ಹೃದಯವಂತ ಮಕ್ಕಳ ಸಂಖ್ಯೆ ಹೆಚ್ಚಾಗಬೇಕೆಂದರೆ ಅವರನ್ನು ಅಂಕ ಗಳಿಸುವ ಯಂತ್ರಗಳನ್ನಾಗಿಸದೆ, ಸಮಾಜಮುಖಿಗಳನ್ನಾಗಿಸುವತ್ತ ಚಿಂತಿಸಬೇಕಿದೆ. ಅದರಲ್ಲಿಯೂ ಅನುತ್ತೀರ್ಣರಾದ ಮಕ್ಕಳನ್ನು ಹೀಯಾಳಿಸಿ, ತಾತ್ಸಾರ ಮಾಡದೆ ವಾತ್ಸಲ್ಯದಿಂದ ಕಂಡು, ಸಮಾಜದ ಆಸ್ತಿಯಾಗುವಂತೆ ಅವರನ್ನು ರೂಪಿಸುವತ್ತ ಕಾರ್ಯಪ್ರವೃತ್ತರಾಗಬೇಕಿದೆ.

ವಾಚಕರ ವಾಣಿ

ವಿವಾಹದ ವಿಷಯದಲ್ಲಿ ದ್ವಂದ್ವ ನಿಲುವು ಬೇಡ

ಹಾಸನ ಜಿಲ್ಲೆಯಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ವಿವಾಹ ಮಹೋತ್ಸವವೊಂದರಲ್ಲಿ, ವರ ತಾಳಿ ಕಟ್ಟುವ ಸಂದರ್ಭದಲ್ಲಿ ವಧು ಹಸೆಮಣೆಯಿಂದ ಎದ್ದು, ತನಗೆ ಈ ಮದುವೆ ಇಷ್ಟವಿಲ್ಲವೆಂದು ಹೇಳಿ ಹೊರನಡೆದಿದ್ದಾಗಿ ವರದಿಯಾಗಿದೆ. ವರ ಇದರಿಂದ ತೀವ್ರ ಮನನೊಂದು ಕಣ್ಣೀರಿಟ್ಟ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಮನಕಲಕುವ ಇಂತಹ ಸನ್ನಿವೇಶಗಳು ನಿಜಕ್ಕೂ ಆಘಾತಕಾರಿ.

ಮದುವೆ ಅನ್ನುವುದು ಹುಡುಗಾಟದ ಮಾತಲ್ಲ. ಯಾರನ್ನೋ ಪ್ರೀತಿಸುವುದು, ತಂದೆ ತಾಯಿಯ ಬಲವಂತಕ್ಕೆ ಅಥವಾ ಬೇರೆ ರೀತಿಯ ಆಕರ್ಷಣೆಗೆ ಬಲಿಯಾಗಿ ಮತ್ತ್ಯಾರನ್ನೋ ವರಿಸಲು ಮುಂದಾಗುವುದು, ಕೊನೇ ಗಳಿಗೆಯಲ್ಲಿ ಅದು ಮುರಿದುಬೀಳುವ ಪ್ರಕರಣಗಳು ಆಗಾಗ ವರದಿಯಾಗುತ್ತಿರುತ್ತವೆ. ಒಮ್ಮೆ ಮದುವೆ ನಿಂತುಹೋದರೆ, ಆ ಹುಡುಗ ಅಥವಾ ಹುಡುಗಿಗೆ ಮತ್ತೆ ಮದುವೆಯಾಗುವುದು ಕಷ್ಟವಾಗಬಹುದು. ಇದರಿಂದ ನೊಂದ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸಬೇಕಾಗುತ್ತದೆ, ಮಾನಸಿಕ ಕಿರಿಕಿರಿ ಉಂಟಾಗುತ್ತದೆ, ಬಂಧು ಬಳಗದವರಿಂದ ಚುಚ್ಚುಮಾತುಗಳು ಕೇಳಿಬರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಪ್ರಬುದ್ಧ ವಯಸ್ಕರಾದ ಯುವಕ, ಯುವತಿಯರು ಇಂತಹ ದ್ವಂದ್ವ ಮನೋಭಾವದಿಂದ ಹೊರಬರಬೇಕಿದೆ. ಮದುವೆ ನಿಶ್ಚಯವಾಗುವುದಕ್ಕಿಂತ ಮೊದಲೇ ತಮ್ಮ ಮದುವೆಯ ಬಗ್ಗೆ ಮನೆಯವರ ಎದುರು ನಿಲುವನ್ನು ಸ್ಪಷ್ಟಪಡಿಸಿ, ಅದರಂತೆ ಮುಂದುವರಿಯುವುದು ಎಲ್ಲ ದೃಷ್ಟಿಯಿಂದಲೂ ಒಳ್ಳೆಯದು.

ಕೆ.ವಿ.ವಾಸು, ಮೈಸೂರು

ಭಲೆ ಬಾಲಕರೇ!

ಮೊನ್ನೆ ಮೊನ್ನೆ ಬಂದ
ಎಸ್‌ಎಸ್‌ಎಲ್‌ಸಿ, ಪಿಯುಸಿ
ಫಲಿತಾಂಶಗಳಲ್ಲಿ
ಬಾಲಕಿಯರೇ ಮುಂದೆ,
ಹೌದು, ಸಾಮಾನ್ಯವಾಗಿ
ಪ್ರತಿ ಬಾರಿಯೂ
ಹುಡುಗಿಯರೇ
ಇರುತ್ತಾರೆ ಮುಂದೆ,
ಸದ್ಯ, ನಮ್ಮ ಬಾಲಕರು
ಸಿಇಟಿ ಫಲಿತಾಂಶದಲ್ಲಾದರೂ
ಬಂದರಲ್ಲಾ ಅವರ ಮುಂದೆ!

ಮ.ಗು.ಬಸವಣ್ಣ, ಮೈಸೂರು

ಪ್ರತಿ ಮನೆಯಲ್ಲೂ ಬೀರಲಿ ಕನ್ನಡದ ಕಂಪು

ಸರ್ಕಾರಿ ನೌಕರರಿಗೆ ಸಾಹಿತ್ಯದ ಬಗ್ಗೆ ಒಲವು ಮೂಡಿಸುವ ಮೂಲಕ ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಪ್ರಯತ್ನಿಸಬಹುದು ಎಂದು ರಾಜಕುಮಾರ ಕುಲಕರ್ಣಿ ಅವರು ಅಭಿಪ್ರಾಯಪಟ್ಟಿರುವುದು (ಸಂಗತ, ಮೇ 23) ಸರಿಯಷ್ಟೆ. ಸರ್ಕಾರಿ ನೌಕರರ ಜೊತೆಗೆ ಕನ್ನಡ ನಾಡಿನಲ್ಲಿರುವ ಪ್ರತಿಯೊಬ್ಬರೂ ಸಾಹಿತ್ಯ ದೀಕ್ಷೆ ತೊಡಬೇಕಾದ ಅಗತ್ಯವಿದೆ. ಪ್ರತಿ ಮನೆಯಲ್ಲಿಯೂ ಕನ್ನಡದ ಕಂಪು ಬೀರುವಂತಹ ವಾತಾವರಣ ನಿರ್ಮಾಣವಾಗಬೇಕು. ಓದುಗರ ಸಂಖ್ಯೆ ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ, ಜೀವನಮೌಲ್ಯಗಳನ್ನು ಪ್ರತಿಪಾದಿಸುವ ಸನ್ನಿವೇಶವನ್ನು ಸೃಷ್ಟಿಸಬೇಕಾಗಿದೆ. ಇದಕ್ಕೆ ಪೂರಕವಾಗಿ, ಸಾಹಿತ್ಯದ ಓದಿನ ಮೂಲಕ ಜೀವನವನ್ನು ಉತ್ತಮವಾಗಿ ರೂಢಿಸಿಕೊಳ್ಳಲು ಸಾಧ್ಯ ಎಂಬುದನ್ನು ಕನ್ನಡದ ಮನಸ್ಸುಗಳು ಅರಿಯಬೇಕಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಸಿಹಿ ತಿಂಡಿ ಹೆಸರಿನಲ್ಲಿ ರಾಜಕೀಯ ಬೇಡ

ಭಾಷಾ ವಿಜ್ಞಾನ, ಭಾಷೆಯ ಸಾಂಸ್ಕೃತಿಕ ಸೂಕ್ಷ್ಮದ ಅರಿವಿರದ ಕೆಲವರು, ಜನಪ್ರಿಯ ಸಿಹಿ ತಿಂಡಿಯಾದ ಮೈಸೂರು ಪಾಕ್‌ನ ಹೆಸರನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಭಾಷಾ ವಿಜ್ಞಾನದ ಪ್ರಕಾರ, 'ಮಸೂರ್ ಪಾಕ್' ಜನರ ಬಾಯಲ್ಲಿ ಕ್ರಮೇಣ 'ಮೈಸೂರು ಪಾಕ್' ಆಯಿತು. ಮಸೂರ್ ಎಂದರೆ ಕಡಲೆಬೇಳೆ. ಬೆಲ್ಲ, ತುಪ್ಪವನ್ನು ಕಡಲೆಹಿಟ್ಟಿಗೆ ಸೇರಿಸಿ ವಿಶೇಷವಾಗಿ ತಯಾರಿಸುವ ಸಿಹಿ ಪಾಕವೇ ಮೈಸೂರು ಪಾಕ್. ಮದ್ದೂರು ವಡೆಗೆ ಸ್ಥಳೀಯ ನಂಟು ಇರುವಂತೆ ಮೈಸೂರು ಪಾಕ್‌ಗೆ ಇಲ್ಲ. ರಾಜಸ್ಥಾನದ ಸಿಹಿ ತಿಂಡಿ ವ್ಯಾಪಾರಿಗಳು ಈಗ ಮಾಡಿರುವಂತೆ, ಮೈಸೂರು ಪಾಕ್‌ನಲ್ಲಿ ಪಾಕ್ ಎನ್ನುವುದನ್ನು ತೆಗೆದು ಶ್ರೀ ಎಂದು ಸೇರಿಸಿದ ಮಾತ್ರಕ್ಕೆ ಮೈಸೂರು ಪಾಕ್‌ನ ರುಚಿಯೇನೂ ಬದಲಾಗುವುದಿಲ್ಲ. ಅದರ ಮಾರಾಟದ ಪ್ರಮಾಣವೂ ದಿಢೀರ್ ಎಂದು ಏರುವುದಿಲ್ಲ. ಮುಂದೊಂದು ದಿನ, ಪಾಕಿಸ್ತಾನದಲ್ಲಿ ಸ್ತಾನ ಎಂದಿರುವುದರಿಂದ, ರಾಜಸ್ಥಾನದಲ್ಲಿನ ಸ್ಥಾನ ಎನ್ನುವ ಪದವನ್ನೂ ಕಿತ್ತೊಗೆಯಬೇಕು ಎಂಬ ಆಗ್ರಹವೂ ಕೇಳಿಬರಬಹುದು!

ಟಿ.ಗೋವಿಂದರಾಜು, ಬೆಂಗಳೂರು

ತಮನ್ನಾ ಆಯ್ಕೆ: ವ್ಯಾಪಾರದ ಸುಲಭ ಮಾರ್ಗ

ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮವು (ಕೆಎಸ್‌ಡಿಎಲ್) ತನ್ನ ಉತ್ಪನ್ನಗಳ ಪ್ರಚಾರ ರಾಯಭಾರಿಯನ್ನಾಗಿ ಚಿತ್ರನಟಿ ತಮನ್ನಾ ಭಾಟಿಯಾ ಅವರನ್ನು ನೇಮಿಸಿರುವುದು ಸ್ವಾಗತಾರ್ಹ. ನಮ್ಮ ನಾಡಿನ ಈ ಉತ್ಪನ್ನಗಳು ಶ್ರೀಗಂಧದ ಕಂಪಿನಿಂದ ಕೂಡಿವೆ. ನಮ್ಮ ತಾತ, ಮುತ್ತಾತಂದಿರಾದಿಯಾಗಿ ನಾನು ಕೂಡ ಈ ನಿಗಮದ ಉತ್ಪನ್ನವಾದ ಮೈಸೂರು ಸ್ಯಾಂಡಲ್ ಸೋಪನ್ನೇ ಬಳಸುತ್ತಾ ಬಂದಿದ್ದೇನೆ. ಈ ಉತ್ಪನ್ನಗಳು ಹೊರರಾಜ್ಯಗಳಲ್ಲಿಯೂ ಚೆನ್ನಾಗಿ ಮಾರಾಟವಾಗಬೇಕೆನ್ನುವ ಉದ್ದೇಶದಿಂದ ನಿಗಮವು ತಮನ್ನಾ ಅವರನ್ನು ಪ್ರಚಾರ ರಾಯಭಾರಿಯನ್ನಾಗಿ ನೇಮಕ ಮಾಡಿದೆ. ಇದು ವ್ಯಾಪಾರದ ಸಲುವಾಗಿ ಕಂಡುಕೊಂಡ ಸುಲಭ ಮಾರ್ಗ. ರಾಯಭಾರಿಯಾಗಿ ತಮನ್ನಾ ಅವರ ಆಯ್ಕೆ ಕುರಿತಂತೆ ಕೆಲವರು ಆಕ್ಷೇಪ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ.

ಇಂತಹುದೇ ವಿಚಾರಕ್ಕೆ ಸಂಬಂಧಿಸಿದಂತೆ ಚಿತ್ರನಟ ವಿಷ್ಣುವರ್ಧನ್ ಅವರು ನೀಡಿದ್ದ ಹೇಳಿಕೆಯೊಂದು ಇಲ್ಲಿ ಮುಖ್ಯವಾಗುತ್ತದೆ. ಧ್ವನಿಸುರುಳಿ ಬಿಡುಗಡೆ ಕಾರ್ಯಕ್ರಮವೊಂದಕ್ಕೆ ಬಂದಿದ್ದ ಅವರನ್ನು ಪತ್ರಕರ್ತರೊಬ್ಬರು 'ನೀವೇಕೆ ರೀಮೇಕ್ ಚಿತ್ರಗಳಲ್ಲಿ ಅಭಿನಯಿಸುತ್ತೀರಿ?' ಎಂದು ಕೇಳಿದರಂತೆ. ಅದಕ್ಕೆ ವಿಷ್ಣುವರ್ಧನ್ 'ಸ್ವಾಮಿ, ನಮ್ಮನೆ ರವೆಗೆ, ಅಕ್ಕ-ಪಕ್ಕದ ಮನೆಗಳಿಂದ ದ್ರಾಕ್ಷಿ, ಗೋಡಂಬಿ ತಂದು ಹಾಕಿ ಮಾಡಿದ ಕೇಸರಿಬಾತ್ ರುಚಿನೇ ಬೇರೆ! ಆಹಾರದಲ್ಲಿ ಸ್ವಾದ ಮುಖ್ಯವೇ ವಿನಾ ಭೇದ ಮಾಡಬಾರದು' ಅಂದರಂತೆ. ಇನ್ನು, ತಮನ್ನಾಗೆ ನೀಡಲಿರುವ ಸಂಭಾವನೆ ಆಕೆಯ ಜನಪ್ರಿಯತೆಗೆ ನೀಡುವ ಗೌರವ.

ಆರ್.ವೆಂಕಟರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಕಾಲಿಕ ಮಳೆ ಭವಿಷ್ಯದ ಎಚ್ಚರಿಕೆಯೇ?

ಮುಂಗಾರುಪೂರ್ವ ಮಳೆಯು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅನಾಹುತಗಳನ್ನು ಸೃಷ್ಟಿಸಿದೆ. ಅಕಾಲಿಕವಾಗಿ ಸುರಿದ ಭಾರಿ ಮಳೆಯಿಂದ ಹಲವೆಡೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಕಾಲಿಕ ಮಳೆ ಕರ್ನಾಟಕಕ್ಕಷ್ಟೇ ಸೀಮಿತವಾಗಿಲ್ಲ; ನೆರೆಯ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಮತ್ತು ದೂರದ ದೆಹಲಿ, ಗುಜರಾತ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಭಾರಿ ಸಂಕಟ ತಂದೊಡ್ಡಿದೆ. ಮುಂಗಾರು ಆಗಮನಕ್ಕೂ ಮುನ್ನವೇ, ಬಿರುಬೇಸಿಗೆ ಇರಬೇಕಾಗಿದ್ದ ಮೇ ತಿಂಗಳಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಇದು ಹವಾಮಾನ ಬದಲಾವಣೆಯ ಪರಿಣಾಮಗಳ ಬಗ್ಗೆ, ಭವಿಷ್ಯದಲ್ಲಿ ಸಂಭವಿಸಬಹುದಾದ ಪ್ರಕೃತಿ ವೈಪರೀತ್ಯಗಳ ಬಗ್ಗೆ ಎಚ್ಚರಿಕೆ ನೀಡುತ್ತಿದೆ

ಪ್ರಜಾವಾಣಿ ವಾರ್ತೆ

ಮೇ ತಿಂಗಳು ಎಂದರೆ, ಸಾಮಾನ್ಯವಾಗಿ ವಿಪರೀತ ಬಿಸಿಲು ಇರುತ್ತದೆ. ಆದರೆ, ಕೆಲವು ವರ್ಷಗಳಿಂದ ಪರಿಸ್ಥಿತಿ ಬದಲಾಗಿದೆ. ಈ ವರ್ಷದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದಂತೆ ಕಾಣುತ್ತಿದ್ದು, ಆಗಿಂದಾಗ್ಗೆ ಭಾರಿ ಮಳೆ ಬೀಳುತ್ತಲೇ ಇದೆ. ಮಳೆಗಾಲದಲ್ಲೂ ಅಪರೂಪ ಎನ್ನುವಂಥ ಮಳೆ ಮುಂಗಾರು ಆಗಮನಕ್ಕೂ ಮುನ್ನವೇ ಸುರಿಯುತ್ತಿದೆ. ಮಳೆಗೆ ಪೂರ್ವಸಿದ್ಧತೆ ಇಲ್ಲದಿದ್ದಕ್ಕೆ ಮತ್ತು ಮೂಲಸೌಕರ್ಯಗಳ ಕೊರತೆಯ ಕಾರಣಕ್ಕೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಪ್ರದೇಶಗಳು ಹೊಳೆಯಂತಾಗಿವೆ.

ಮಳೆಗಾಲದಲ್ಲಿ ಬೆಂಗಳೂರಿನ ರಸ್ತೆಗಳಲ್ಲಿ ಪ್ರವಾಹ ಉಂಟಾಗುವುದು ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯವಾದ ವಿದ್ಯಮಾನವಾಗಿತ್ತು. ಆದರೆ, ಈ ಬಾರಿ ಮುಂಗಾರುಪೂರ್ವದಲ್ಲೇ ಈ ಪರಿಸ್ಥಿತಿ ತಲೆದೋರಿದ್ದು, ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುವಂತೆ ಮಾಡಿದೆ. ಕರ್ನಾಟಕ ಅಷ್ಟೇ ಅಲ್ಲದೇ, ದಖ್ಖನ್ ಪ್ರಸ್ಥಭೂಮಿ ವ್ಯಾಪ್ತಿಯ ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲೂ ಅಕಾಲಿಕ ಮಳೆ ಸುರಿದು, ಸಮಸ್ಯೆಗಳು ಸೃಷ್ಟಿಯಾಗಿವೆ. ಉತ್ತರದ ದೆಹಲಿ, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ, ಜಾರ್ಖಂಡ್, ಮುಂತಾದೆಡೆ ಕೂಡ ಇದೇ ಪರಿಸ್ಥಿತಿ ತಲೆದೋರಿದೆ.

ಮುಂಗಾರುಪೂರ್ವದಲ್ಲಿ ಆಗೀಗ ಮಳೆ ಸುರಿಯುವುದು ಹೊಸದೇನಲ್ಲ. ಬೇಸಿಗೆಯಲ್ಲಿ ಮಳೆಯಾಶ್ರಿತ ಕೃಷಿ ಚಟುವಟಿಕೆ ಆರಂಭಕ್ಕೆ ಮುಂಗಾರು ಪೂರ್ವ ಮಳೆಯೂ ಮುಖ್ಯ. ಆದರೆ, ನಿರಂತರವಾಗಿ ಸುರಿಯುವುದು, ಅದೂ ಮೇಘ ಸ್ಫೋಟವಾದಂತೆ ಭಾರಿ ಪ್ರಮಾಣದಲ್ಲಿ ಮಳೆಯಾಗುವುದು ಹೊಸ ವಿದ್ಯಮಾನವಾಗಿದೆ.

ಇದು ಮಳೆಯ ಕಥೆಯಾದರೆ, ಬಿಸಿಲಿನದ್ದು ಇನ್ನೊಂದು ಕಥೆ. ಸರಿಯಾಗಿ ವರ್ಷದ ಹಿಂದೆ, 2024ರ ಮೇನಲ್ಲಿ, ದೇಶದ 37 ನಗರಗಳಲ್ಲಿ ಉಷ್ಣಾಂಶ 45 ಡಿಗ್ರಿ ಸೆಲ್ಸಿಯಸ್ ಅನ್ನು ದಾಟಿತ್ತು. ರಾಜಸ್ಥಾನದ ಚುರು ಎಂಬಲ್ಲಿ 50.5 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಬಿಸಿಲಿನ ಹೊಡೆತಕ್ಕೆ ಜನ ತತ್ತರಿಸಿದ್ದಲ್ಲದೇ, ಜೀವನೋಪಾಯಕ್ಕೂ ಪೆಟ್ಟು ಬಿದ್ದಿತ್ತು. ಅನೇಕ ಭಾಗಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿತ್ತು. ಮಹಾರಾಷ್ಟ್ರ ಸೇರಿದಂತೆ ಹಲವೆಡೆ ಬಿಸಿಗಾಳಿಯಿಂದಾಗಿ ಸಾರ್ವಜನಿಕ ಸಭೆಗಳನ್ನು ನಿಷೇಧಿಸಲಾಗಿತ್ತು. ಏಪ್ರಿಲ್‌ನಿಂದ ಜೂನ್‌ವರೆಗೆ ದೇಶದ ವಿವಿಧ ಭಾಗಗಳಲ್ಲಿ ಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶದಲ್ಲಿ ವ್ಯತ್ಯಾಸವಾಗಲಿದ್ದು, ಬಿಸಿಗಾಳಿಯ ಅವಧಿ ಹೆಚ್ಚಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿತ್ತು. ಈ ಬಾರಿಯ ಹವಾಮಾನ ಇಲಾಖೆಯ ದೀರ್ಘಾವಧಿ ಮುನ್ಸೂಚನೆ (ಎಲ್‌ಆರ್‌ಎಫ್) ಪ್ರಕಾರ, ಇದೇ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ವಾಡಿಕೆಗಿಂತ ಹೆಚ್ಚು ಮಳೆ (ಶೇ 105ರಷ್ಟು) ಬೀಳಲಿದೆ.

ಒಂದೆಡೆ, ಬಿಸಿಲು ತಾರಕಕ್ಕೇರಿ ವಿಪರೀತ ಎನ್ನುವಷ್ಟು ಬಿಸಿಗಾಳಿ ಬೀಸುವುದು. ಮತ್ತೊಂದೆಡೆ, ಪ್ರವಾಹ ಉಂಟಾಗುವಂತೆ ಅಕಾಲಿಕವಾಗಿ ಮಳೆ ಸುರಿಯುವುದು. ಕೆಲವೇ ಗಂಟೆಗಳಲ್ಲಿ ದಾಖಲೆ ಪ್ರಮಾಣದಲ್ಲಿ ಮಳೆ ಸುರಿಯುವುದು... ಇವು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಎನ್ನುವಂತಾಗಿವೆ. ಪ್ರಕೃತಿ ವೈಪರೀತ್ಯಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ ಮತ್ತು ತೀವ್ರವಾಗುತ್ತಿವೆ. ಕೆಲವು ಪ್ರದೇಶಗಳಲ್ಲಿ ಬಿಸಿಲಿನ ಅವಧಿ ಹೆಚ್ಚಾಗಿರುತ್ತದೆ. ಕೆಲವು ಪ್ರದೇಶಗಳಲ್ಲಿ ಮುಂಗಾರಿಗೂ ಮುನ್ನವೇ ಮಳೆ ಸುರಿಯಲಾರಂಭಿಸುತ್ತದೆ. ವರ್ಷದಿಂದ ವರ್ಷಕ್ಕೆ ಹವಾಮಾನ ವ್ಯವಸ್ಥೆಯು ಸಂಕೀರ್ಣಗೊಳ್ಳುತ್ತಿದ್ದು, ಅದರ ಗತಿಯನ್ನು ಅರಿಯುವುದೇ ಕಷ್ಟವಾಗಿದೆ.

ಜಾಗತಿಕ ತಾಪಮಾನ ಏರಿಕೆಯನ್ನು ಕೈಗಾರಿಕಾ ಪೂರ್ವ ಅವಧಿಯಲ್ಲಿ ಇದ್ದುದಕ್ಕಿಂತ 1.5 ಡಿಗ್ರಿ ಸೆಲ್ಸಿಯಸ್ ಹೆಚ್ಚಳಕ್ಕೆ ಸೀಮಿತಗೊಳಿಸುವುದು ಪ್ಯಾರಿಸ್ ಒಪ್ಪಂದದ ಮುಖ್ಯ ನಿರ್ಣಯವಾಗಿತ್ತು. ಆದರೆ, 2024 ಜಾಗತಿಕವಾಗಿ ಅತಿ ತಾಪಮಾನದ ವರ್ಷವಾಗಿ ದಾಖಲೆ ಮಾಡಿದ್ದು ಅಷ್ಟೇ ಅಲ್ಲದೇ, 1.5 ಡಿಗ್ರಿ ಸೆಲ್ಸಿಯಸ್ ಮಿತಿಯನ್ನೂ ದಾಟಿತ್ತು.

ಹವಾಮಾನ ಬದಲಾವಣೆ: ತಾಪಮಾನದ ಏರಿಕೆ, ಅಕಾಲಿಕ ಮಳೆ ಇವೆಲ್ಲವೂ ಹವಾಮಾನ ಬದಲಾವಣೆಯ ಪರಿಣಾಮಗಳು. 2025ರ ಫೆಬ್ರುವರಿ/ಮಾರ್ಚ್ ಆರಂಭದಲ್ಲೇ ಭಾರತದ ಕೆಲವು ಭಾಗಗಳಲ್ಲಿ ಬಿಸಿಗಾಳಿ ಬೀಸುವ ಮೂಲಕ ಹವಾಮಾನ ವೈಪರೀತ್ಯದ ಸುಳಿವು ನೀಡಿತ್ತು. ಬಿಸಿಲು ಮತ್ತು ಬಿಸಿಗಾಳಿ ದೀರ್ಘವಾಗುತ್ತಿರುವ ವಿದ್ಯಮಾನ ದೇಶದಲ್ಲಿ ಹೊಸದೇನಲ್ಲ. 20ನೇ ಶತಮಾನದ ನಂತರ ಸುಮಾರು 0.8 ಡಿಗ್ರಿ ಸೆಲ್ಸಿಯಸ್‌ನಷ್ಟು ಸರಾಸರಿ ತಾಪಮಾನ ಹೆಚ್ಚಾಗಿದೆ. ಮೇಲ್ಮೈ ಮತ್ತು ವಾಯುಮಂಡಲದ ಉಷ್ಣಾಂಶದಿಂದ ಬೇಸಿಗೆಯ ತಾಪ ಹೆಚ್ಚಾಗುತ್ತಿರುವುದಷ್ಟೇ ಅಲ್ಲ, ವಾಯುಮಂಡಲದ ತೇವಾಂಶ ಒಯ್ಯುವ ಸಾಮರ್ಥ್ಯವನ್ನೂ ಹೆಚ್ಚಿಸುತ್ತದೆ. ವಾತಾವರಣದಲ್ಲಿನ ಹೆಚ್ಚಿನ ತೇವಾಂಶವು ತೀವ್ರ ಹಾಗೂ ಅಕಾಲಿಕ ಮಳೆ ಉಂಟುಮಾಡುತ್ತಿದೆ.

ದೇಶದಲ್ಲಿ ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶದಲ್ಲಿ ಹೆಚ್ಚಳವಾಗಿದೆ. ಕಳೆದ 50 ವರ್ಷದಲ್ಲಿ ದೇಶದಲ್ಲಿ ಹವಾಮಾನ ವೈಪರೀತ್ಯ ಹೆಚ್ಚಾಗಿದೆ. ಮುಂದಿನ 50 ವರ್ಷಗಳಲ್ಲಿ ಇದು ಮತ್ತಷ್ಟು ಹೆಚ್ಚಾಗಲಿದೆ ಎನ್ನಲಾಗುತ್ತಿದೆ. ಹಿಂದೆ, ಉತ್ತರದ ಕೆಲವು ರಾಜ್ಯಗಳಲ್ಲಿ ಮಾತ್ರ ಬಿಸಿಗಾಳಿ ಬೀಸುತ್ತಿತ್ತು. 20 ವರ್ಷಗಳಿಂದೀಚೆಗೆ, ಅದರ ವ್ಯಾಪ್ತಿ ವಿಸ್ತರಿಸಿದ್ದು, ಆಂಧ್ರ ಪ್ರದೇಶ, ತೆಲಂಗಾಣ, ಒಡಿಶಾ ರಾಜ್ಯಗಳೂ ಆ ಪಟ್ಟಿ ಸೇರಿವೆ. ಹಾಗೆಯೇ ಬಿಸಿಗಾಳಿಗೆ ಹೆಸರಾಗಿದ್ದ ಉತ್ತರದ ಹಲವು ರಾಜ್ಯಗಳಲ್ಲೂ ಪ್ರವಾಹಗಳು ಘಟಿಸುತ್ತಿವೆ.

ಅಕಾಲಿಕ ಮಳೆ, ತಾಪಮಾನ ಹೆಚ್ಚಳ, ಪ್ರವಾಹ, ಬಿಸಿಗಾಳಿ, ಮೇಘ ಸ್ಫೋಟ ಎಲ್ಲಕ್ಕೂ ಹವಾಮಾನ ಬದಲಾವಣೆ ಕಾರಣವಾಗಿದ್ದು, ಅದಕ್ಕೆ ಪರಿಹಾರ ಕಂಡುಕೊಳ್ಳದಿದ್ದರೆ, ಭವಿಷ್ಯದಲ್ಲಿ ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಆಧಾರ: ಪಿಟಿಐ, ಭಾರತೀಯ ಹವಾಮಾನ ಇಲಾಖೆ, ಕರ್ನಾಟಕ ವಿಪತ್ತು ನಿರ್ವಹಣಾ ಕೇಂದ್ರ, ಡೌನ್ ಟು ಅರ್ಥ್

ವರ್ಷದಿಂದ ವರ್ಷಕ್ಕೆ ಹೆಚ್ಚು ವರ್ಷಧಾರೆ

ರಾಜ್ಯದಲ್ಲಿ ಮಾರ್ಚ್ 1ರಿಂದ ಮೇ 31ರ ನಡುವೆ ವಾಡಿಕೆಯಲ್ಲಿ 11.96 ಸೆಂ. ಮೀ. ಮಳೆಯಾಗುತ್ತದೆ. 2021ರಿಂದೀಚೆಗೆ ಪ್ರತಿ ವರ್ಷವೂ (2023 ಹೊರತು ಪಡಿಸಿ) ಹೆಚ್ಚು ಮಳೆಯಾಗುತ್ತಿದೆ. ಈ ವರ್ಷ ಮೇ ಮುಕ್ತಾಯವಾಗಲು ಇನ್ನೂ ಐದು ದಿನಗಳು ಬಾಕಿ ಇವೆ. ಈಗ ಮುಂಗಾರು ಕಾಲಿಡುತ್ತಿದೆ. ಆದರೆ, ಈಗಾಗಲೇ ವಾಡಿಕೆಗಿಂತಲೂ ಹೆಚ್ಚು ವರ್ಷಧಾರೆಯಾಗಿದೆ. ಮೇ 24ರವರೆಗೆ 19.4 ಸೆಂ.ಮೀನಷ್ಟು ಮಳೆ ಬಿದ್ದಿದೆ. ಮಾರ್ಚ್, ಏಪ್ರಿಲ್‌ಗೆ ಹೋಲಿಸಿದರೆ ಮೇ ತಿಂಗಳ ಎರಡನೇ ವಾರದ ನಂತರ ಭಾರಿ ಮಳೆ ಸುರಿದಿದೆ.

ದಕ್ಷಿಣ ಒಳನಾಡು, ಉತ್ತರ ಒಳನಾಡು, ಮಲೆನಾಡು ಮತ್ತು ಕರಾವಳಿ ಪ್ರದೇಶ ಸೇರಿದಂತೆ ನಾಲ್ಕೂ ವಲಯಗಳಲ್ಲಿ ಮಳೆ ಜಾಸ್ತಿಯಾಗುತ್ತಿದೆ. ಈ ಬಾರಿ ಕರಾವಳಿಯಲ್ಲಿ ಶೇ 216ರಷ್ಟು ಹೆಚ್ಚು ಮಳೆಯಾಗಿದೆ. ಕರಾವಳಿ ಜಿಲ್ಲೆಗಳಲ್ಲಿ 33.91 ಸೆಂ.ಮೀನಷ್ಟು (ವಾಡಿಕೆ 10.74 ಸೆಂ.ಮೀ) ಮಳೆ ಸುರಿದಿದೆ. ಮಲೆನಾಡು ಭಾಗದಲ್ಲಿ 23.74 ಸೆಂ.ಮೀ ಮಳೆಯಾಗಿದೆ (ಶೇ 76ರಷ್ಟು ಹೆಚ್ಚು). ದಕ್ಷಿಣ ಒಳನಾಡಿನಲ್ಲಿ 20 ಸೆಂ.ಮೀ ಮತ್ತು ಉತ್ತರ ಒಳನಾಡು ಭಾಗದಲ್ಲಿ 14.75 ಸೆಂ.ಮೀ ಮಳೆ ಸುರಿದಿದೆ. ಇಲ್ಲಿ ಕ್ರಮವಾಗಿ ಶೇ 74 ಮತ್ತು ಶೇ 136ರಷ್ಟು ಹೆಚ್ಚು ವರ್ಷಧಾರೆಯಾಗಿದೆ.



*ಮೇ 24ರವರೆಗೆ (ಈ ಅವಧಿಯಲ್ಲಿ ವಾಡಿಕೆ ಪ್ರಕಾರ 9.2 ಸೆಂ.ಮೀ ಮಳೆಯಾಗುತ್ತದೆ)

ದೇಶದಲ್ಲಿ ಮುಂಗಾರುಪೂರ್ವ ಮಳೆ

(ಮಾರ್ಚ್ 1ರಿಂದ ಮೇ 25ರವರೆಗೆ)



ಮುಂಗಾರು ಪೂರ್ವ ಅವಧಿಯಲ್ಲಿ, ಅಕಾಲಿಕವಾಗಿ ಭಾರಿ ಪ್ರಮಾಣದಲ್ಲಿ ಮಳೆಯಾಗುತ್ತಿರುವುದು ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಇಡೀ ದೇಶದಾದ್ಯಂತ ಈ ಪ್ರವೃತ್ತಿ ಕಂಡುಬರುತ್ತಿದೆ. ಉತ್ತರದ ಲಡಾಖ್‌ನಿಂದ ದಕ್ಷಿಣದ ತಮಿಳುನಾಡಿನವರೆಗೆ, ಪಶ್ಚಿಮದ ಗುಜರಾತ್‌ನಿಂದ ಪೂರ್ವದ ಪಶ್ಚಿಮ ಬಂಗಾಳದವರೆಗಿನ ಹಲವು ರಾಜ್ಯಗಳ ಬಹುತೇಕ ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಪ್ರಮಾಣದ ಮಳೆಯಾಗುತ್ತದೆ. ಮಿಜೋರಾಂ ಸೇರಿದಂತೆ ಈಶಾನ್ಯ ರಾಜ್ಯಗಳ ಹಲವು ಜಿಲ್ಲೆಗಳೂ ಹೆಚ್ಚಿನ ಪ್ರಮಾಣದ ಅಕಾಲಿಕ ಮಳೆಗೆ ಸಾಕ್ಷಿಯಾಗುತ್ತಿವೆ. ಭಾರತೀಯ ಹವಾಮಾನ ಇಲಾಖೆಯು ಮಾರ್ಚ್ 1ರಿಂದ ಮೇ 25ರವರೆಗೆ ದೇಶದಾದ್ಯಂತ ಜಿಲ್ಲೆಗಳಲ್ಲಿ ಆಗಿರುವ ಮಳೆಯ ಮಾಹಿತಿಯನ್ನು ಭಾರತದ ನಕ್ಷೆಯ ಮೂಲಕ ತೋರಿಸಿದ್ದು, ದೇಶದ ಅರ್ಧಕ್ಕಿಂತಲೂ ಹೆಚ್ಚು ಜಿಲ್ಲೆಗಳಲ್ಲಿ ವಾಡಿಕೆಗಿಂತ ಶೇ 60 ಮತ್ತು ಅದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಮಳೆಯಾಗಿದೆ.

ರಾಷ್ಟ್ರೀಯ

ಅನಗತ್ಯ ಹೇಳಿಕೆ ನೀಡದಂತೆ ಪ್ರಧಾನಿ ಮೋದಿ ಎಚ್ಚರಿಕೆ

ನವದೆಹಲಿಯಲ್ಲಿ ಭಾನುವಾರ ನಡೆದ ಎನ್‌ಡಿಎ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸಚಿವರಾದ ರಾಜನಾಥ ಸಿಂಗ್, ಅಮಿತ್ ಶಾ, ಜೆ.ಪಿ.ನಡ್ಡಾ ಸೇರಿ ಹಲವರು ಭಾಗವಹಿಸಿದ್ದರು — ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಅನಗತ್ಯವಾಗಿ ಯಾರೂ ಹೇಳಿಕೆಗಳನ್ನು ನೀಡಕೂಡದು ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಕೆ ನೀಡಿದರು.

ಭಾನುವಾರ ಇಲ್ಲಿ ನಡೆದ ಎನ್‌ಡಿಎ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಸಭೆಯಲ್ಲಿ ಅವರು ಮಾತನಾಡಿದರು.

‘ಆಪರೇಷನ್ ಸಿಂಧೂರ’ವನ್ನು ಯಶಸ್ವಿಯಾಗಿ ನಡೆಸಿದ ಭಾರತೀಯ ಸೈನಿಕರ ಶೌರ್ಯ, ಪರಾಕ್ರಮ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಪ್ರಶಂಸಿಸುವ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಹಾಗೂ ಶಿವಸೇನಾ ನಾಯಕ ಏಕನಾಥ ಶಿಂದೆ ಅವರು ನಿರ್ಣಯ ಪ್ರಸ್ತಾಪಿಸಿ, ‘ಆಪರೇಷನ್ ಸಿಂಧೂರ ಭಾರತೀಯರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ’ ಎಂದು ಶ್ಲಾಘಿಸಿದರು.

ಮೋದಿಯವರ ನಾಯಕತ್ವ ಮೆಚ್ಚಿದ ಸಭೆಯು, ‘ಆಪರೇಷನ್ ಸಿಂಧೂರವು ಉಗ್ರರು ಮತ್ತು ಅದರ ಪ್ರಾಯೋಜಕರಿಗೆ ತಕ್ಕ ಉತ್ತರ’ ಎಂದು ಹೇಳಿತು.

19 ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹಲವು ಉಪ ಮುಖ್ಯಮಂತ್ರಿಗಳ ಜೊತೆ ನಡೆದ ಒಂದು ದಿನದ ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ ಸಿಂಗ್, ಬಿಜೆಪಿ ಅಧ್ಯಕ್ಷರೂ ಆಗಿರುವ ಜೆ.ಪಿ. ನಡ್ಡಾ ಭಾಗಿಯಾಗಿದ್ದರು.

ಜಾತಿ ಜನಗಣತಿ, ಉತ್ತಮ ಆಡಳಿತ ವಿಚಾರಗಳು ಕಾರ್ಯಸೂಚಿಯಾಗಿದ್ದವು ಎಂದು ಬಿಜೆಪಿ ತಿಳಿಸಿದೆ. ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರಿಗೆ ಸಭೆಯು ಸಂತಾಪ ಸೂಚಿಸಿತು.

ಬದಲಾಗುತ್ತಿರುವ ಭಾರತವನ್ನು ಬಿಂಬಿಸಿದ ‘ಸಿಂಧೂರ’: ಪ್ರಧಾನಿ

ನವದೆಹಲಿ (ಪಿಟಿಐ): ‘ಸಿಂಧೂರ ಕಾರ್ಯಾಚರಣೆಯು ಮಿಲಿಟರಿ ಕಾರ್ಯವಷ್ಟೇ ಆಗಿರಲಿಲ್ಲ; ಬದಲಾಗುತ್ತಿರುವ ಭಾರತದ ಪ್ರತಿಬಿಂಬ ಅದು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ದೇಶದ ದೃಢನಿಶ್ಚಯ, ಧೈರ್ಯ ಮತ್ತು ಜಾಗತಿಕ ಮಟ್ಟದಲ್ಲಿ ದೇಶದ ಶಕ್ತಿ ಹೆಚ್ಚುತ್ತಿರುವುದನ್ನು ಈ ಕಾರ್ಯಾಚರಣೆ ತೋರಿಸುತ್ತದೆ ಎಂದು ಕೂಡ ಅವರು ಹೇಳಿದರು.

ತಿಂಗಳ ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಇಂದು ಇಡೀ ದೇಶ ಭಯೋತ್ಪಾದನೆ ವಿರುದ್ಧ ಒಂದಾಗಿದೆ, ಭಯೋತ್ಪಾದನೆ ವಿಚಾರದಲ್ಲಿ ಆಕ್ರೋಶಗೊಂಡಿದೆ ಮತ್ತು ಭಯೋತ್ಪಾದನೆಯ ವಿರುದ್ಧ ದೃಢಸಂಕಲ್ಪ ಕೈಗೊಂಡಿದೆ’ ಎಂದರು.

ಭಯೋತ್ಪಾದನೆಯ ವಿರುದ್ಧ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ‘ಸಿಂಧೂರ ಕಾರ್ಯಾಚರಣೆ’ಯು ಪರಿವರ್ತನೆಯ ಘಟ್ಟ ಎಂದು ಅವರು ಬಣ್ಣಿಸಿದರು. ‘ಈ ಕಾರ್ಯಾಚರಣೆಯು ಜಾಗತಿಕ ಹೋರಾಟಕ್ಕೆ ಹೊಸ ಶಕ್ತಿ ಮತ್ತು ವಿಶ್ವಾಸವನ್ನು ತುಂಬಿದೆ’ ಎಂದರು.

ಗಡಿಯಾಚೆಗಿನ ಉಗ್ರರ ಮೂಲ ಸೌಕರ್ಯಗಳ ಮೇಲೆ ಭಾರತದ ಪಡೆಗಳು ನಡೆಸಿದ ನಿಖರ ದಾಳಿಯನ್ನು ಪ್ರಧಾನಿಯವರು ‘ಅಸಾಮಾನ್ಯ’ ಎಂದು ಹೇಳಿದರು.

ತಾಜ್‌ಮಹಲ್: ಡ್ರೋನ್ ತಡೆ ವ್ಯವಸ್ಥೆ

ಆಗ್ರಾ (ಪಿಟಿಐ): ಸಂಭಾವ್ಯ ವೈಮಾನಿಕ ದಾಳಿಯನ್ನು ತಡೆಯುವ ನಿಟ್ಟಿನಲ್ಲಿ ದೇಶದ ಪ್ರಮುಖ ಸ್ಮಾರಕ ತಾಜ್‌ಮಹಲ್‌ನಲ್ಲಿ ಡ್ರೋನ್ ನಿರೋಧಕ ವ್ಯವಸ್ಥೆ ಅಳವಡಿಸಲು ನಿರ್ಧರಿಸಲಾಗಿದೆ ಎಂದು ಹಿರಿಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಮತ್ತು ಉತ್ತರ ಪ್ರದೇಶ ಪೊಲೀಸ್ ಇಲಾಖೆ ಪ್ರಸ್ತುತ ತಾಜ್‌ಮಹಲ್‌ನ ಭದ್ರತೆಯನ್ನು ನಿರ್ವಹಿಸುತ್ತಿವೆ. ಶೀಘ್ರದಲ್ಲೇ ಸುಧಾರಿತ ರಕ್ಷಣಾ ವ್ಯವಸ್ಥೆಯನ್ನು ಅಳವಡಿಸುವ ಮೂಲಕ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗುವುದು ಎಂದು ತಿಳಿಸಿದ್ದಾರೆ. ನೂತನ ವ್ಯವಸ್ಥೆ 7ರಿಂದ 8 ಕಿ.ಮೀ. ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಆದರೆ, ಪ್ರಾಥಮಿಕ ಹಂತದಲ್ಲಿ ತಾಜ್‌ಮಹಲ್ ಗೊಮ್ಮಟದ 200 ಮೀಟರ್ ವ್ಯಾಪ್ತಿವರೆಗೆ ಭದ್ರತೆ ನೀಡುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

‘ಆಪರೇಷನ್ ಸಿಂಧೂರ’ದ ನಂತರ ಭಾರತ ಮತ್ತು ಪಾಕಿಸ್ತಾನ ನಡುವೆ ನಡೆದ ಸೇನಾ ಸಂಘರ್ಷದ ಸಂದರ್ಭದಲ್ಲಿ ಭಾರತೀಯ ಸೇನೆಯು ಪಾಕಿಸ್ತಾನದ ಪರಮಾಣು ಅಸ್ತ್ರಗಳ ಸಂಗ್ರಹಾಗಾರವಿರುವ ಕಿರಾಣ ಬೆಟ್ಟಗಳ ಮೇಲೆ ದಾಳಿ ನಡೆಸಿದೆ. ಅಲ್ಲಿ ವಿಕಿರಣ ಸೋರಿಕೆಯಾಗುತ್ತಿದೆ ಎಂದು ಪ್ರತಿಪಾದಿಸುತ್ತಾ ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ಬೆಟ್ಟದ ಬುಡದಲ್ಲಿ ಬಾಂಬ್ ಸ್ಫೋಟಿಸುವ ವಿಡಿಯೊವೊಂದನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.

ವಿಡಿಯೊ ತುಣುಕಿನ ಒಂದು ಕೀ ಫ್ರೇಮ್ ಅನ್ನು ರಿವರ್ಸ್ ಇಮೇಜ್ ವಿಧಾನದಲ್ಲಿ ಹುಡುಕಾಟ ನಡೆಸಿದಾಗ, 2015ರಲ್ಲಿ ಪೋಸ್ಟ್ ಮಾಡಲಾದ ಇದೇ ದೃಶ್ಯಾವಳಿಯನ್ನು ಹೊಂದಿರುವ ವಿಡಿಯೊ ಸಿಕ್ಕಿತು. ಯೆಮನ್ ರಾಜಧಾನಿ ಸನಾದಲ್ಲಿ ಸಂಭವಿಸಿದ ಸ್ಫೋಟದ ವಿಡಿಯೊ ಅದಾಗಿತ್ತು. ಅಲ್ಲಿನ ನೊಕ್ವಾಮ್ ಬೆಟ್ಟದಲ್ಲಿ ಸ್ಫೋಟ ಸಂಭವಿಸಿದ ವಿಡಿಯೊ ಎಂದು ಹಲವರು ಆ ವಿಡಿಯೊವನ್ನು ಹಂಚಿಕೊಂಡಿದ್ದರು. ಇದರ ಆಧಾರದಲ್ಲಿ ನಿರ್ದಿಷ್ಟ ಪದ ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ ಅದಕ್ಕೆ ಸಂಬಂಧಿಸಿದ ಹಲವು ಮಾಧ್ಯಮ ವರದಿಗಳು ಸಿಕ್ಕಿದವು. ಬೆಟ್ಟದಲ್ಲಿರುವ ಶಸ್ತ್ರಾಸ್ತ್ರ ಸಂಗ್ರಹ ಕೋಠಿಯನ್ನು ಗುರಿಯಾಗಿಸಿಕೊಂಡು ನಡೆಸಿದ ವಾಯು ದಾಳಿಯಿಂದ ಸ್ಫೋಟ ಸಂಭವಿಸಿದೆ ಎಂದು ವರದಿಗಳು ಹೇಳಿದ್ದವು. ಹಳೆಯ ವಿಡಿಯೊವನ್ನು ಪಾಕಿಸ್ತಾನದ ಕಿರಾಣ ಬೆಟ್ಟದ ಮೇಲೆ ನಡೆದಿರುವ ದಾಳಿ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ಪ್ರಕಟಿಸಿದೆ.

ಗುಂಡಣ್ಣ



ಬುದ್ಧಿಯನ್ನು ಸರಿಯಾಗಿ ಬಳಸಿ

ನುಡಿ ಬೆಳಗು 202

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಜೀವನದಲ್ಲಿ ಹಣ ಎಷ್ಟು ಮುಖ್ಯ? ಜೀವನಕ್ಕೆ ಹಣ ಬೇಕು. ಆದರೆ ಹಣವೇ ಜೀವನ ಅಲ್ಲ. ಹಣದಿಂದ ಎಲ್ಲವನ್ನೂ ಕೊಳ್ಳಲು ಸಾಧ್ಯವಿಲ್ಲ. ಹಣದಿಂದ ಮಂಚ ಕೊಳ್ಳಬಹುದು. ಆದರೆ ನಿದ್ದೆ ಕೊಳ್ಳಲು ಸಾಧ್ಯವಿಲ್ಲ. ಹಣದಿಂದ ಔಷಧ ಕೊಳ್ಳಬಹುದು. ಆದರೆ ಆರೋಗ್ಯ ಕೊಳ್ಳಲು ಸಾಧ್ಯವಿಲ್ಲ. ಹಣದಿಂದ ಪುಸ್ತಕ ಕೊಳ್ಳಬಹುದು. ಆದರೆ ಜ್ಞಾನ ಕೊಳ್ಳಲು ಸಾಧ್ಯವಿಲ್ಲ. ಈ ದೇಹವನ್ನು ಹಣ ಗಳಿಕೆಗೆ ಅಲ್ಲದೆ ಇತರೆ ಒಳ್ಳೆಯ ಕೆಲಸಗಳಿಗೂ ಬಳಸಬೇಕು. ಬುದ್ಧಿಯನ್ನು ಚೆನ್ನಾಗಿ ಬಳಸಿಕೊಳ್ಳಬೇಕು.

ಇವತ್ತಿನ ಆವಿಷ್ಕಾರಗಳೆಲ್ಲ ಮನುಷ್ಯನ ಬುದ್ಧಿಯ ಆವಿಷ್ಕಾರಗಳು. ಇಂಟರ್‌ನೆಟ್ ಕೂಡಾ ಮನುಷ್ಯನ ಸಂಶೋಧನೆಯೆ. ಜಗತ್ತಿನ ಶ್ರೇಷ್ಠ ನಿರ್ಮಾಣಗಳಾದ ತಾಜ್ ಮಹಲ್, ಗೋಲ ಗುಂಬಜ್, ಚೀನಾದ ಮಹಾ ಗೋಡೆ ಇರಬಹುದು, ಈಜಿಪ್ಟಿನ ಪಿರಮಿಡ್‌ಗಳಿರಬಹುದು, ಎಲ್ಲವೂ ಮನುಷ್ಯನ ಒಳ್ಳೆಯ ಬುದ್ಧಿಯ ಆವಿಷ್ಕಾರಗಳು. ನ್ಯೂಟನ್ ಬಗ್ಗೆ ನಿಮಗೆಲ್ಲಾ ಗೊತ್ತು. ಆತ ಚಲನೆಯ ನಿಯಮಗಳನ್ನು ಕಂಡು ಹಿಡಿದ. ಅವ ಒಂದು ದಿನ ಸೇಬು ಹಣ್ಣಿನ ಗಿಡದ ಬುಡದಲ್ಲಿ ಕುಳಿತಿದ್ದ. ಹಣ್ಣೊಂದು ಕೆಳಕ್ಕೆ ಬಿತ್ತು. ಅವ ಅದನ್ನು ತೆಗೆದುಕೊಂಡು ಜನರ ಬಳಿಗೆ ಹೋದ. ‘ಹಣ್ಣು ಗಿಡದಿಂದ ಕೆಳಕ್ಕೆ ಯಾಕೆ ಬಿತ್ತು’ ಎಂದು ಕೇಳಿದ. ಅದಕ್ಕೆ ಜನರು ‘ಹುಚ್ಚಾ, ಹಣ್ಣು ಕೆಳಕ್ಕೆ ಬೀಳದೆ ಮೇಲಕ್ಕೆ ಹೋಗುತ್ತದೇನು?’ ಎಂದು ಪ್ರಶ್ನೆ ಮಾಡಿದರು. ‘ನಾನೂ ಅದನ್ನೇ ಕೇಳುತ್ತಿದ್ದೇನೆ. ಹಣ್ಣು ಕೆಳಕ್ಕೇ ಯಾಕೆ ಬಿತ್ತು. ಮೇಲಕ್ಕೆ ಯಾಕೆ ಹೋಗಲಿಲ್ಲ’ ಎಂದು ಕೇಳಿದ. ಅದೇ ಪ್ರಶ್ನೆಯನ್ನು ಇಟ್ಟುಕೊಂಡು ವಿಚಾರ ಮಾಡಿದ್ದರಿಂದ ಆತ ಭೂಮಿಗೆ ಗುರುತ್ವಾಕರ್ಷಣ ಶಕ್ತಿ ಇದೆ ಎನ್ನುವುದನ್ನು ಸಾಧಿಸಿ ತೋರಿಸಿದ. ಮನುಷ್ಯನ ಬುದ್ಧಿಶಕ್ತಿ ಅಷ್ಟು ಕೆಲಸ ಮಾಡುತ್ತದೆ.

ಗುರುತ್ವಾಕರ್ಷಣೆ ಶಕ್ತಿಯನ್ನು ಸಂಶೋಧಿಸಿದ್ದರಿಂದ ನ್ಯೂಟನ್‌ನನ್ನು ಬಹಳಷ್ಟು ಜನ ಭಾಷಣಕ್ಕೆ ಕರೆಯುತ್ತಿದ್ದರು. ಅವನ ವಾಹನದ ಚಾಲಕ ಒಂದು ದಿನ ನ್ಯೂಟನ್ ಗೆ ‘ಗುರುತ್ವಾಕರ್ಷಣೆ ಕಂಡು ಹಿಡಿದ ನಂತರ ಎರಡು ವರ್ಷಗಳಿಂದ ನಿಮ್ಮ ಭಾಷಣ ಕೇಳುತ್ತಾ ಇದ್ದೇನೆ. ಎಲ್ಲ ಕಡೆ ಒಂದೇ ವಿಷಯ ಮಾತನಾಡುತ್ತೀರಿ. ಈಗ ನೀವು ಮಾತನಾಡುವ ವಿಷಯವನ್ನು ನಾನೇ ಮಾತನಾಡಬಹುದು. ನನಗೆ ಅದು ಅಷ್ಟು ಅಭ್ಯಾಸವಾಗಿದೆ’ ಎಂದ. ಅದಕ್ಕೆ ನ್ಯೂಟನ್ ‘ಆಯ್ತು, ಮುಂದಿನ ಊರಿಗೆ ಹೋಗುತ್ತೀನಲ್ಲ. ಅಲ್ಲಿ ನೀನೇ ಭಾಷಣ ಮಾಡು. ಅಲ್ಲಿ ಯಾರಿಗೂ ನನ್ನ ಪರಿಚಯ ಇಲ್ಲ’ ಎಂದ. ಅದಕ್ಕೆ ಚಾಲಕ ಒಪ್ಪಿದ. ಮುಂದಿನ ಊರಿನಲ್ಲಿ ನ್ಯೂಟನ್ ತನ್ನ ಕೋಟ್ ಬಿಚ್ಚಿ ಚಾಲಕನಿಗೆ ಹಾಕಿ ಕಳಿಸಿದ. ಚಾಲಕನ ಸೀಟಿನಲ್ಲಿ ತಾನು ಕುಳಿತ. ಚಾಲಕ ಚೆನ್ನಾಗಿ ಮಾತನಾಡಿದ. ನಂತರ ಅಲ್ಲಿ ಸೇರಿದ್ದ ವಿಜ್ಞಾನಿಗಳು ಅವನಿಗೆ ಪ್ರಶ್ನೆ ಕೇಳಲು ಶುರು ಮಾಡಿದರು. ಅದಕ್ಕೆ ನ್ಯೂಟನ್ ವೇಷದಲ್ಲಿದ್ದ ಚಾಲಕ ‘ಇಷ್ಟು ಸಣ್ಣ ಪ್ರಶ್ನೆಗಳಿಗೆಲ್ಲ ನಾನು ಯಾಕೆ ಉತ್ತರ ಹೇಳಬೇಕು. ನನ್ನ ಚಾಲಕನೇ ಉತ್ತರ ಹೇಳುತ್ತಾನೆ’ ಎಂದ. ಮನುಷ್ಯನ ಬುದ್ಧಿಶಕ್ತಿ ಬಹಳ ತೀಕ್ಷ್ಣ ಇರುತ್ತದೆ. ಸಂಕಷ್ಟದಿಂದಲೂ ಅದು ಪಾರು ಮಾಡುತ್ತದೆ. ದೇಹವನ್ನು ಸರಿಯಾಗಿ ಬಳಸಿಕೊಳ್ಳುವುದು, ಬುದ್ಧಿಯನ್ನು ಸರಿಯಾಗಿ ಬಳಸಿಕೊಳ್ಳುವುದು ಮತ್ತು ದೇವರು ಕೊಟ್ಟ ಭಾವವನ್ನು ಸರಿಯಾಗಿ ಬಳಸಿಕೊಳ್ಳುವುದು ಜೀವನದಲ್ಲಿ ಬಹಳ ಮುಖ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮೇ 26, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ದಶಿ ಗಂ. 12-12 ನಕ್ಷತ್ರ: ಭರಣಿ ಗಂ. 8-24 ಯೋಗ: ಶೋಭನ ಗಂ. 7-02 ನಂತರ ಅತಿಗಂಡ ಗಂ 26-55 ಕರಣ: ಶಕುನಿ ಗಂ. 12-12, ವೃಷಭ ಮಾಸದ 12 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-06 **ಸೂರ್ಯಾಸ್ತ:** 06-49
ಮುಸ್ಲಿಂ ದಿನಾಂಕ: 27 ಜುಲ್ಕಾಯದ್
ಅದೃಷ್ಟ ಸಂಖ್ಯೆ: 3, 10

ಮೇಷ: ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿಗಾರರಿಗೆ ಅವಕಾಶಗಳು ಸಿಗಲಿವೆ. ಆಸ್ತಿಗೆ ಸಂಬಂಧಿಸಿದಂತೆ ದಾಯಾದಿಗಳ ತಕರಾರುಗಳು ನಿಧಾನವಾಗಿ ದೂರ ಸರಿದು ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ.

ವೃಷಭ: ಮುಂದಿನ ಗುರಿಯನ್ನು ನೆನಪಿನಲ್ಲಿಟ್ಟುಕೊಂಡು ಇಂದಿನ ಹೆಜ್ಜೆಯನ್ನು ಇಡುವುದು ಒಳ್ಳೆಯದು. ರೇಷ್ಮೆ ನೇಕಾರರಿಗೆ ತಮ್ಮ ಹೊಸ ನೇಯ್ಗೆ ಹಾಗೂ ಡಿಸೈನ್‌ಗಳಿಂದ ಉತ್ತಮ ಅವಕಾಶಗಳು ಲಭ್ಯವಾಗಲಿವೆ.

ಮಿಥುನ: ಪ್ರವೃತ್ತಿಗೆ ಕೊಡುತ್ತಿರುವ ಗಮನ, ಸಮಯ ಹೆಚ್ಚು ಎಂದು ಅನಿಸಲಿದೆ. ಷೇರುಪೇಟೆಯಲ್ಲಿ ಹಣ ಹೂಡಲು ಸಮಯವಾಗಿದೆ. ನ್ಯಾಯಾಲಯದ ಕಾರ್ಯಗಳಲ್ಲಿ ಮುನ್ನಡೆ ಕಾಣುವಿರಿ.

ಕರ್ಕಾಟಕ: ಕಷ್ಟಗಳನ್ನು ಎದುರಿಸುವ ಉತ್ತಮ ಎದೆಗಾರಿಕೆಯನ್ನು ಹೊಂದಿರುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳಿಂದ ಸಮಾಧಾನವಾಗುವುದು. ವಿಷ್ಣುಸಹಸ್ರನಾಮದ ಪಠಣೆಯಿಂದ ನೆಮ್ಮದಿ ಇರುವುದು.

ಸಿಂಹ: ಸಮಯವರಿತು ಕಾರ್ಯಸಾಧನೆ ಮಾಡುವುದು ಒಳ್ಳೆಯದು. ಆರಂಭಿಸಿದ ಕೆಲಸ ಕಾರ್ಯಗಳು ವಿಳಂಬಗತಿಯಲ್ಲಿ ಸಾಗಿದರೂ ಪೂರ್ಣಗೊಳ್ಳಲಿವೆ. ಗೃಹಾಲಂಕಾರ ವಸ್ತುಗಳ ವ್ಯಾಪಾರದಿಂದ ಲಾಭ ಕಾಣುವಿರಿ.

ಕನ್ಯಾ: ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪ್ರಗತಿ ಇದ್ದು, ಮುಂದಿನ ಭವಿಷ್ಯಕ್ಕೆ ಗೋಚರಕ್ಕೆ ಬರುತ್ತವೆ. ದೀರ್ಘಕಾಲದ ಚಿಂತನೆ ಸದ್ಯದಲ್ಲೇ ಕಾರ್ಯರೂಪಕ್ಕೆ ಬಂದೀತು. ಮನರಂಜನೆಗಾಗಿ ಖರ್ಚುವೆಚ್ಚಗಳು ಅಧಿಕವಾಗಲಿದೆ.

ತುಲಾ: ಶಿಸ್ತಿನಿಂದ ಕೆಲಸ ಕಾರ್ಯಗಳನ್ನು ಮಾಡಿ, ಗಮನಿಸುವ ಜನರು ಸುತ್ತಲೂ ಇರುತ್ತಾರೆ. ಸಾಕುಪ್ರಾಣಿಗಳ ಗಮನವಿರಲಿ, ಮುನ್ನೆಚ್ಚರಿಕೆಯಾಗಿ ವೈದ್ಯರಲ್ಲಿ ಒಮ್ಮೆ ಚರ್ಚಿಸಿ. ಮಾತೃವರ್ಗದವರ ಸಮಾಗಮ ಆಗಲಿದೆ.

ವೃಶ್ಚಿಕ: ವೈಯಕ್ತಿಕ ಬದುಕಿನಲ್ಲಿ ಹಿತಕರ ಮಾರ್ಪಾಟುಗಳು ಅನಿವಾರ್ಯವಾಗುವುದು. ಆದಾಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಗುಣಮಟ್ಟವನ್ನು ಕಡಿಮೆ ಮಾಡಿಕೊಳ್ಳಬೇಡಿ. ನವದಂಪತಿಗೆ ಸಂತಾನದ ಶುಭಸುದ್ದಿ ಇರಲಿದೆ.

ಧನು: ಕಾರ್ಯಕ್ಷೇತ್ರದಲ್ಲಿ ಶತ್ರುಗಳು ಹಿನ್ನಡೆ ಅನುಭವಿಸಿ ಮನಸ್ಸಿಗೆ ಸಮಾಧಾನ ದೊರಕಲಿದೆ. ಈ ಮಧ್ಯ ವಿವಿಧ ರೀತಿಯಲ್ಲಿ ಧನಾದಾಯದ ಮಾರ್ಗವು ಗೋಚರಿಸಲಿದೆ. ಮುಂದಿನ ಯೋಜನೆಗಳ ಬಗ್ಗೆ ಕಾರ್ಯಾಚರಣೆ ಪ್ರಾರಂಭಿಸಿ.

ಮಕರ: ಪದವೀಧರರಿಗೆ ತಮ್ಮ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡುಬರಲಿದೆ. ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿ ಇರುವ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಲು ಹಿಂಜರಿಕೆ ಬೇಡ.

ಕುಂಭ: ನೂತನ ಅಧಿಕಾರಿಗಳ ಆಗಮನದಿಂದಾಗಿ ಕಚೇರಿಯಲ್ಲಿ ಕೆಲಸಗಳು ತೋರಿಬರಲಿವೆ. ಲೆಕ್ಕಪತ್ರಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳುವ ಕಾರ್ಯದ ಬಗ್ಗೆ ಯೋಚನೆ ಮಾಡಿ. ನ್ಯಾಯವಾದಿಗಳಿಗೆ ಸುಲಭದಲ್ಲಿ ಜಯ ಲಭಿಸಲಿದೆ.

ಮೀನ: ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರಲಿದೆ. ಆತುರ ಬೇಡ. ಕೆಲಸದ ಒತ್ತಡ ಹಾಗೂ ಜವಾಬ್ದಾರಿಗಳು ಹೆಚ್ಚಲಿವೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಏಕಾಗ್ರತೆಯನ್ನು ಬೆಳೆಸಿಕೊಳ್ಳಿರಿ.

ಪದಬಂಧ 6054

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಉತ್ತ ಮೇಲೆ ನೆಲವನ್ನು ಮಟ್ಟ ಮಾಡುವ ಸಾಧನ (3)
4.ಅಟ್ಟದ ಮೇಲೆ ಆದರಣೆ ಮಾಡಿದ್ದಕ್ಕೇ ಈ ಸಾಂದ್ರತೆ! (3)
5.ಓಡುತ್ತಾ ಹೋಗಿ ಸುದ್ದಿಯನ್ನು ಮುಟ್ಟಿಸುವವನು (4)
6.ಆಹುತಿಯನ್ನು ಕೊಡುವ ಸ್ಥಳ (4)
8.ಹತ್ತಿರದಲ್ಲಿ ಪ್ರತ್ಯಕ್ಷನಾಗಿರುವ ಶಿವ (2)
10.ಇಪ್ಪತ್ನಾಲ್ಕು ಗಂಟೆಗಳ ಅವಧಿ (2)
13.ನಿದರ್ಶನ ತೋರಿಸುತ್ತಿರುವ ತತ್ವ ಜ್ಞಾನಿ! (4)
14.ಸುಮಾರು ಮೂರು ಮೈಲುಗಳ ಅಳತೆ (4)
16.ಪದ್ಯಗಳ ಸಾಲು (3)

ಮೇಲಿಂದ ಕೆಳಕ್ಕೆ
1.ಹೊಟ್ಟೆಯನ್ನು ಹೊರೆದುಕೊಳ್ಳುವುದು (6)
2.ಲಲಾಟದ ಮೇಲೆ ಮೂಡಿರುವ ವಿಧಿಲಿಖಿತ (5)
3.ಸರಿಯಾದ ಕಾಲ (3)
5.ವಠಾರಕ್ಕೆ ಬಂದಿರುವ ಛಲವಾದಿ (4)
7.ಒಪ್ಪವಾಗಿ ಬಂದಿರುವ ಪರಿವಿಡಿ (6)
9.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)
11.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)
12.ಸರೀಕರೆದುರು ಧರಿಸಿಕೊಂಡ ಕಂಠಾಭರಣ (3)



6053ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಪ್ಲುತ 5.ಗುಲಾಮ 8.ಕನ್ನಡಿ 9.ಗುಲಾಬಿ 10.ಕರ 11.ಹರ್ಡೇಕರ ಮಂಜಪ್ಪ 12.ಬತ್ತಿ 14.ಡವಾಲಿ 17.ವಚನ 18.ಪಿಟೀಲು 19.ಘಟ

ಮೇಲಿಂದ ಕೆಳಕ್ಕೆ: 1.ಉಂಗುರ 3.ತಕಲಿ 4.ಬಡಿವಾರ 6.ಮಗು 7.ಅಂಬಿಗರಚೌಡಯ್ಯ 10.ಕಷ್ಟ 11.ಹತ್ತಿ 12.ಬಳುವಳಿ 13.ಅನಘ 15.ಲಿಪಿ 16.ಕುಲುಮೆ

ಸುಡೊಕು 6438

8		2		4		1		5
			8		9			
9		6			7	2		4
			1	6				
					3	8		6
				8				
	4			9	2			
1		5	7				4	
2		3		5	1	9		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6437 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

₹16 ಸಾವಿರ ಕೋಟಿ ಸಾಲ ವಸೂಲಾತಿ ಗುರಿ: ಪಿಎನ್‌ಬಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹16 ಸಾವಿರ ಕೋಟಿ ಸಾಲ ವಸೂಲಾತಿಯ ಗುರಿ ಹೊಂದಲಾಗಿದೆ. ವಸೂಲಾಗದ ಸಾಲದ ಪ್ರಮಾಣವನ್ನು ಶೇ 1ರ ಮಿತಿಯಲ್ಲಿಯೇ ಕಾಯ್ದುಕೊಳ್ಳಲಾಗುವುದು ಎಂದು ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ತಿಳಿಸಿದೆ.

2024-25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹4,773 ಕೋಟಿ ಸಾಲ ವಸೂಲಾತಿಯಾಗಿತ್ತು. ಪೂರ್ಣ ಆರ್ಥಿಕ ವರ್ಷದಲ್ಲಿ ₹14,336 ಕೋಟಿ ವಸೂಲಾತಿಯಾಗಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಶೋಕ್ ಚಂದ್ರ ಅವರು, ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಬ್ಯಾಂಕ್‌ನ ರೈಟ್ ಆಫ್ ಮಾಡಲಾದ ಸಾಲದ ಮೊತ್ತ ₹91 ಸಾವಿರ ಕೋಟಿ ಆಗಿದೆ. ಈ ಪೈಕಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹6 ಸಾವಿರ ಕೋಟಿ ವಸೂಲಾತಿಗೆ ಗುರಿ ಹೊಂದಲಾಗಿದೆ. ಪ್ರತಿ ತ್ರೈಮಾಸಿಕಕ್ಕೆ ಕನಿಷ್ಠ ₹1,500 ಕೋಟಿ ವಸೂಲಾತಿ ಮಾಡಲಾಗುವುದು ಎಂದು ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದಲ್ಲಿ ಒಟ್ಟಾರೆ ಸಾಲದ ಪೈಕಿ ಚಿಲ್ಲರೆ, ಕೃಷಿ ಮತ್ತು ಎಂಎಸ್‌ಎಂಇ ವಲಯಕ್ಕೆ ₹6.02 ಲಕ್ಷ ಕೋಟಿ (ಶೇ 56) ಸಾಲ ನೀಡಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ಪ್ರಮಾಣವನ್ನು ಶೇ 58ಕ್ಕೆ ಹೆಚ್ಚಿಸಲಾಗುವುದು. ಕಳೆದ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ಒಟ್ಟು ₹26.83 ಲಕ್ಷ ಕೋಟಿ ವಹಿವಾಟು ನಡೆಸಿದ್ದು, ₹16,630 ಕೋಟಿ ಲಾಭ ಗಳಿಸಿದೆ ಎಂದಿದ್ದಾರೆ.

ಈಗ 4ನೇ ಅತಿದೊಡ್ಡ ಆರ್ಥಿಕತೆ: ನೀತಿ ಆಯೋಗ ಹೇಳಿಕೆ

ಜಪಾನ್ ಹಿಂದಿಕ್ಕಿದ ಭಾರತ

ನವದೆಹಲಿ (ಪಿಟಿಐ): 'ಜಪಾನ್ ದೇಶವನ್ನು ಹಿಂದಿಕ್ಕಿರುವ ಭಾರತವು ಜಾಗತಿಕ ಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ' ಎಂದು ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಹ್ಮಣ್ಯಂ ಹೇಳಿದ್ದಾರೆ.

ನೀತಿ ಆಯೋಗದ ಸಭೆಯಲ್ಲಿ ನಡೆದ ಚರ್ಚೆ ಕುರಿತು ವಿವರ ನೀಡುವ ವೇಳೆ ಈ ವಿಷಯ ಪ್ರಸ್ತಾಪಿಸಿದ ಅವರು, 'ಜಾಗತಿಕ ಮಟ್ಟದ ಭೌಗೋಳಿಕ ಮತ್ತು ಆರ್ಥಿಕ ಸ್ಥಿತಿಗತಿಯು ಭಾರತಕ್ಕೆ ಅನುಕೂಲಕರವಾಗಿದೆ' ಎಂದು ಹೇಳಿದರು.

ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ದತ್ತಾಂಶಗಳನ್ನು ಉಲ್ಲೇಖಿಸಿದ ಅವರು, 'ಭಾರತವು ಸದ್ಯ 4 ಟ್ರಿಲಿಯನ್ ಡಾಲರ್ (₹340 ಲಕ್ಷ ಕೋಟಿ) ಆರ್ಥಿಕತೆ ಹೊಂದಿದ ದೇಶವಾಗಿದೆ' ಎಂದರು.

ಪ್ರಸ್ತುತ ಅಮೆರಿಕ, ಚೀನಾ ಮತ್ತು ಜರ್ಮನಿಯು ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿವೆ. ಆ ನಂತರದ ಸ್ಥಾನದಲ್ಲಿ ಭಾರತವಿದೆ ಎಂದು ಹೇಳಿದರು.

2024ರವರೆಗೂ ಭಾರತವು ಐದನೇ ಅತಿದೊಡ್ಡ ಆರ್ಥಿಕತೆಯಾಗಿತ್ತು. ಕೇಂದ್ರ ಸರ್ಕಾರವು ಆರ್ಥಿಕತೆ ಬೆಳವಣಿಗೆಗೆ ಪೂರಕವಾಗಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಇವುಗಳಲ್ಲಿ ಸ್ಥಿರತೆ ಕಾಯ್ದುಕೊಂಡರೆ ಮುಂದಿನ ಮೂರು ವರ್ಷಗಳಲ್ಲಿ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಹೇಳಿದರು.

ಅಮೆರಿಕದ ಬದಲಾಗಿ ಭಾರತ ಸೇರಿ ಜಗತ್ತಿನ ಯಾವುದೇ ರಾಷ್ಟ್ರಗಳಲ್ಲಿ ತಯಾರಿಸುವ ಆ್ಯಪಲ್ ಕಂಪನಿಯ ಐಫೋನ್‌ಗಳಿಗೆ ಸುಂಕ ವಿನಾಯಿತಿ ನೀಡುವುದಿಲ್ಲ ಎಂಬ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸುಂಕ ಹೇರಿಕೆ ಬಗ್ಗೆ ಇನ್ನೂ ಖಚಿತತೆ ಇಲ್ಲ. ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಭಾರತವು ಐಫೋನ್ ತಯಾರಿಕೆಗೆ ಅಗ್ಗದ ಸ್ಥಳವಾಗಿದೆ' ಎಂದು ಪ್ರತಿಕ್ರಿಯಿಸಿದರು.

ಎರಡನೇ ಹಂತದಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಜಮೀನು ಹಾಗೂ ಪ್ರಮುಖವಲ್ಲದ ಆಸ್ತಿಗಳ ನಗದೀಕರಣ ಪ್ರಕ್ರಿಯೆಯನ್ನು ಸಿದ್ಧಪಡಿಸಲಾಗುತ್ತಿದೆ. ಆಗಸ್ಟ್‌ನಲ್ಲಿ ಈ ಬಗ್ಗೆ ಅಧಿಕೃತವಾಗಿ ಪ್ರಕಟಿಸಲಾಗುವುದು ಎಂದು ಹೇಳಿದರು.

ಐಎಂಎಫ್ ವರದಿ ಹೇಳಿದ್ದೇನು?

ಅಂತರರಾಷ್ಟ್ರೀಯ ಹಣಕಾಸು ನಿಧಿಯು ಏಪ್ರಿಲ್‌ನಲ್ಲಿ ಬಿಡುಗಡೆ ಮಾಡಿದ್ದ ಜಾಗತಿಕ ಆರ್ಥಿಕ ಮುನ್ನೋಟ ಕುರಿತ ವರದಿಯಲ್ಲಿ, '2025ರಲ್ಲಿ ಭಾರತವು 4.19 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ (₹356.15 ಲಕ್ಷ ಕೋಟಿ) ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಲಿದೆ' ಎಂದು ಹೇಳಿತ್ತು.

ಐಎಂಎಫ್ ವರದಿ ಅನ್ವಯ ಭಾರತದ ತಲಾ ಆದಾಯವು ದುಪ್ಪಟ್ಟುಗೊಂಡಿದೆ. 2013–14ರಲ್ಲಿ 1,438 ಡಾಲರ್ (₹1,22,476) ಇದ್ದ ತಲಾ ಆದಾಯವು, ಪ್ರಸಕ್ತ ವರ್ಷದಲ್ಲಿ 2,880 ಡಾಲರ್‌ಗೆ (₹2,45,293) ಮುಟ್ಟಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.2ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ವಿಕಸಿತ ಭಾರತಕ್ಕೆ ಕೇಂದ್ರದ ಒತ್ತು

ಕಳೆದ ಒಂದು ದಶಕದ ಅವಧಿಯಲ್ಲಿ ಭಾರತವು ವಿಶ್ವದ ಐದು ಅತಿದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಿದೆ ಎಂದು ನೀತಿ ಆಯೋಗ ಪ್ರಕಟಿಸಿರುವ '2047ರ ವಿಕಸಿತ ಭಾರತಕ್ಕಾಗಿ ವಿಕಸಿತ ರಾಜ್ಯ' ಶೀರ್ಷಿಕೆಯ ವರದಿ ಹೇಳಿದೆ.

2024–25ರಲ್ಲಿ ವಿಶ್ವಬ್ಯಾಂಕ್ ಪ್ರಕಟಿಸಿರುವ ವರದಿ ಪ್ರಕಾರ 14,005 ಡಾಲರ್ (₹11,92,822) ತಲಾ ಆದಾಯ ಹೊಂದಿರುವ ದೇಶಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ಪರಿಗಣಿಸಲಾಗುತ್ತದೆ. 2047ರ ವೇಳೆಗೆ ಭಾರತವು ಈ ರಾಷ್ಟ್ರಗಳ ಪಟ್ಟಿಗೆ ಸೇರ್ಪಡೆಗೊಳ್ಳುವ ಗುರಿ ಹೊಂದಿದೆ. ಈ ವೇಳೆಗೆ ದೇಶದ ಜಿಡಿಪಿ ಗಾತ್ರವು 30 ಟ್ರಿಲಿಯನ್ ಡಾಲರ್‌ಗೆ (₹2,550 ಲಕ್ಷ ಕೋಟಿ) ತಲುಪಲಿದೆ ಎಂದು ವಿವರಿಸಿದೆ.

ಸುದ್ದಿ 2 ನಿಮಿಷ

ವಜ್ರ ಉದ್ಯಮಕ್ಕೆ ಪ್ಯಾಕೇಜ್ ಪ್ರಕಟ



ಸೂರತ್ (ಪಿಟಿಐ): ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ವಜ್ರ ಉದ್ಯಮದ ಪುನಶ್ಚೇತನಕ್ಕೆ ಗುಜರಾತ್ ಸರ್ಕಾರವು, ವಿಶೇಷ ಪ್ಯಾಕೇಜ್ ಘೋಷಿಸಿದೆ.

ಪ್ಯಾಕೇಜ್‌ನಡಿ ಈ ವಲಯದಲ್ಲಿ ದುಡಿಯುತ್ತಿರುವ ನೌಕರರ ಮಕ್ಕಳ ಒಂದು ವರ್ಷದ ಶಾಲಾ ಶುಲ್ಕವನ್ನು ಸರ್ಕಾರವೇ ಪಾವತಿಸಲಿದೆ. ಪಾಲಿಶ್ ಘಟಕಗಳಿಗೆ ನೀಡುವ ₹5 ಲಕ್ಷದ ಬಂಡವಾಳಕ್ಕೆ ಮೂರು ವರ್ಷದವರೆಗೆ ಬಡ್ಡಿ ಸಬ್ಸಿಡಿ ದೊರೆಯಲಿದೆ. ಅಲ್ಲದೆ, ಈ ಘಟಕಗಳಿಗೆ ವಿದ್ಯುತ್ ಶುಲ್ಕದಿಂದಲೂ ವಿನಾಯಿತಿ ನೀಡಲಾಗಿದೆ.

ಸೂರತ್ ಒರಟು ವಜ್ರಗಳ ಕಟ್ ಮತ್ತು ಪಾಲಿಶ್‌ಗೆ ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆದಿದೆ. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಅನಿಶ್ಚಿತ ಸ್ಥಿತಿಯಿಂದಾಗಿ ವಜ್ರದ ಉದ್ಯಮವು ಸಂಕಷ್ಟಕ್ಕೆ ಸಿಲುಕಿದೆ.

4 ಸಾವಿರಕ್ಕೂ ಹೆಚ್ಚು ಪಾಲಿಶ್ ಮತ್ತು ಸಂಸ್ಕರಣಾ ಘಟಕಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ. 10 ಲಕ್ಷಕ್ಕೂ ಹೆಚ್ಚು ಜನರು ಈ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ.

ಐಪಿಒ: 4 ಕಂಪನಿಗಳ ಸಿದ್ಧತೆ

ನವದೆಹಲಿ (ಪಿಟಿಐ): ನಾಲ್ಕು ಕಂಪನಿಗಳು ಮುಂದಿನ ವಾರ ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ₹6,600 ಕೋಟಿ ಬಂಡವಾಳ ಸಂಗ್ರಹಕ್ಕೆ ಮುಂದಾಗಿವೆ.

ಲೀಲಾ ಪ್ಯಾಲೆಸಸ್ ಹೋಟೆಲ್ಸ್ ಆ್ಯಂಡ್ ರೆಸಾರ್ಟ್ಸ್‌ನ ಬ್ರ್ಯಾಂಡ್ ಆದ ಸ್ಕ್ಲಾಸ್ ಬೆಂಗಳೂರು ಲಿಮಿಟೆಡ್, ಏಜಿಸ್ ವೊಪಾಕ್ ಟರ್ಮಿನಲ್ಸ್, ಪ್ರೊಸ್ಟಾರ್ಮ್ ಇನ್ಫೊ ಸಿಸ್ಟಮ್ಸ್ ಮತ್ತು ಸ್ಕೋಡಾ ಟ್ಯೂಬ್ಸ್ ಕಂಪನಿಯು ಬಂಡವಾಳ ಸಂಗ್ರಹಿಸಲಿದೆ.

ಪ್ರಸಕ್ತ ವರ್ಷದ ಆರಂಭದಿಂದ ಇಲ್ಲಿಯವರೆಗೆ 12 ಕಂಪನಿಗಳು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಿವೆ. ಕಳೆದ ವರ್ಷ 91 ಕಂಪನಿಗಳು ₹1.6 ಲಕ್ಷ ಕೋಟಿ ಸಂಗ್ರಹಿಸಿದ್ದವು.

ಜಾಗತಿಕ ಮತ್ತು ದೇಶೀಯ ಮಟ್ಟದಲ್ಲಿ ತಲೆದೋರಿರುವ ಅನಿಶ್ಚಿತತೆಯಿಂದಾಗಿ ಷೇರು ಮಾರುಕಟ್ಟೆಯಲ್ಲಿ ಚಂಚಲತೆ ಉಂಟಾಗಿದೆ. ಇದು ಐಪಿಒಗಳ ಸಂಖ್ಯೆ ಇಳಿಕೆಗೆ ಕಾರಣವಾಗಿದೆ. ಆದರೂ, ಮಾರುಕಟ್ಟೆ ಸ್ಥಿರವಾಗಿರುವುದರಿಂದ ಕಡಿಮೆ ಸಂಖ್ಯೆಯಲ್ಲಿ ಐಪಿಒಗಳು ದಾಖಲಾಗುತ್ತಿವೆ ಎಂದು ತಜ್ಞರು ಹೇಳಿದ್ದಾರೆ.

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹605

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹200-512
ದ್ವಿತಳಿ (ಬಿ.ವಿ)	₹250-659

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

20ನೇ ವರ್ಷದ ಚಿರಸ್ಮರಣೆ

ಶ್ರೀ ಟಿ. ಅಣ್ಣಯಪ್ಪ
ಮಾ॥ ತಾ॥ ಪಂ॥ ಸದಸ್ಯರು, ಮಾರಗೊಂಡಹಳ್ಳಿ
ನೀವು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯುತ್ತಿದ್ದೇವೆ. ಸದಾ ನಿಮ್ಮ ಆಶೀರ್ವಾದ ನಮಗಿರಲಿ.
ಶ್ರೀಮತಿ ದೊಡ್ಡ ಅಮ್ಮಯ್ಯಮ್ಮ ಮತ್ತು ಮಕ್ಕಳು
ಎ. ಶ್ರೀನಿವಾಸಮೂರ್ತಿ– 9880427590

ಬಾಂಗ್ಲಾ: ಎಂಟು ಪೊಲೀಸರ ವಿರುದ್ಧ ಆರೋಪ ನಿಗದಿ

ಢಾಕಾ/ನವದೆಹಲಿ (ಪಿಟಿಐ): ಸರ್ಕಾರದ ವಿರುದ್ಧ ಕಳೆದ ವರ್ಷ ವಿದ್ಯಾರ್ಥಿಗಳು ನಡೆಸಿದ ಹೋರಾಟದ ವೇಳೆ ಹೋರಾಟಗಾರರ ಮೇಲೆ ದೌರ್ಜನ್ಯ ನಡೆಸಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಪೊಲೀಸ್ ಕಮಿಷನರ್ ಹಬೀಬುರ್ ರಹಮಾನ್ ಹಬೀಬ್ ಸೇರಿ ಇತರೆ ಏಳು ಪೊಲೀಸ್ ಅಧಿಕಾರಿಗಳ ಮೇಲೆ ಬಾಂಗ್ಲಾದೇಶ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಆರೋಪ ನಿಗದಿ ಮಾಡಿದೆ.

ಹೋರಾಟದ ವೇಳೆ ನಡೆಸಲಾದ ಸಾಮೂಹಿಕ ಹತ್ಯೆಗಳು ಮತ್ತು ದೌರ್ಜನ್ಯಕ್ಕೆ ಸಂಬಂಧಿಸಿದ ಅರ್ಜಿಯೊಂದನ್ನು ಇದೇ ಮೊದಲ ಬಾರಿಗೆ ನ್ಯಾಯಮಂಡಳಿಯು ವಿಚಾರಣೆಗೆ ಕೈಗೆತ್ತಿಕೊಂಡಿದೆ. ಜೂನ್ 3ರಿಂದ ಈ ಅರ್ಜಿಯ ವಿಚಾರಣೆ ನಡೆಸುವುದಾಗಿ ನ್ಯಾಯಮಂಡಳಿ ಭಾನುವಾರ ಹೇಳಿದೆ.

ಸರ್ಕಾರದ ಹಣಕಾಸು ಸ್ಥಿತಿಗೆ ಬಲ

ಆರ್‌ಬಿಐ ಲಾಭಾಂಶ: ವಿತ್ತೀಯ ಕೊರತೆ ತಗ್ಗಿಸಲು ಸಹಕಾರಿ– ಎಸ್‌ಬಿಐ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೇಂದ್ರ ಸರ್ಕಾರಕ್ಕೆ ₹2.69 ಲಕ್ಷ ಕೋಟಿ ಲಾಭಾಂಶ ನೀಡುತ್ತಿದೆ. ಇದು ಸರ್ಕಾರದ ಹಣಕಾಸಿನ ಸ್ಥಿತಿಯನ್ನು ಸರಾಗಗೊಳಿಸಲು ಹಾಗೂ ಆರ್ಥಿಕತೆ ಬೆಳವಣಿಗೆಗೆ ನೆರವಾಗಲಿದೆ ಎಂದು ಎಸ್‌ಬಿಐ ಸಂಶೋಧನಾ ವರದಿ ತಿಳಿಸಿದೆ.

ಆರ್‌ಬಿಐ ಮತ್ತು ಸರ್ಕಾರಿ ಸ್ವಾಮ್ಯದ ಹಣಕಾಸು ಸಂಸ್ಥೆಗಳಿಂದ ₹2.56 ಲಕ್ಷ ಕೋಟಿ ಲಾಭಾಂಶ ನಿರೀಕ್ಷಿಸಿರುವ ಕುರಿತು, 2025–26ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದ್ದರು. ಬಜೆಟ್‌ನಲ್ಲಿ ಅಂದಾಜಿಸಿದ್ದಕ್ಕಿಂತಲೂ ಹೆಚ್ಚಿನ ಮೊತ್ತದ ಲಾಭಾಂಶವನ್ನು ಆರ್‌ಬಿಐ ನೀಡುತ್ತಿದೆ.

ಸರ್ಕಾರದ ಬೊಕ್ಕಸಕ್ಕೆ ಪಾವತಿಯಾಗುತ್ತಿರುವ ಈ ದಾಖಲೆ ಮೊತ್ತದ ಲಾಭಾಂಶವು ವಿತ್ತೀಯ ಕೊರತೆಯನ್ನು ತಗ್ಗಿಸಲು ನೆರವಾಗಲಿದೆ ಎಂದು ವರದಿ ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.2ರಷ್ಟಕ್ಕೆ ನಿಗದಿಪಡಿಸಲಾಗಿದೆ. ಇದರಲ್ಲಿ ಶೇ 0.20ರಷ್ಟು ತಗ್ಗಲಿದೆ. ಅಲ್ಲದೆ, ಈ ಆರ್ಥಿಕ ವರ್ಷದಲ್ಲಿ ಸರ್ಕಾರವು ಹೆಚ್ಚುವರಿಯಾಗಿ ₹70 ಸಾವಿರ ಕೋಟಿ ವೆಚ್ಚ ಮಾಡಲು ನೆರವಾಗಲಿದೆ ಎಂದು ಹೇಳಿದೆ.

2024–25ರಲ್ಲಿ ಆರ್‌ಬಿಐ, ಸರ್ಕಾರಕ್ಕೆ ₹2.10 ಲಕ್ಷ ಕೋಟಿ ಲಾಭಾಂಶ ನೀಡಿತ್ತು.

ಲಾಭಾಂಶ ಪಾವತಿ ಮೊತ್ತವು ಏರಿಕೆಯಾಗಿರುವುದು ವಿದೇಶಿ ವಿನಿಮಯ ಮೀಸಲು ಸಂಗ್ರಹದ ಹೆಚ್ಚಳಕ್ಕೂ ನೆರವಾಗಲಿದೆ. ಆರ್‌ಬಿಐನ ಬಡ್ಡಿ ವರಮಾನವನ್ನೂ ಹೆಚ್ಚಿಸಲಿದೆ ಎಂದು ಹೇಳಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹60 ಲಕ್ಷ ಕೋಟಿಗೆ ತಲುಪಿದ್ದು, ದಾಖಲೆಯಾಗಿತ್ತು. ಆದರೆ, ಜಾಗತಿಕ ಆರ್ಥಿಕ ಅನಿಶ್ಚಿತತೆಯಿಂದಾಗಿ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ದುರ್ಬಲಗೊಂಡಿತ್ತು. ರೂಪಾಯಿ ಸ್ಥಿರತೆಗಾಗಿ ಡಾಲರ್‌ಗಳ ಮಾರಾಟಕ್ಕೆ ಆರ್‌ಬಿಐ ಮುಂದಾಗಿದ್ದರಿಂದ ಮೀಸಲು ಸಂಗ್ರಹ ಪ್ರಮಾಣ ಕಡಿಮೆಯಾಯಿತು ಎಂದು ವಿವರಿಸಿದೆ.

ಭಾರತೀಯರ ಹತ್ಯೆ ಯೋಚನೆಗೂ ಆಸ್ಪದ ನೀಡಲ್ಲ: ಶಶಿ ತರೂರ್

ನ್ಯೂಯಾರ್ಕ್ (ಪಿಟಿಐ): 'ಭಾರತದ ಗಡಿ ದಾಟಿ, ಭಾರತೀಯರನ್ನೇ ನಿರ್ಭೀತವಾಗಿ ಹತ್ಯೆ ಮಾಡುತ್ತೇನೆ ಎಂದು ಪಾಕಿಸ್ತಾನದಲ್ಲಿ ಕುಳಿತ ಯಾವೊಬ್ಬ ವ್ಯಕ್ತಿಯೂ ಇನ್ನುಮುಂದೆ ಆಲೋಚನೆ ಮಾಡಲಾಗದು. ಪ್ರತಿ ಕೃತ್ಯಕ್ಕೂ ತಕ್ಕನಾದ ಬೆಲೆ ತರಬೇಕಾಗುತ್ತದೆ. ಆ ಪರಿಣಾಮ ತೀವ್ರವಾಗಿರಲಿದೆ' ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ.

ಸರ್ವಪಕ್ಷ ನಿಯೋಗದ ನೇತೃತ್ವ ವಹಿಸಿರುವ ತರೂರ್, ನ್ಯೂಯಾರ್ಕ್‌ನಲ್ಲಿ ಭಾರತೀಯ ರಾಯಭಾರ ಕಚೇರಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ್ದಾರೆ. ಈ ವೇಳೆ ಆಪರೇಷನ್ ಸಿಂಧೂರದ ಉದ್ದೇಶ, ಭಯೋತ್ಪಾದನೆ ವಿರುದ್ಧ ಭಾರತದ ನಿಲುವುಗಳನ್ನು ಸ್ಪಷ್ಟಪಡಿಸಿ, ಮೇಲ್ಕಂಡ ಹೇಳಿಕೆ ನೀಡಿದ್ದಾರೆ.

'ನಾವು ಭಯೋತ್ಪಾದಕರಿಗೆ ಕೆಲವು ಸಂದೇಶಗಳನ್ನಷ್ಟೆ ನೀಡಿದ್ದೇವೆ. ನೀವು ಶುರು ಮಾಡಿದಿರಿ, ನಾವು ಪ್ರತ್ಯುತ್ತರ ನೀಡಿದೆವು. ನೀವು ನಿಲ್ಲಿಸಿದರೆ, ನಾವು ಕೂಡ ನಿಲ್ಲಿಸುತ್ತೇವೆ' ಎಂದೂ ತರೂರ್ ಹೇಳಿದ್ದಾರೆ.

ಏತನ್ಮಧ್ಯೆ, ಬಿಜೆಪಿ ಸಂಸದ ಬೈಜಯಂತ್ ಜಯ್ ಪಾಂಡ ನೇತೃತ್ವದ ಸರ್ವಪಕ್ಷಗಳ ನಿಯೋಗವು ಬಹರೇನ್‌ಗೆ ಭೇಟಿ ನೀಡಿದ್ದು, ಅಲ್ಲಿನ ಉಪ ಪ್ರಧಾನಿ ಶೇಖ್ ಖಲೀದ್ ಬಿನ್ ಅಬ್ದುಲ್ಲಾ ಅಲ್ ಖಲೀಫಾ ಅವರೊಂದಿಗೆ ಮಾತುಕತೆ ನಡೆಸಿದೆ. ಭಯೋತ್ಪಾದನೆ ವಿರುದ್ಧದ ಭಾರತದ ನಿಲುವನ್ನು ಸ್ಪಷ್ಟಪಡಿಸಿರುವ ನಿಯೋಗವು, ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಬಹರೇನ್‌ನ ಬೆಂಬಲಗಳಿಸುವಲ್ಲೂ ಸಫಲವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಾರತೀಯ ವಲಸಿಗರಿಗೆ ಮಾಹಿತಿ ಹಂಚಿಕೆ

ಸೋಲ್ (ಎಪಿ): ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಿದ ಭಾರತದ ಸರ್ವಪಕ್ಷಗಳ ನಿಯೋಗವು, ಇಲ್ಲಿರುವ ಅನಿವಾಸಿ ಭಾರತೀಯರ ಬಳಿ ಆಪರೇಷನ್ ಸಿಂಧೂರದ ಮಾಹಿತಿಯನ್ನು ಹಂಚಿಕೊಂಡಿತು.

'ಭಯೋತ್ಪಾದನೆಯೊಂದಿಗೆ ಸಹಬಾಳ್ವೆ ನಡೆಸಲು ಸಾಧ್ಯವಿಲ್ಲ' ಎಂದು ಜೆಡಿಯುನ ರಾಜ್ಯಸಭಾ ಸದಸ್ಯ ಸಂಜಯ್ ಕುಮಾರ್ ಝಾ ನೇತೃತ್ವದ ನಿಯೋಗ ತಿಳಿಸಿದೆ ಎಂದು ಭಾರತೀಯ ರಾಯಭಾರಿ ಕಚೇರಿಯು 'ಎಕ್ಸ್'ನಲ್ಲಿ ಉಲ್ಲೇಖಿಸಿದೆ.

ಪಹಲ್ಗಾಮ್ ದಾಳಿ: ಜಾಂಗಡಾ ಮಾತಿಗೆ ಕಾಂಗ್ರೆಸ್ ಕಿಡಿ

ಒಂದನೇ ಪುಟದಿಂದ...

ಜಾಂಗಡಾ ಅವರ 'ನಾಚಿಕೆಗೇಡಿನ ಹೇಳಿಕೆ'ಯು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ 'ಸಣ್ಣ ಮನಃಸ್ಥಿತಿಯನ್ನು ಮತ್ತೊಮ್ಮೆ ಬಹಿರಂಗಪಡಿಸಿದೆ' ಎಂದು ಖರ್ಗೆ ಆರೋಪಿಸಿದ್ದಾರೆ.

'ಮಧ್ಯಪ್ರದೇಶ ಉಪ ಮುಖ್ಯಮಂತ್ರಿ ಜಗದೀಶ್ ದೇವ್ಡಾ ಅವರು ನಮ್ಮ ಧೈರ್ಯಶಾಲಿ ಸೇನೆಯನ್ನು ಅವಮಾನಿಸಿದರು. ಆದರೆ, ಪ್ರಧಾನಿ ಮೋದಿ ಅವರು ಕ್ರಮ ಕೈಗೊಳ್ಳಲಿಲ್ಲ. ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರು ನಮ್ಮ ಧೈರ್ಯಶಾಲಿ ಕರ್ನಲ್ ಬಗ್ಗೆ ಅಸಭ್ಯವಾಗಿ ಮಾತನಾಡಿದರು. ಆ ಸಚಿವರನ್ನು ಈವರೆಗೆ ಪದಚ್ಯುತಿಗೊಳಿಸಿಲ್ಲ' ಎಂದು ಹೇಳಿದ್ದಾರೆ.

'ನರೇಂದ್ರ ಮೋದಿ ಅವರೇ, ನಿಮ್ಮ ನರನಾಡಿಗಳಲ್ಲಿ ಸಿಂಧೂರ ಇದೆ ಎಂದು ನೀವು ಹೇಳಿಕೊಳ್ಳುತ್ತೀರಿ... ಹಾಗಿದ್ದರೆ, ನೀವು ಮಹಿಳೆಯರಿಗೆ ಗೌರವ ನೀಡಿ, ಹೊಲಸು ಬಾಯಿಯ ಈ ಮುಖಂಡರನ್ನು ಪದಚ್ಯುತಗೊಳಿಸಬೇಕು' ಎಂದು ಖರ್ಗೆ ಒತ್ತಾಯಿಸಿದ್ದಾರೆ.

ತಮ್ಮ ಮಾತಿನ ಬಗ್ಗೆ ಸ್ಪಷ್ಟನೆ ನೀಡಿರುವ ಜಾಂಗಡಾ, 'ಪ್ರೇರಣೆ ನೀಡಬೇಕು ಎಂಬ ಉದ್ದೇಶದಿಂದ' ಹಾಗೆ ಮಾತನಾಡಿದ್ದುದಾಗಿ ತಿಳಿಸಿದ್ದಾರೆ.

ಜಾಂಗಡಾ ಹೇಳಿದ್ದೇನು?

ಒಂದನೇ ಪುಟದಿಂದ...

'ಪತಿಯರನ್ನು ಕಳೆದುಕೊಂಡ ಮಹಿಳೆಯರಲ್ಲಿ ಹುಮ್ಮಸ್ಸು ಇರಲಿಲ್ಲ, ವೀರಾಂಗನೆಯ ಭಾವ ಇರಲಿಲ್ಲ. ಹೀಗಾಗಿ ಅವರು ದಾಳಿಗೆ ಒಳಗಾದರು' ಎಂದು ಜಾಂಗಡಾ ಹೇಳಿದ್ದರು. 'ಬೇಡಿಕೊಂಡ ಮಾತ್ರಕ್ಕೆ ಭಯೋತ್ಪಾದಕರು ಅವರನ್ನು ಬಿಟ್ಟುಬಿಡುವುದಿಲ್ಲ. ನಮ್ಮ ಜನ ಕೈಮುಗಿದು ನಿಂತು, ಮೃತಪಟ್ಟರು' ಎಂದೂ ಅವರು ಹೇಳಿದ್ದರು.

ಪ್ರತಿಯೊಬ್ಬ ಪ್ರವಾಸಿಗನಿಗೂ ಅಗ್ನಿವೀರರಿಗೆ ನೀಡುವ ತರಬೇತಿ ಒದಗಿಸಿದ್ದರೆ, ಅವರು ಭಯೋತ್ಪಾದಕರನ್ನು ಸುತ್ತುವರಿಯಬಹುದಿತ್ತು. ಆಗ ಸಾವಿನ ಸಂಖ್ಯೆ ಕಡಿಮೆಯಾಗುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದರು.

'ಮೂರನೇ ರಾಷ್ಟ್ರದಲ್ಲಿ ಮಾತುಕತೆ ನಡೆಯಲಿ'

ಲಂಡನ್ (ಪಿಟಿಐ): ಈಚೆಗಿನ ಮಿಲಿಟರಿ ಸಂಘರ್ಷದ ಬಳಿಕ ಹದಗೆಟ್ಟಿರುವ ಭಾರತ–ಪಾಕಿಸ್ತಾನ ನಡುವಿನ ಸಂಬಂಧ ಯಥಾಸ್ಥಿತಿಗೆ ಬರಬೇಕಾದರೆ ಉಭಯ ದೇಶಗಳ ಪ್ರತಿನಿಧಿಗಳು ಮೂರನೇ ರಾಷ್ಟ್ರವೊಂದರಲ್ಲಿ ಅನೌಪಚಾರಿಕ ಮಾತುಕತೆ ಆರಂಭಿಸುವುದು ಅಗತ್ಯ ಎಂದು ಬ್ರಿಟನ್‌ನ ಯುದ್ಧತಂತ್ರ ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಲಂಡನ್ ಮೂಲದ ಚಿಂತಕರ ಚಾವಡಿ 'ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಟ್ರಾಟಜಿಕ್ ಸ್ಟಡೀಸ್ (ಐಐಎಸ್‌ಎಸ್), ಕಳೆದ ವಾರ 'ಭಾರತ-ಪಾಕಿಸ್ತಾನ ಮಿಲಿಟರಿ ಸಂಘರ್ಷ ಮತ್ತು ಪ್ರಾದೇಶಿಕ ಸ್ಥಿರತೆ ಹಾಗೂ ಭದ್ರತೆಯ ನಿರೀಕ್ಷೆಗಳು' ಎಂಬ ವಿಷಯದಲ್ಲಿ ನಡೆಸಿದ ಅಧಿವೇಶನದಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ.

'ಭಾರತ ಮತ್ತು ಪಾಕಿಸ್ತಾನ ನಡುವಿನ 100 ಗಂಟೆಗಳ ಮಿಲಿಟರಿ ಸಂಘರ್ಷದ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ಮತ್ತು ವಿವಾದಾತ್ಮಕ ಸಂಕಥನಗಳು ಕೇಳಿಬಂದಿವೆ' ಎಂದು ಐಐಎಸ್‌ಎಸ್‌ನ ಹಿರಿಯ ಸದಸ್ಯ ಮತ್ತು ದಕ್ಷಿಣ ಮತ್ತು ಮಧ್ಯ ಏಷ್ಯಾ ಕಾರ್ಯಕ್ರಮದ ಮುಖ್ಯಸ್ಥ ರಾಹುಲ್ ರಾಯ್ ಚೌಧರಿ ಹೇಳಿದ್ದಾರೆ.

'ತನ್ನ ವಿರುದ್ಧದ ಎಲ್ಲ ರೀತಿಯ ಭಯೋತ್ಪಾದಕ ದಾಳಿಗಳು ಕೊನೆಗೊಳ್ಳುವವರೆಗೂ ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸದಿರಲು ಮತ್ತು ವ್ಯಾಪಾರ ಸಂಬಂಧ ಮರುಸ್ಥಾಪಿಸದಿರಲು ಭಾರತ ನಿರ್ಧರಿಸಿದೆ' ಎಂದಿದ್ದಾರೆ.

'ಅದೇ ರೀತಿ, ಪಾಕಿಸ್ತಾನದೊಂದಿಗೆ ಭವಿಷ್ಯದಲ್ಲಿ ಯಾವುದೇ ಮಾತುಕತೆ ನಡೆಸುವುದಾದರೆ ಅದು ಭಯೋತ್ಪಾದನೆ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ವಿಷಯದ ಬಗ್ಗೆ ಮಾತ್ರ ಎಂದು ಭಾರತ ಹೇಳಿದೆ' ಎಂಬುದನ್ನೂ ಅವರು ಒತ್ತಿಹೇಳಿದ್ದಾರೆ.

ಭಾರತಕ್ಕೆ ಚೀನಾ 'ಪ್ರಮುಖ ಶತ್ರು': ಡಿಐಎ ವರದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನದ ಜತೆಗೆ ಈಚೆಗಿನ ಮಿಲಿಟರಿ ಸಂಘರ್ಷದ ಹೊರತಾಗಿಯೂ ಭಾರತವು ಚೀನಾವನ್ನು ತನ್ನ 'ಪ್ರಮುಖ ಶತ್ರು'ವಾಗಿ ಪರಿಗಣಿಸಿದೆ ಎಂದು ಅಮೆರಿಕದ ರಕ್ಷಣಾ ಗುಪ್ತಚರ ಸಂಸ್ಥೆಯ (ಡಿಫೆನ್ಸ್ ಇಂಟೆಲಿಜೆನ್ಸ್ ಏಜೆನ್ಸಿ–ಡಿಐಎ) ಈಚೆಗಿನ ವರದಿ ತಿಳಿಸಿದೆ.

'ಭಾರತ ಮತ್ತು ಪಾಕಿಸ್ತಾನದ ಸೇನೆಗಳು ಮೇ ಮಧ್ಯದಲ್ಲಿ ಗಡಿಯಾಚೆಗಿನ ದಾಳಿಗಳನ್ನು ನಡೆಸಿವೆಯಾದರೂ ಭಾರತವು ಚೀನಾವನ್ನು ಪ್ರಮುಖ ಶತ್ರುವಾಗಿ ಪರಿಗಣಿಸುತ್ತದೆ. ಪಾಕಿಸ್ತಾನವನ್ನು ತನ್ನ ಭದ್ರತೆಗೆ ಸಣ್ಣಮಟ್ಟಿನ ಸಮಸ್ಯೆ ಒಡ್ಡಬಲ್ಲ ರಾಷ್ಟ್ರವಾಗಿ ಪರಿಗಣಿಸುತ್ತದೆ' ಎಂದು ವರದಿ ಹೇಳಿದೆ.

'ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ಆದ್ಯತೆಗಳು ಜಾಗತಿಕ ನಾಯಕತ್ವವನ್ನು ಪ್ರದರ್ಶಿಸುವುದು, ಚೀನಾವನ್ನು ಎದುರಿಸುವುದು ಮತ್ತು ಭಾರತದ ಸೇನೆಯ ಬಲವನ್ನು ಹೆಚ್ಚಿಸುವುದರ ಮೇಲೆ ಕೇಂದ್ರೀಕರಿಸಿವೆ' ಎಂಬ ಅಂಶ ವರದಿಯಲ್ಲಿದೆ.

ಚೀನಾದ ಪ್ರಭಾವವನ್ನು ಸಮರ್ಥವಾಗಿ ಎದುರಿಸಲು ಮತ್ತು ತನ್ನ 'ಜಾಗತಿಕ ನಾಯಕತ್ವ'ದ ಪಾತ್ರವನ್ನು ಹೆಚ್ಚಿಸಲು ಭಾರತವು ಹಿಂದೂ ಮಹಾಸಾಗರ ಪ್ರದೇಶದಲ್ಲಿ ದ್ವಿಪಕ್ಷೀಯ ರಕ್ಷಣಾ ಪಾಲುದಾರಿಕೆಗೆ ಆದ್ಯತೆ ನೀಡುತ್ತಿದೆ ಎಂದು ತಿಳಿಸಿದೆ.

'ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿ ನಿಯೋಜಿಸಿದ್ದ ಸೇನೆಯನ್ನು ಎರಡೂ ದೇಶಗಳು ಕಳೆದ ವರ್ಷ ಹಿಂದಕ್ಕೆ ಪಡೆದುಕೊಂಡಿದ್ದು ಗಡಿ ಗುರುತು ನಿಗದಿಪಡಿಸುವ ಬಗ್ಗೆ ಭಾರತ–ಚೀನಾ ನಡುವೆ ದೀರ್ಘಕಾಲದಿಂದ ಇರುವ ವಿವಾದವನ್ನು ಬಗೆಹರಿಸಲಿಲ್ಲ. 2020ರಲ್ಲಿ ನಡೆದ ಘರ್ಷಣೆಯ ಬಳಿಕ ಉಂಟಾಗಿದ್ದ ಉದ್ವಿಗ್ನತೆಯನ್ನು ಮಾತ್ರ ಕಡಿಮೆ ಮಾಡಿದೆ' ಎಂದಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ. 14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಲೇಡಿಸ್ ಬ್ಯೂಟಿ ಪಾರ್ಲರ್ ನಲ್ಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದರೆ. ತಿಂಗಳಿಗೆ ವೇತನ 25000/- Full ಟೈಮ್ & Part ಟೈಮ್ ಶೇಷಾದ್ರಿಪುರಂ ಬೆಂಗಳೂರು, ಸಂಪರ್ಕಿಸಿ: 7349494852

ಹೆಲ್ಪರ್ ಬೇಕಾಗಿದ್ದಾರೆ. ಪೀಣ್ಯ ಬಣ್ಣದ ಕಾರ್ಖಾನೆಗೆ. ಸಂಬಳ 18000, ESI ಇದೆ. OT ಇರುವುದಿಲ್ಲ, ಊಟ ಇರುವುದಿಲ್ಲ, ಕೊಠಡಿ ಇರುವುದಿಲ್ಲ. 9844017838

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

Hosur Road

WANTED VGP Plots & VHF Farm land inHosur Tamil Nadu. You have any property for sale in Hosur Contact: 9365816356

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 10.06.2025 13ದಿನಗಳು ಆದಿಕೈಲಾಸ ಓಂಪರ್ವತ ನೈನಿತಾಲ್,ಅಲ್ಮೋರಾ,ಇತರೆ. 10.06.2025 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಅಯೋಧ್ಯೆ 24.06.2025 7ದಿನಗಳು ಕಾಶಿ ಅಯೋಧ್ಯೆ,ಪ್ರಯಾಗ್,ಗಯಾ ದೇವಘರ್.13.07.2025 25.07.2025 10ದಿನಗಳು ಅಖಂಡ ಆಂದ್ರತೆಲಂಗಾಣ ರಾಜ್ಯದ ವಿಜಯವಾಡ,ಮಂಗಳಗಿರಿ ಪಂಚರಾಮಕ್ಷೇತ್ರಗಳು ವಾಸವಿಪೆನುಗೊಂಡ,ಅನ್ನಾವರಂ ವಿಶಾಖಪಟ್ಟಣ,ಶ್ರೀಕೂರ್ಮಂ ಅರಕು,ಭದ್ರಾಚಲಂ,ವಾರಂಗಲ್ ಸ್ವರ್ಣಗಿರಿ,ರಾಮಾನುಜಾಚಾರ್ಯ 26.06.2025,15.07.2025 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ (ಅಮರಕಂಟಕ ಮಯ್ಯಾರ್ ಸಹಿತ).8073824856 9206979202 9606032154

★ಶ್ರೇಯಸ್ ಟೂರ್ಸ್★ ವಿ.ವಿ ಪುರಂ:ಜೂನ್ 22,28 ಜುಲೈ 05,22,28 ಹಾಗೂ ಆಗಸ್ಟ್, ಸೆಪ್ಟಂಬರ್ ತಿಂಗಳಿನಲ್ಲಿ ಮಾನಸಸರೋವರ ಯಾತ್ರೆ ಮೌಂಟ್‌ಕೈಲಾಸ,ಕಠ್ಮಂಡು ಮುಕ್ತಿನಾಥ. 01.06.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ,ಪಾರೋ,ಪುನಕಾ ಪೂಚಲಿಂಗ್.8073824856 9206979202 9606032154

ಭಾರತಪರಂಪರ ದರ್ಶನ: 9.6.2025 7 ದಿನಗಳು ಅಯೋಧ್ಯ ಕಾಶಿಯಾತ್ರೆ ವಿಮಾನದಲ್ಲಿ. 18.6.2025 ಚಾರ್ ಧಾಮ್ 13 ದಿನಗಳು ವಿಮಾನದಲ್ಲಿ. ಪ್ರಕಾಶ್ ಹೆಬ್ಬಾರ್: 9448792891.

★07.06.2025,08.09.2025 ★ 13ದಿನಗಳು ಚಾರ್‌ದಾಮ್. 23.06.2025,17.07.2025 7 ದಿನಗಳು ಕಾಶಿ ಯಾತ್ರಾ. 30.06.2025 9ದಿನಗಳು (ರಾತ್ರಿ ಕಾಶಿಯಲ್ಲಿ ತಂಗುವುದು)ಮತ್ತು ಮೃತ್ಯುಂಜಯ ಹೋಮ ಮಾಡಲಾಗುತ್ತದೆ.ಆರ್.ಗಾಂಧಿ ಟೂರ್ಸ್:9845445809 8861545809

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಬಿಜೆಪಿಯ 18 ಶಾಸಕರ ಅಮಾನತು ರದ್ದು

ಒಂದನೇ ಪುಟದಿಂದ..

ಅಮಾನತಿಗೆ ಕಾರಣವೇನು?: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು 'ಮಧುಬಲೆ'ಗೆ (ಹನಿ ಟ್ರ್ಯಾಪ್) ಸಿಲುಕಿಸಲು ಯತ್ನಿಸಲಾಗಿದೆ ಎಂಬ ಆರೋಪದ ಕುರಿತು ತನಿಖೆಗೆ ಆಗ್ರಹಿಸಿ ವಿಧಾನಸಭೆಯಲ್ಲಿ ಗದ್ದಲ ನಡೆಸಿ, ಸಭಾಧ್ಯಕ್ಷರ ಪೀಠದವರೆಗೂ ನುಗ್ಗಿ ಹೋಗಿ, ಅವರ ಮುಖದ ಮೇಲೆ ಕಾಗದದ ಚೂರುಗಳನ್ನು ಎಸೆದ ಕಾರಣಕ್ಕೆ 18 ಶಾಸಕರನ್ನು ಅಮಾನತು ಮಾಡಲಾಗಿತ್ತು.

ಬಜೆಟ್ ಅಧಿವೇಶನದ ಕೊನೆಯ ದಿನ ನಡೆದ ಗದ್ದಲದ ಪರಿಸ್ಥಿತಿ ನಿಯಂತ್ರಣಕ್ಕೆ ಬಾರದ ಕಾರಣ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, '18 ಶಾಸಕರು ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತರುವ ರೀತಿಯಲ್ಲಿ ನಡೆದುಕೊಂಡಿದ್ದಾರೆ' ಎಂದು ಪ್ರಕಟಿಸಿದ್ದರು. ಅಲ್ಲದೆ, ಸಭಾಧ್ಯಕ್ಷರು ಹೆಸರಿಸಿರುವ ಶಾಸಕರನ್ನು ಆರು ತಿಂಗಳು ಸದನದಿಂದ ಅಮಾನತುಗೊಳಿಸುವಂತೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ನಿರ್ಣಯ ಮಂಡಿಸಿದ್ದರು. ಅದನ್ನು ಧ್ವನಿಮತಕ್ಕೆ ಹಾಕಿದ್ದ ಸಭಾಧ್ಯಕ್ಷರು, ನಿರ್ಣಯ ಅಂಗೀಕಾರವಾಗುತ್ತಿದ್ದಂತೆಯೇ '18 ಶಾಸಕರನ್ನು ಆರು ತಿಂಗಳಿಗೆ ಸದನದಿಂದ ಅಮಾನತು ಮಾಡಲಾಗಿದೆ' ಎಂದು ರೂಲಿಂಗ್ ನೀಡಿದ್ದರು.

ಶಾಸಕರ ಅಮಾನತು ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿ ಬಿಜೆಪಿ ಬೀದಿಗಿಳಿದು ಪ್ರತಿಭಟನೆ ನಡೆಸಿತ್ತು. ಅಮಾನತು ವಾಪಸಿಗೆ ವಿಧಾನಸಭಾಧ್ಯಕ್ಷರಿಗೆ ಸೂಚನೆ ನೀಡಬೇಕು ಮತ್ತು ಈ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಆರ್.ಅಶೋಕ ನೇತೃತ್ವದ ಶಾಸಕರ ನಿಯೋಗ ಮನವಿ ಸಲ್ಲಿಸಿತ್ತು.

ಮನವಿಗೆ ಸ್ಪಂದಿಸಿದ್ದ ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಕಾನೂನು ಸಚಿವರಿಗೆ ಪತ್ರ ಬರೆದು, 'ಶಾಸಕರ ಮನವಿಯನ್ನು ಸಕಾರಾತ್ಮಕವಾಗಿ ಪರಿಗಣಿಸಿ, 18 ಶಾಸಕರ ಅಮಾನತು ಹಿಂಪಡೆಯಬೇಕು. ಪ್ರಜಾಸತ್ತಾತ್ಮಕ ಮೌಲ್ಯಕ್ಕೆ ಅನುಗುಣವಾಗಿ ಜನಪ್ರತಿನಿಧಿಗಳಾದ ಶಾಸಕರು ಪ್ರತಿದಿನ ಸಾರ್ವಜನಿಕರ ಕೆಲಸಗಳನ್ನು ಮಾಡಬೇಕಾಗಿದೆ. ಅದಕ್ಕೆ ಅವಕಾಶ ಮಾಡಿಕೊಡಬೇಕು' ಎಂದು ಸೂಚನೆ ನೀಡಿದ್ದರು.

ರಷ್ಯಾದಲ್ಲಿ ಭದ್ರತಾ ಸಭೆ ಡೊಭಾಲ್ ಭಾಗಿ?

ಮಾಸ್ಕೊ(ಪಿಟಿಐ): ರಷ್ಯಾದ ಭದ್ರತಾ ಮಂಡಳಿಯು ಇಲ್ಲಿ ಮೇ 27ರಿಂದ 29ರವರೆಗೆ ಆಯೋಜಿಸಿರುವ 13ನೇ ಅಂತರರಾಷ್ಟ್ರೀಯ ಭದ್ರತಾ ಸಭೆಯಲ್ಲಿ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಭಾಗವಹಿಸುವ ನಿರೀಕ್ಷೆ ಇದೆ.

ರಷ್ಯಾದ ಭದ್ರತಾ ಮಂಡಳಿಯ ಕಾರ್ಯದರ್ಶಿ ಸೆರ್ಗೆಯ್ ಶೋಯಿಗು ಅವರ ಅಧ್ಯಕ್ಷತೆಯಲ್ಲಿ ಭದ್ರತಾ ವಿಷಯಗಳ ಕುರಿತು ನಡೆಯಲಿರುವ ಉನ್ನತ ಪ್ರತಿನಿಧಿಗಳ ಸಭೆಯಲ್ಲಿ ಪಾಲ್ಗೊಳ್ಳಲು ಡೊಭಾಲ್ ಅವರಿಗೆ ಆಹ್ವಾನ ನೀಡಲಾಗಿದೆ. ಪಾಕಿಸ್ತಾನದ ಭದ್ರತಾ ಸಲಹೆಗಾರ ಲೆಫ್ಟಿನೆಂಟ್ ಜನರಲ್ ಅಸೀಮ್ ಮಲ್ಲಿಕ್ ಕೂಡ ಪಾಲ್ಗೊಳ್ಳಲಿದ್ದಾರೆ.

ಭಾರತ, ಪಾಕಿಸ್ತಾನ, ಚೀನಾ ಸೇರಿದಂತೆ ವಿಶ್ವದ ದಕ್ಷಿಣ ಮತ್ತು ಪೂರ್ವದ 150 ದೇಶಗಳು ಹಾಗೂ 20 ಅಂತರರಾಷ್ಟ್ರೀಯ ಸಂಸ್ಥೆಗಳ ನಾಯಕರಿಗೆ ಈ ಸಭೆಯಲ್ಲಿ ಭಾಗವಹಿಸಲು ಆಹ್ವಾನ ನೀಡಲಾಗಿದೆ ಎಂದು ರಷ್ಯಾದ ಭದ್ರತಾ ಮಂಡಳಿ ಹೇಳಿಕೆಯಲ್ಲಿ ತಿಳಿಸಿದೆ.

'ಆಪರೇಷನ್ ಸಿಂಧೂರ'ದನಂತರ ಭಾರತಮತ್ತುಪಾಕಿಸ್ತಾನದ ಭದ್ರತಾ ಸಲಹೆಗಾರರು ಮುಖಾಮುಖಿ ಭೇಟಿಯಾಗುವ ನಿರೀಕ್ಷೆ ಇದ್ದು, ಉಭಯತ್ರರ ನಡುವೆ ನೇರ ಮಾತುಕತೆಗೆ ರಷ್ಯಾ ವ್ಯವಸ್ಥೆ ಕಲ್ಪಿಸಲಿದೆ ಎಂದು 'ಕೊಮ್ಮರ್‌ಸ್ಯಾಂಟ್' ಪತ್ರಿಕೆಯ ಅಂಕಣಕಾರ ಸೆರ್ಗಿ ಸ್ಟ್ರೋಕನ್ ಸುದ್ದಿಸಂಸ್ಥೆಗೆ ತಿಳಿಸಿರುವುದಾಗಿ ವರದಿಯಾಗಿದೆ.

ಉಭಯ ದೇಶಗಳಿಂದ ಒಟ್ಟು 2,000 ಕೈದಿಗಳ ಬಿಡುಗಡೆ

ರಷ್ಯಾ– ಉಕ್ರೇನ್: 303 ಕೈದಿಗಳ ವಿನಿಮಯ

ಕೀವ್ (ಎಪಿ): ಉಕ್ರೇನ್ ಮೇಲೆ ರಷ್ಯಾ ಭಾನುವಾರ ಭೀಕರ ದಾಳಿ ನಡೆಸಿದ ಕೆಲವೇ ಗಂಟೆಗಳಲ್ಲಿ ಉಭಯ ದೇಶಗಳು ನೂರಾರು ಕೈದಿಗಳನ್ನು ವಿನಿಮಯ ಮಾಡಿಕೊಂಡಿವೆ.

ಭಾನುವಾರ 303, ಶನಿವಾರ 307 ಮತ್ತು ಶುಕ್ರವಾರ 390 ಮಂದಿಯನ್ನು ಎರಡು ದೇಶಗಳು ಬಿಡುಗಡೆಗೊಳಿಸಿವೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

ಮೇ 16ರಂದು ಇಸ್ತಾನ್‌ಬುಲ್‌ನಲ್ಲಿ ನಡೆದ ಮಾತುಕತೆಯಲ್ಲಿ, 2,000 ಕೈದಿಗಳ ಕೊನೆಯ ಹಂತದ ವಿನಿಮಯಕ್ಕೆ ನಿರ್ಧರಿಸಲಾಗಿತ್ತು ಎಂದು ರಷ್ಯಾ ತಿಳಿಸಿದೆ. ಕೈದಿಗಳ ವಿನಿಮಯ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ರಷ್ಯಾದ ವೈಮಾನಿಕ ದಾಳಿಯಿಂದಾಗಿ ಉಕ್ರೇನ್‌ನ ಕೀವ್ ಪ್ರದೇಶದಲ್ಲಿ ಹಲವು ಮನೆಗಳು ಸುಟ್ಟುಕರಕಲಾಗಿವೆ ಎಎಫ್‌ಪಿ ಚಿತ್ರ

ರಷ್ಯಾದಿಂದ ದಾಳಿ 12 ಮಂದಿ ಸಾವು

ರಷ್ಯಾದ ದಾಳಿಯಿಂದಾಗಿ ಉಕ್ರೇನ್‌ನಲ್ಲಿ 12 ಮಂದಿ ಮೃತಪಟ್ಟಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ.

ರಷ್ಯಾವು 367 ಡ್ರೋನ್ ಮತ್ತು ಕ್ಷಿಪಣಿಗಳ ಮೂಲಕ ದಾಳಿ ಮಾಡಿದ್ದು, ಮೂರು ವರ್ಷಗಳಲ್ಲಿ ನಡೆದ ಅತಿ ದೊಡ್ಡ ವೈಮಾನಿಕ ದಾಳಿ ಇದಾಗಿದೆ ಎಂದು ಉಕ್ರೇನ್ ವಾಯುಪಡೆಯ ವಕ್ತಾರರು ತಿಳಿಸಿದ್ದಾರೆ. ಉಕ್ರೇನ್‌ನ 30ಕ್ಕೂ ಹೆಚ್ಚು ನಗರ, ಗ್ರಾಮಗಳ ಮೇಲೆ ರಷ್ಯಾ ದಾಳಿ ನಡೆಸಿದೆ.

'ಜಾವಾ'ದಲ್ಲಿ ರಾಗಿಣಿ ಫಸ್ಟ್‌ಲುಕ್

'ಜಾವಾ' ಚಿತ್ರದಲ್ಲಿ ರಾಜವರ್ಧನ್‌ಗೆ ನಾಯಕಿಯಾಗಿ ರಾಗಿಣಿ ದ್ವಿವೇದಿ ನಟಿಸುತ್ತಿರುವುದು ಗೊತ್ತೇ ಇದೆ. ಇತ್ತೀಚೆಗಷ್ಟೇ ಚಿತ್ರದಲ್ಲಿ ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆಗೊಳಿಸಿದೆ.

45ರಲ್ಲಿ ಶಿವಣ್ಣ, ರಾಜ್ ಉಪೇಂದ್ರ ಶಿವಸ್ಮರಣೆ

'ನಾಗರಾಜ ಶಿವಪುಟ್ಟಸ್ವಾಮಿ ಎಂದೂ ನನ್ನನ್ನು ಕರೆಯುತ್ತಾರೆ. ನನ್ನಲ್ಲಿಯೂ ಶಿವನಿದ್ದಾನೆ.' ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್, ಉಪೇಂದ್ರ, ರಾಜ್ ಬಿ. ಶೆಟ್ಟಿ ಅಭಿನಯದ '45' ಚಿತ್ರತಂಡ ಶಿವಸ್ಮರಣೆ ಮಾಡಿದೆ. ಚಿತ್ರದ ಮೊದಲ ಹಾಡು 'ಶಿವಂ ಶಿವಂ ಸನಾತನಂ' ಗೀತೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಚಿತ್ರವಿದು. ಈ ಹಾಡಿನಲ್ಲಿ ಶಿವನ ರೌದ್ರಾವತಾರ ದರ್ಶನ ಮಾಡಿಸಲಾಗಿದೆ.

'ಮೊದಲ ಚಿತ್ರದಿಂದಲೇ ಅರ್ಜುನ್ ಜನ್ಯ ಭಾರತದ ಒಳ್ಳೆಯ ನಿರ್ದೇಶಕ ಎನಿಸಿಕೊಳ್ಳುತ್ತಾರೆ ಎಂಬ ಭರವಸೆಯಿದೆ. ಸಿನಿಮಾಗೆ ಪೂರಕವಾಗಿ ಭಾವನೆ ತರುವ ಹಾಡಿದು. ನಾಗೇಂದ್ರ ಪ್ರಸಾದ್ ಅದ್ಭುತವಾದ ಸಾಹಿತ್ಯ ರಚಿಸಿದ್ದಾರೆ. ಅವರು ಸರಸ್ವತಿ ಪುತ್ರರು. ನನ್ನ ಬದುಕಿನಲ್ಲಿ ಬೆಸೆದುಕೊಂಡ ಸಾಕಷ್ಟು ಅಂಶಗಳು ಈ ಸಿನಿಮಾದಲ್ಲಿವೆ. ಈ ಸಿನಿಮಾ ಭಾರತದಲ್ಲಿ ಟ್ರೆಂಡ್ ಆಗಬೇಕು ಅನ್ನುವ ಆಸೆ. ಗ್ರಾಫಿಕ್ ಸೂಪರ್ ಆಗಿದೆ. ಸಿನಿಮಾದಲ್ಲಿ ಸಾಕಷ್ಟು ವಿಷಯಗಳಿವೆ. ಸಿನಿಮಾ ಯಾವಾಗ ನೋಡುತ್ತೇನೆ ಎಂಬ ಆಸೆ ಶುರುವಾಗಿದೆ. ಕಳೆದ ವರ್ಷ ಕನ್ನಡದಲ್ಲಿ ಪೂರ್ತಿ ಡಬ್ ಮಾಡಿದ್ದೆ. ಈಗ ತಮಿಳಿನಲ್ಲಿ ಡಬ್ ಮಾಡುತ್ತಿದ್ದೇನೆ. ಎಲ್ಲ ಭಾಷೆಗಳಲ್ಲಿಯೂ ಪ್ರಯತ್ನ ಮಾಡುತ್ತೇನೆ. ನನ್ನ ಧ್ವನಿ ಎಲ್ಲ ಭಾಷೆಯಲ್ಲಿಯೂ ತಲುಪಲಿ ಎಂಬ ಆಸೆ' ಎಂದರು ಶಿವಣ್ಣ.

'ನಾನು ತುಂಬಾ ಒಳ್ಳೆಯವನು ಎನ್ನಲ್ಲ. ನನಗೆ ಪ್ರೀತಿ ಕೊಟ್ಟರೆ ತಿರುಗಿ ಪ್ರೀತಿ ಕೊಡುತ್ತೇನೆ. ಇಲ್ಲವಾದರೆ ಅವರ ಹಣೆಬರಹ, ಶಿವ ಎಂದು ಹೊರಟುಬಿಡುತ್ತೇನೆ. ಚಿತ್ರದ ನಿರ್ಮಾಪಕ ರಮೇಶ್ ರೆಡ್ಡಿ ಪ್ರೀತಿ ತೋರಿಸಿ, ನಮ್ಮ ಪ್ರೀತಿ ಗಳಿಸಿಕೊಂಡವರು. ಅವರು ಒಂದು ರೀತಿ ಕುಟುಂಬದ ಸದಸ್ಯ. ನಾಗರಾಜ ಶಿವಪುಟ್ಟಸ್ವಾಮಿ ಎಂದು ನನ್ನನ್ನು ಕರೆಯುತ್ತಾರೆ. ನನ್ನಲ್ಲಿಯೂ ಶಿವನಿದ್ದಾನೆ. ಈ ಹಿಂದೆ ಶಿವನ ಕುರಿತಾದ ಸಾಕಷ್ಟು ಹಾಡುಗಳಲ್ಲಿ ನಟಿಸಿರುವೆ. ಭಕ್ತಿ ಎಂದಿಗೂ ನಮ್ಮನ್ನು ಎತ್ತಿಕೊಂಡು ಹೋಗುತ್ತದೆ. ಈ ಹಾಡು ಕೂಡ ಅದೇ ರೀತಿ ಇದೆ. ಸಿನಿಮಾದಲ್ಲಿ ಹಾಡಿನ ಕನೆಕ್ಷನ್ ಗೊತ್ತಾಗುತ್ತದೆ' ಎಂದರು.

ಗೀತೆಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ವಿಜಯ್ ಪ್ರಕಾಶ್ ಹಾಡಿದ್ದಾರೆ. ಸೂರಜ್ ಪ್ರೊಡಕ್ಷನ್ ಲಾಂಛನದಲ್ಲಿ ರಮೇಶ್ ರೆಡ್ಡಿ ಬಂಡವಾಳ ಹೂಡಿದ್ದಾರೆ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣವಿದೆ.

'ಈ ಹಾಡು ಹಾಗೂ ಚಿತ್ರ ಇಷ್ಟು ಚೆನ್ನಾಗಿ ಮೂಡಿಬರಲು ನಿರ್ಮಾಪಕ ರಮೇಶ್ ರೆಡ್ಡಿ ಪ್ರಮುಖ ಕಾರಣ. ಇನ್ನೂ, ನಾನು ನಿರ್ದೇಶನ ಮಾಡಲು ಪ್ರೇರಣೆ ನೀಡಿದವರು ಶಿವರಾಜ್‌ಕುಮಾರ್. ಸದ್ಯದಲ್ಲೇ ನಮ್ಮ ಚಿತ್ರತಂಡದಿಂದ ಅಭಿಮಾನಿಗಳಿಗೆ ಮತ್ತೊಂದು ಸರ್ಪ್ರೈಸ್ ಇದೆ. ಆಗಸ್ಟ್‌ನಲ್ಲಿ ಚಿತ್ರ ತೆರೆಗೆ ಬರಲಿದ್ದು, ಪೋಸ್ಟ್‌ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ನಡೆಯುತ್ತಿವೆ' ಎಂದರು ಅರ್ಜುನ್ ಜನ್ಯ.

ಈ ಗೀತೆಯಲ್ಲಿ ಶಿವನ ರೌದ್ರಾವತಾರವನ್ನು ಗ್ರಾಫಿಕ್ಸ್‌ನಲ್ಲಿ ಕಟ್ಟಿಕೊಡಲಾಗಿದೆ. ದುಷ್ಟಶಕ್ತಿಗಳ ವಿರುದ್ಧ ಪರಮೇಶ್ವರನ ಹೋರಾಟದ ಸನ್ನಿವೇಶದ ಗೀತೆಯಿದು ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಸೆಟ್ಟೇರಿದ ಸೆಪ್ಟೆಂಬರ್ 21

ಪ್ರಿಯಾಂಕಾ ಉಪೇಂದ್ರ

ಅಲ್ಜೈಮರ್ಸ್ ರೋಗದ ಕುರಿತಾದ ಕಥೆ ಹೊಂದಿರುವ 'ಸೆಪ್ಟೆಂಬರ್ 21' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಬಾಲಿವುಡ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಮುಖ್ಯ ಪಾತ್ರದಲ್ಲಿದ್ದಾರೆ. ಕರೆನ್ ಕ್ಷಿತಿ ಸುವರ್ಣ ನಿರ್ದೇಶನವಿದೆ.

'ನಾನು ಈ ಹಿಂದೆ 'ಹ್ಲೈಡ್ ಅಂಡ್ ಸೀಕ್' ಎಂಬ ಕಿರುಚಿತ್ರವನ್ನು ನಿರ್ದೇಶಿಸಿದ್ದೆ. ಪೂರ್ಣಪ್ರಮಾಣದ ನಿರ್ದೇಶಕಿಯಾಗಿ ಮೊದಲ ಚಿತ್ರ. ಅಲ್ಜೈಮರ್ಸ್ ರೋಗಿ ಮತ್ತು ಆತನ ಆರೈಕೆ ಮಾಡುವ ನರ್ಸ್ ಒಬ್ಬಳ ನಡುವಿನ ಕಥೆಯನ್ನು ಹೊಂದಿರುವ ಚಿತ್ರವಿದು. ಈ ಕಥೆಯನ್ನು ಪಿ.ರಾಜೀವನ್ ಅವರು ಮಲಯಾಳದಲ್ಲಿ ಬರೆದಿದ್ದಾರೆ. ಹಿಂದಿ ಸೇರಿ ಹಲವು ಭಾಷೆಗಳಲ್ಲಿ ಚಿತ್ರ ಸಿದ್ಧಗೊಳ್ಳಲಿದೆ. ಸದ್ಯದಲ್ಲೇ ಬೆಂಗಳೂರಿನಲ್ಲಿ ಚಿತ್ರೀಕರಣ ಆರಂಭವಾಗಲಿದೆ' ಎಂದರು ಕ್ಷಿತಿ.

ಪ್ರವೀಣ್ ಕುಮಾರ್ ಸಿಂಗ್ ಸಿಸೋಡಿಯಾ, ಜರೀನಾ ವಹಾಬ್ ಮುಂತಾದವರು ಚಿತ್ರದಲ್ಲಿದ್ದಾರೆ. ರಿಲಯನ್ಸ್ ಎಂಟರ್‌ಟೈನ್‌ಮೆಂಟ್‌ನ ಅಮಿತ್ ಅವಸ್ಥಿ ಮತ್ತು ಫಾಕ್ಸ್ ಆನ್ ಸ್ಟೇಜ್‌ನ ಪ್ರದೀಪ್ ಡಿ ಪ್ರೊಸ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

'ಇದೇ ಮೊದಲ ಬಾರಿಗೆ ಕಿರಿಯ ವಯಸ್ಸಿನ ನಿರ್ದೇಶಕಿಯ ಜತೆ ಕೆಲಸ ಮಾಡುತ್ತಿದ್ದೇನೆ. ಅಲ್ಜೈಮರ್ಸ್ ರೋಗದಿಂದ ಬಳಲುತ್ತಿರುವ ರೋಗಿಯನ್ನು ಶುಶ್ರೂಷೆ ಮಾಡುವ ಕೇರ್ ಟೇಕರ್ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಕಮಲಾ ನನ್ನ ಪಾತ್ರದ ಹೆಸರು. ನನ್ನ ತಂದೆ ಉತ್ತರ ಪ್ರದೇಶದವರು. ಹಾಗಾಗಿ ನನಗೆ ಹಿಂದಿ ಮಾತನಾಡಲು ಹಾಗೂ ಓದಲು ಬರುತ್ತದೆ' ಎಂದರು ಪ್ರಿಯಾಂಕಾ. ವಿನಯ್ ಚಂದ್ರ ಸಂಗೀತ, ಅನಿಲ್ ಕುಮಾರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಪ್ರಭಾಸ್‌ಗೆ ಜೋಡಿಯಾದ ತೃಪ್ತಿ ಡಿಮ್ರಿ

ಪ್ರಭಾಸ್ ನಟಿಸಿ, ಸಂದೀಪ್ ರೆಡ್ಡಿ ವಂಗ ನಿರ್ದೇಶಿಸುತ್ತಿರುವ 'ಸ್ಪಿರಿಟ್' ಚಿತ್ರ ನಾಯಕಿ ವಿಚಾರವು ಇತ್ತೀಚೆಗೆ ಸುದ್ದಿಯಲ್ಲಿತ್ತು. ಈ ಮೊದಲು ದೀಪಿಕಾ ಪಡುಕೋಣೆ ಚಿತ್ರದ ನಾಯಕಿ ಎನ್ನಲಾಗುತ್ತು. ಕಾರಣಾಂತರಗಳಿಂದ ಅವರು ಚಿತ್ರತಂಡದಿಂದ ಹೊರನಡೆದಿದ್ದು ಸುದ್ದಿಯಾಗಿತ್ತು. 'ಅನಿಮಲ್' ಚಿತ್ರದಲ್ಲಿ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದ ತೃಪ್ತಿ ಡಿಮ್ರಿ ಚಿತ್ರದ ನಾಯಕಿಯಾಗಿ ಆಯ್ಕೆಯಾಗಿದ್ದಾರೆ ಎಂದು ಚಿತ್ರತಂಡ ಅಧಿಕೃತವಾಗಿ ಘೋಷಿಸಿದೆ.

ಸಂದೀಪ್ ರೆಡ್ಡಿ ವಂಗ 'ಅನಿಮಲ್' ಚಿತ್ರ ನಿರ್ದೇಶಿಸಿದ್ದರು. ಹೀಗಾಗಿ ಆ ತಂಡದ ನಟಿಗೆ ಮತ್ತೆ ಅವಕಾಶ ನೀಡಿದ್ದಾರೆ. ಕನ್ನಡದ ನಟ ರುಕ್ಮಿಣಿ ವಸಂತ್ ಈ ಚಿತ್ರದ ನಾಯಕಿಯಾಗಲಿದ್ದಾರೆ ಎಂಬ ಸುದ್ದಿಯೂ ಹರಿದಾಡಿತ್ತು. 'ಇದೀಗ ಎಲ್ಲ ಊಹಾಪೋಹಗಳಿಗೂ ತೆರೆ ಬಿದ್ದಿದ್ದು, ತೃಪ್ತಿ ಡಿಮ್ರಿ ಚಿತ್ರದಲ್ಲಿ ಪ್ರಭಾಸ್‌ಗೆ ಜೋಡಿಯಾಗಲಿದ್ದಾರೆ. ತೃಪ್ತಿ ಡಿಮ್ರಿ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ಮಾಹಿತಿ ಹಂಚಿಕೊಂಡಿದ್ದಾರೆ.

'ಅರ್ಜುನ್ ರೆಡ್ಡಿ', 'ಕಬೀರ್ ಸಿಂಗ್' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿರುವ ವಂಗ ಅವರ ಈ ಸಿನಿಮಾ ಹಲವಾರು ಕಾರಣಗಳಿಂದ ನಿರೀಕ್ಷೆ ಹೆಚ್ಚಿಸಿದೆ. ತೆಲುಗು, ಕನ್ನಡ, ಹಿಂದಿ, ಮಲಯಾಳ, ತಮಿಳು ಸೇರಿದಂತೆ ಹಲವು ಭಾಷೆಗಳಲ್ಲಿ 'ಸ್ಪಿರಿಟ್' ಸಿನಿಮಾ ಸಿದ್ಧಗೊಳ್ಳಲಿದೆ.

ಸಂಭಾವನೆ ಹಾಗೂ ಚಿತ್ರೀಕರಣಕ್ಕೆ ಸಂಬಂಧಿಸಿದ ಕೆಲ ಷರತ್ತುಗಳಿಂದ ಚಿತ್ರತಂಡ ದೀಪಿಕಾ ಅವರನ್ನು ಕೈಬಿಟ್ಟಿದೆ ಎಂದು ಹಿಂದಿ ಮಾಧ್ಯಮಗಳು ವರದಿ ಮಾಡಿವೆ. ಭೂಷಣ್ ಕುಮಾರ್ ಹಾಗೂ ಪ್ರಣಯ್ ರೆಡ್ಡಿ ವಂಗ ನಿರ್ಮಾಣದ ಈ ಚಿತ್ರ ಪ್ರೀಪ್ರೊಡಕ್ಷನ್ ಹಂತದಲ್ಲಿದ್ದು ಈ ವರ್ಷವೇ ಸೆಟ್ಟೇರಲಿದೆ.

ತೆರೆಗೆ ಬರಲು ಸಜ್ಜಾದ 'ತಾಯವ್ವ'

ಶ್ರೀನಾಥ್ ಅವರೊಂದಿಗೆ ಗೀತಪ್ರಿಯಾ

ಗ್ರಾಮೀಣ ಸೊಗಡಿನ ಸಾಮಾಜಿಕ ಕಥಾಹಂದರ ಹೊಂದಿರುವ 'ತಾಯವ್ವ' ಚಿತ್ರ ತನ್ನೆಲ್ಲ ಕೆಲಸಗಳನ್ನು ಮುಗಿಸಿ ತೆರೆಗೆ ಬರಲು ಸಜ್ಜಾಗಿದೆ. ಗೀತಪ್ರಿಯಾ ನಟಿಸಿ, ನಿರ್ಮಿಸಿರುವ ಈ ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ನಿರ್ದೇಶನವಿದೆ.

ನಟ ಸುದೀಪ್ ಮೊದಲ ಬಾರಿಗೆ ಮುಖ್ಯಭೂಮಿಕೆಯಲ್ಲಿ ಅಭಿನಯಿಸಿ, ನಟ ಉಮಾಶ್ರೀ 'ತಾಯವ್ವ'ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಚಿತ್ರ ಎರಡು ದಶಕಗಳ ಹಿಂದೆ ತೆರೆ ಕಂಡಿತ್ತು. ಅದೇ ಶೀರ್ಷಿಕೆಯ ಚಿತ್ರ ಈಗ ಮತ್ತೆ ಸಿದ್ಧವಾಗಿದ್ದು, ಸುದೀಪ್ ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದ್ದರು.

'ಗ್ರಾಮೀಣ ಪ್ರದೇಶದ ಸೂಲಗಿತ್ತಿ ಮಹಿಳೆಯ ಬದುಕು ಮತ್ತು ಆಕೆಯ ಸಾಮಾಜಿಕ ಕಳಕಳಿಯನ್ನು ತೆರೆಗೆ ತರುವ ಪ್ರಯತ್ನ ಮಾಡಲಾಗಿದೆ. ಸೂಲಗಿತ್ತಿ ನರಸಮ್ಮ ಅವರ ಬದುಕು ಮತ್ತು ಸಾಧನೆ ಈ ಸಿನಿಮಾ ಮಾಡಲು ಪ್ರೇರಣೆ. ಈ ಸಿನಿಮಾದ ಹೆಸರು 'ತಾಯವ್ವ' ಎಂದಿದ್ದರೂ, ಈ ಸಿನಿಮಾಕ್ಕೂ ದಶಕಗಳ ಹಿಂದೆ ಬಂದಿದ್ದ ಸಿನಿಮಾಕ್ಕೂ ಯಾವುದೇ ಸಂಬಂಧವಿಲ್ಲ. ಈ ಸಿನಿಮಾದ ಕಥೆಗೆ ಹೊಂದಾಣಿಕೆಯಾಗುತ್ತದೆ ಮತ್ತು ಸಾಮಾಜಿಕ ಸಂದೇಶವಿದೆ ಎಂಬ ಕಾರಣಕ್ಕೆ ಈ ಶೀರ್ಷಿಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಮುಂದಿನ ತಿಂಗಳು ಚಿತ್ರ ತೆರೆಗೆ ಬರಲಿದೆ' ಎನ್ನುತ್ತಾರೆ ನಿರ್ಮಾಪಕಿ ಗೀತಪ್ರಿಯಾ.

ನಟ ಉಮಾಶ್ರೀ ಚಿತ್ರದ ಟೈಟಲ್ ಪೋಸ್ಟರ್ ಬಿಡುಗಡೆ ಮಾಡಿದರೆ, ಶ್ರೀನಾಥ್ ಟ್ರೇಲರ್ ಬಿಡುಗಡೆ ಮಾಡಿ ತಂಡದ ಜತೆ ನಿಂತಿದ್ದರು. ತಾಯವ್ವನಾಗಿ ಸೂಲಗಿತ್ತಿ ಪಾತ್ರದಲ್ಲಿ ಗೀತಪ್ರಿಯಾ ಅಭಿನಯಿಸಿದ್ದಾರೆ. ಚಿತ್ರಕ್ಕೆ ಅನಂತ ಆರ್ಯನ್ ಸಂಗೀತವಿದೆ.

ತೈಲ ತುಂಬಿದ್ದ 640 ಕಂಟೇನರ್‌ಗಳು ಸಮುದ್ರ ಪಾಲು

ಹಡಗು ಮುಳುಗಡೆ: ಕೇರಳದಲ್ಲಿ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ತೈಲ ತುಂಬಿದ 640 ಕಂಟೇನರ್‌ಗಳನ್ನು ಹೊಂದಿದ್ದ ಲೈಬೀರಿಯಾದ ಸರಕು ಸಾಗಣೆ ಹಡಗು ಕೇರಳದ ಕರಾವಳಿಯಲ್ಲಿ ಮುಳುಗಡೆಯಾಗಿದೆ. ಹೀಗಾಗಿ ಕೇರಳದ ಕರಾವಳಿ ಪ್ರದೇಶಗಳಲ್ಲಿ ಅಲ್ಲಿನ ಸರ್ಕಾರ ಕಟ್ಟೆಚ್ಚರ ಘೋಷಿಸಿದೆ.

ಆಳಪ್ಪುಳದಿಂದ 14.6 ನಾಟಿಕಲ್ ಮೈಲಿ ದೂರದಲ್ಲಿ ಹಡಗು ಮುಳುಗಡೆಯಾಗಿದೆ. 'ಮರೈನ್ ಗ್ಯಾಸ್ ಆಯಿಲ್' (ಎಂಜಿಒ) ಹಾಗೂ 'ವೆರಿ ಲೋ ಸಲ್ಫರ್ ಫ್ಯುಯೆಲ್ ಆಯಿಲ್' ತುಂಬಿದ್ದ ಕಂಟೈನರ್‌ಗಳೂ ಹಡಗಿನಲ್ಲಿರುವುದು ಆತಂಕ ಹೆಚ್ಚಿಸಿದೆ.

ಕಂಟೇನರ್‌ಗಳನ್ನು ನಾಶಪಡಿಸಲು ಭಾರತೀಯ ಕರಾವಳಿ ಭದ್ರತಾ ಪಡೆಗಳು ಪ್ರಯತ್ನಿಸುತ್ತಿವೆ. ಆದಾಗ್ಯೂ, ಕಂಟೇನರ್‌ಗಳು ತಿರುವನಂತಪುರ, ಕೊಲ್ಲಂ, ಆಳಪ್ಪುಳ ಹಾಗೂ ಕೊಚ್ಚಿ ಕರಾವಳಿ ಪ್ರದೇಶಗಳತ್ತ ತೇಲಿ ಬರುವ ಸಾಧ್ಯತೆಗಳಿರುವ ಹಿನ್ನೆಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

ಲೈಬೀರಿಯಾ ಹಡಗಿನಲ್ಲಿದ್ದ ಸಿಬ್ಬಂದಿಯನ್ನು ಭಾರತೀಯ ಕರಾವಳಿ ಕಾವಲು ಪಡೆ ರಕ್ಷಿಸಿತು

ಕಂಟೇನರ್ ಕಂಡುಬಂದರೆ, ಕರಾವಳಿ ಪ್ರದೇಶಗಳಲ್ಲಿನ ಜನರು ಅದರ ಸಮೀಪಕ್ಕೆ ತೆರಳದಂತೆ, 200 ಮೀಟರ್ ಅಂತರ ಕಾಯ್ದುಕೊಳ್ಳುವಂತೆ ಸೂಚಿಸಲಾಗಿದೆ.

ಗೃಹ ಸಚಿವಾಲಯಕ್ಕೆ ತೆರಳಲಿದೆ 'ಮೈತೇಯಿ'

ಇಂಫಾಲ್ (ಪಿಟಿಐ): 'ಸರ್ಕಾರಿ ಬಸ್‌ನಲ್ಲಿ ರಾಜ್ಯದ ಹೆಸರು ತೆಗೆದುಹಾಕಿದ ಕ್ರಮ ಖಂಡಿಸಿ, ಮಣಿಪುರದ ಮೈತೇಯಿ ಸಮುದಾಯಗಳ ಸಮಗ್ರ ಸಮನ್ವಯ ಸಮಿತಿಯು (ಕೊಕೊಮಿ) ಕೇಂದ್ರ ಗೃಹಸಚಿವಾಲಯದ ಅಧಿಕಾರಿಗಳನ್ನು ಮಂಗಳವಾರ ಭೇಟಿಯಾಗಿ, ರಾಜ್ಯದ ಈಗಿನ ಸ್ಥಿತಿಗತಿ ಕುರಿತಂತೆ ಚರ್ಚಿಸಲಿದೆ' ಎಂದು ಸಂಚಾಲಕ ಖುರೈಜಮ್ ಥೌಬಾ ತಿಳಿಸಿದ್ದಾರೆ.

'ಘಟನೆ ಕುರಿತಂತೆ ರಾಜ್ಯಪಾಲ ಅಜಯ್‌ಕುಮಾರ್ ಭಲ್ಲಾ ಅವರು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು. ಮುಖ್ಯಕಾರ್ಯದರ್ಶಿ, ಡಿಜಿಪಿ, ರಕ್ಷಣಾ ಸಲಹೆಗಾರರನ್ನು ತಕ್ಷಣದಿಂದ ಕಿತ್ತುಹಾಕಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಗುವುದು' ಎಂದು ತಿಳಿಸಿದ್ದಾರೆ. 'ಕೇಂದ್ರ ಸರ್ಕಾರವು ಮಾತುಕತೆಗಾಗಿ ಮಂಗಳವಾರ ದಿನಾಂಕ ನಿಗದಿಪಡಿಸಿ ಕೊಕೊಮಿ ಸಂಘಟನೆಯನ್ನು ಆಹ್ವಾನಿಸಿದೆ. ಈ ವೇಳೆ ನಮ್ಮ ಬೇಡಿಕೆ ಮಂಡಿಸಲಾಗುವುದು' ಎಂದು ತಿಳಿಸಿದರು.

ಏನಾಗಿತ್ತು?: ಇಲ್ಲಿನ ಖುರುಲ್ ಜಿಲ್ಲೆಯಲ್ಲಿ ಮೇ 20ರಂದು ಏರ್ಪಡಿಸಿದ್ದ ಪ್ರವಾಸಿ ಉತ್ಸವ ಶಿರೂಯಿ ಲೈಲಿ ಹಬ್ಬಕ್ಕೆ ಪತ್ರಕರ್ತರು ಮತ್ತು ಪೊಲೀಸರನ್ನು ಬಸ್‌ನಲ್ಲಿ ಕರೆದೊಯ್ಯಲಾಗುತ್ತಿತ್ತು. ಭದ್ರತಾ ಪಡೆಗಳು ಬಸ್ ತಡೆದು, ಸಾರ್ವಜನಿಕ ಮಾಹಿತಿ ಇಲಾಖೆ (ಡಿಐಪಿಆರ್) ಸಿಬ್ಬಂದಿಗೆ ತಾಕೀತು ಮಾಡಿದರು. ಮಣಿಪುರ ಎಂಬ ನಾಮಫಲಕವನ್ನು ಬಿಳಿಯ ಕಾಗದದಿಂದ ಬಲವಂತವಾಗಿ ಮುಚ್ಚಿಸಿದ್ದರು ಎಂದು ಆರೋಪಿಸಲಾಗಿದೆ. 'ಹೆಸರು ತೆಗೆಸಿದ್ದು ಮಣಿಪುರ ವಿರೋಧಿ ಕ್ರಮ, ನಮ್ಮ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹೆಗ್ಗುರುತಿಗೆ ಒಡ್ಡಿದ ಸವಾಲು' ಎಂದು ಕೊಕೊಮಿ ಆರೋಪಿಸಿದೆ.

ಸಂಕ್ಷಿಪ್ತ ಸುದ್ದಿ

'ದೇಶವನ್ನು ಶಕ್ತಿಯುತವಾಗಿಸಿ'

ನವದೆಹಲಿ (ಪಿಟಿಐ): ಹಿಂದೂ ಸಮಾಜ ಒಗ್ಗಟ್ಟಾಗಿರಬೇಕು ಮತ್ತು ಬಹುಶಕ್ತಿಗಳು ಒಟ್ಟಾಗಿ ಬಂದರೂ ವಶಪಡಿಸಿಕೊಳ್ಳಲು ಸಾಧ್ಯವಾಗದಷ್ಟು ಭಾರತದ ಸೇನೆ ಮತ್ತು ಆರ್ಥಿಕತೆಯನ್ನು ಶಕ್ತಿಯುತವಾಗಿಸಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಕರೆ ನೀಡಿದ್ದಾರೆ.



ಮೋಹನ್ ಭಾಗವತ್

ಭಾರತವು ತನ್ನ ಎಲ್ಲ ಗಡಿಗಳಲ್ಲಿ ದುಷ್ಟರ ಚಟುವಟಿಕೆಗಳಿಗೆ ಸಾಕ್ಷಿಯಾಗಿರುವುದರಿಂದ ನಾವು ಶಕ್ತಿಯುತರಾಗುವುದು ಅನಿವಾರ್ಯವಾಗಿದೆ ಎಂದು ಸಂದರ್ಶನವೊಂದರಲ್ಲಿ ಭಾಗವತ್ ಅವರು ತಿಳಿಸಿದ್ದಾರೆ. ಈ ಸಂದರ್ಶನವು 'ಆರ್ಗನೈಸರ್' ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

'ಭಾರತವು ರಾಷ್ಟ್ರೀಯ ಭದ್ರತೆಗಾಗಿ ಬೇರೆಯವರನ್ನು ಅವಲಂಬಿಸುವಂತಾಗಬಾರದು. ಸದ್ಗುಣಗಳಿಂದ ಮಾತ್ರ ವ್ಯಕ್ತಿಯು ಸುರಕ್ಷಿತನಾಗಿರಲು ಸಾಧ್ಯವಿಲ್ಲ. ಆದ್ದರಿಂದ ಸದ್ಗುಣಗಳನ್ನು ಶಕ್ತಿಯೊಂದಿಗೆ ಸಂಯೋಜಿಸಬೇಕು. ವಿವೇಚನಾರಹಿತ ಬಲಪ್ರಯೋಗವು ಘೋರ ಹಿಂಸೆಗೆ ಕಾರಣವಾಗುತ್ತದೆ. ಬಲಪ್ರಯೋಗ ಮಾಡುವುದಿದ್ದರೆ ಅದಕ್ಕೆ ಸದುದ್ದೇಶ ಇರಬೇಕು' ಎಂದು ಭಾಗವತ್ ಹೇಳಿದ್ದಾರೆ.

'ದುಸ್ಸಾಹಸಕ್ಕಿಳಿದರೆ ಪಾಕ್ ನಾಶ'

ಜಮ್ಮು (ಪಿಟಿಐ): ಭವಿಷ್ಯದಲ್ಲಿ ಯಾವುದೇ ದುಸ್ಸಾಹಸಕ್ಕೆ ಕೈಹಾಕಿದರೆ 'ಭಯೋತ್ಪಾದಕ ದೇಶ'ವನ್ನು ಭಾರತೀಯ ಶಸ್ತ್ರ ಪಡೆಗಳು ನಾಶಪಡಿಸುವುದು ಖಚಿತವೆಂದು ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಡಲಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಭಾನುವಾರ ಹೇಳಿದ್ದಾರೆ.



ಮನೋಜ್ ಸಿನ್ಹಾ

ಇಲ್ಲಿ ನಡೆದ ಅಖಿಲ ಜಮ್ಮು-ಕಾಶ್ಮೀರ ಜಾಟ್ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಜಮ್ಮು ಮತ್ತು ಕಾಶ್ಮೀರವನ್ನು ಭಯೋತ್ಪಾದನೆಯಿಂದ ಸಂಪೂರ್ಣ ಮುಕ್ತಗೊಳಿಸುವ ಸರ್ಕಾರದ ಸಂಕಲ್ಪವನ್ನು ಪುನರುಚ್ಚರಿಸಿದರು. ಅಲ್ಲದೆ, ಸಶಸ್ತ್ರ ಪಡೆಗಳ ಶೌರ್ಯವನ್ನು ಶ್ಲಾಘಿಸಿದರು.

'ಭಯೋತ್ಪಾದಕರು ಮತ್ತು ಅವರ ಬೆಂಬಲಿಗರು ಬೇರೆ ಬೇರೆಯಲ್ಲ. ಅವರ ಕೃತ್ಯಗಳಿಗೆ ಒಂದೇ ರೀತಿಯ ಶಿಕ್ಷೆ ಕಟ್ಟಿಟ್ಟಬುತ್ತಿ' ಎಂದು ಎಚ್ಚರಿಕೆ ನೀಡಿದರು.

ದೇಶದಲ್ಲಿ ಶಾಂತಿ ಮತ್ತು ಸಹಬಾಳ್ವೆಗೆ ಧಕ್ಕೆ ತರುತ್ತಿರುವ ವಿಭಜಕ ಶಕ್ತಿಗಳ ವಿರುದ್ಧ ಹೋರಾಡಲು ದೃಢಸಂಕಲ್ಪ ಮಾಡುವಂತೆ ಮತ್ತು ಒಗ್ಗಟ್ಟಾಗಲು ಜಾಟ್ ಸಮುದಾಯವು ಸೇರಿ ಸಮಾಜದ ಎಲ್ಲಾ ವರ್ಗಗಳಿಗೆ ಅವರು ಮನವಿ ಮಾಡಿದರು.

ಉತ್ತರ ಪ್ರದೇಶ: ಚಿರತೆ ದಾಳಿಯಿಂದ ಮಹಿಳೆ ಸಾವು

ಬಹರಾಯಿಚ್ (ಪಿಟಿಐ): ಉತ್ತರ ಪ್ರದೇಶದ ಕತರ್‌ನಿಯಾಘಾಟ್ ಅಭಯಾರಣ್ಯ ವ್ಯಾಪ್ತಿಯಲ್ಲಿನ ಗ್ರಾಮವೊಂದರ ಮಹಿಳೆಯೊಬ್ಬರು ಚಿರತೆ ದಾಳಿಯಿಂದಾಗಿ ಮೃತಪಟ್ಟಿದ್ದಾರೆ.

ಬಹರಾಯಿಚ್ ಜಿಲ್ಲೆಯ ಅಯೋಧ್ಯಾಪೂರ್ವ ಗ್ರಾಮದ ನಿವಾಸಿ ಝುಹಿರ(48) ಅವರು ಶನಿವಾರ ರಾತ್ರಿ ತಮ್ಮ ಮನೆಯ ಚಾವಣಿ ಮೇಲೆ ಮಲಗಿದ್ದರು. ಈ ವೇಳೆ ಚಿರತೆ ದಾಳಿ ಮಾಡಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. 'ಚಿರತೆ ದಾಳಿಯಿಂದಾಗಿ ಝುಹಿರ ಅವರು ಚಾವಣಿಯಿಂದ ಕೆಳಗೆ ಬಿದ್ದಿದ್ದರು. ಅವರ ಜೊತೆಗೆ ಮಲಗಿದ್ದ ಇಬ್ಬರು ಮಕ್ಕಳು ಕಿರುಚಾಡಿ ಗಲಾಟೆ ಮಾಡಿದ್ದರಿಂದ ಚಿರತೆ ಓಡಿಹೋಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಜಾತಿ ಜನಗಣತಿ: ಸಾಮಾಜಿಕ ನ್ಯಾಯಕ್ಕೆ ಬಲ'

ನವದೆಹಲಿ (ಪಿಟಿಐ): ಜಾತಿ ಜನಗಣತಿಯು ಸಮಾಜದಲ್ಲಿ ಬಿರುಕು ಹೆಚ್ಚಿಸಲಿದೆ ಎನ್ನುವ ದೂಷಣೆಗಳು ಕೇಳಿಬರುತ್ತಿರುವ ಹೊತ್ತಿನಲ್ಲೇ ಪ್ರತಿಕ್ರಿಯಿಸಿರುವ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ (ಎನ್‌ಸಿಎಸ್‌ಸಿ) ಅಧ್ಯಕ್ಷ ಕಿಶೋರ್ ಮಕವಾನ ಅವರು, 'ಜಾತಿ ಗಣತಿಯು ಸಾಮಾಜಿಕ ನ್ಯಾಯವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ' ಎಂದಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ, 'ಗಣತಿ ವೇಳೆ ಸಂಗ್ರಹಿಸುವ ದತ್ತಾಂಶವು ನೀತಿ ನಿರೂಪಣೆ ಮತ್ತು ಸಾಮಾಜಿಕ ನ್ಯಾಯವನ್ನು ಬಲಪಡಿಸುವ ಅಡಿಪಾಯವಾಗಲಿದೆ. ಅವಕಾಶ ವಂಚಿತ ಹಿಂದುಳಿದ ಜಾತಿ ಸಮುದಾಯಗಳನ್ನು ಮೇಲೆತ್ತಲು ಸಹಕಾರಿಯಾಗಲಿದೆ' ಎಂದು ಹೇಳಿದರು.

ಮುಂದಿನ ಜನಗಣತಿ ವೇಳೆ ಜಾತಿ ಸಮೀಕ್ಷೆ ನಡೆಸುವ ಎನ್‌ಡಿಎ ಸರ್ಕಾರದ ನಿರ್ಧಾರ ಸ್ವಾಗತಿಸಿದ ಮಕವಾನ, 'ನಿಖರ ಅಂಕಿ–ಅಂಶಗಳು ಸಿಕ್ಕಲ್ಲಿ ವಂಚಿತ ಸಮುದಾಯಗಳಿಗೆ ಸರ್ಕಾರದ ಮುದ್ರಾ ಯೋಜನೆ ಸೇರಿ ಹಲವು ಕಲ್ಯಾಣ ಕಾರ್ಯಕ್ರಮಗಳ ಪ್ರಮಾಣಬದ್ಧ ಪಾಲು ಸಿಗಲಿದೆ' ಎಂದರು.

ಬುಡಕಟ್ಟು ಮಹಿಳೆ ಮೇಲೆ ಅತ್ಯಾಚಾರ

ಖಾಂಡವಾ (ಮಧ್ಯಪ್ರದೇಶ) (ಪಿಟಿಐ): ಬುಡಕಟ್ಟು ಸಮುದಾಯದ 45 ವರ್ಷ ವಯಸ್ಸಿನ ಮಹಿಳೆಯೊಬ್ಬರ ಮೇಲೆ ಇಬ್ಬರು ಶನಿವಾರ ಅತ್ಯಾಚಾರ ಎಸಗಿದ್ದು, ಗಂಭೀರ ಸ್ವರೂಪದಲ್ಲಿ ಗಾಯಗೊಂಡಿರುವ ಮಹಿಳೆ ಮೃತಪಟ್ಟಿದ್ದಾರೆ.

ಸಾಮೂಹಿಕ ಅತ್ಯಾಚಾರ ಆರೋಪದಡಿ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ರೋಶ್ನಿ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಮಹಿಳೆ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ್ದು, ರಕ್ತಸ್ರಾವದಿಂದ ಮೃತಪಟ್ಟಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ರಾಜೇಶ್ ರಘುವಂಶಿ ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿ ಬಳಿಕ ವಿವರ ಸಿಗಲಿದೆ. ಪೊಲೀಸರ ಪ್ರಕಾರ, ಮಹಿಳೆ ಮತ್ತು ಆರೋಪಿ ಶುಕ್ರವಾರ ಮದುವೆಗೆ ಹಾಜರಾಗಿದ್ದರು. ಸಂತ್ರಸ್ತೆಯನ್ನು ಕುಟುಂಬಸ್ಥರು ಆರೋಪಿಯ ಮನೆಯಿಂದ ಕರೆತಂದಿದ್ದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2025-26 NOTICE FOR PRIVATE SALE OF GOLD 23/05/2025

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-06-2025 as shown below:

Br. Arsikere: Near LIC Office, B H Road, Arsikere,Hassan, Karnataka- 573 103 Ph No. 08174230125 :-
20306400044415,20306400043698,20306400054034,20306400046170,20306400055767,20306400055205,20306400057136,20306400049463.
Br. Bangalore/St Marks Road: No. 9, Halcyon Complex, St. Marks Road, Bangalore, Karnataka- 560 001, Ph No. 080-32994454 :-
11046100116623,11046100116490,11046100119353,11046100119361,11046400014486,11046100119858.
Br. Bangalore/Gandhi Nagar: P B No. 9981, No. 24, 2Nd Cross, Gandhi Nagar, Bangalore, Karnataka- 560 009, Ph No. 080-22385208 :-
11896400040448,11896400033021,11896400040653.
Br. Bangalore/Rajaji Nagar : No. 60/60, Raj Chambers, Dr. Rajkumar Road, 2nd Block, Rajaji Nagar, Bangalore-560 010, Ph No. 080-23522007:-
13346400251676,13346400279131,13346400279149,13346400284743,13346400274959,13346900014806,13346400277010,13346400257566,13346400271146,13346100683350,13346400273696,13346400256055,13346400181279,13346400270718,13346400251445,13346400278315,13346400239838,13346400274363,13346400275501,13346400270312,13346400249910,13346400273852,13346400277887,13346400277234,13346400275105,13346400250660,13346400275758,13346400251395,13346400276335,13346400274967,13346400274611,13346400256725,13346400275535,13346400280808,13346400282010,13346400251296,13346400279743,13346400275931,13346400232056,13346400282275,13346400268951,13346100685843,13346400275428,13346400259265,13346400287522,13346400273654,13346400276897,13346400275436,13346400279834,13346400281194,13346100682246,13346500015906,13346400275451,13346400270460,13346400270478,13346500015989,13346400279800,13346400283182,13346400285799,13346400256501,13346100679788,13346400285823,13346400285872,13346400285807,13346400285815,13346400248250,13346100675372,13346400282242,13346400279800,13346400269645,13346400274959,13346100681461,13346400274603,13346100682246,13346100678301,13346400266450,13346400283323,13346400283331,13346400286581,13346100681255,13346400252351,13346400252369,13346400264901,13346400282671,13346400268779,13346400284826,13346400285500,13346400280964,13346400267441,13346400268639,13346400286086,13346400285518,13346400286375,13346400286383,13346400286607,13346400285047,13346400253771,13346900013568,13346400246494,13346400286367,13346900013378,13346400286623,13346900013873,13346400270429,13346400286607,13346400283034,13346400275741,13346100680737,13346400279305,13346400284727,13346400260255,13346400268274,13346400268266,13346400288942,13346400274850,13346400264802,13346400271823,13346400241412,13346400261386,13346400211423,13346400282929,13346400245686,13346400283240,13346400286045,13346900013691,13346400289619,13346400289627,13346900013683,13346900014160,13346900014442,13346400277697,13346900013493,13346400289312,13346400270783,13346400270775.
Br. Bangalore/R T Nagar : No.20, 1st Main Road, 108 'B' Bus Station, Ganga Nagar, R T Nagar P O, Bangalore- 560 032, Ph no. 080-23434258 :-
14726100219272,14726400057125,14726400079731,14726100219389,14726400060848,14726400079749,14726100219587,14726400060871,14726400079756,14726100219967,14726400076653,14726400082537,14726100220478,14726400077628,14726400082636,14726100220494,14726400078204,14726400083808,14726100222664,14726400078840,14726400083816,14726100222672,14726400079251,14726500015601,14726400044123,14726400079269,14726900001318,14726400057117,14726400079335. **Br. Bangalore/Indiranagar: 315/1, 100 Feet Road, Indiranagar, Bangalore-560 038, Ph No. 080-25212341 :-**
15356100092534,15356900001644,15356400061353,15356100092427,15356400050042,15356400058565,15356400061346,15356100092401,15356400048699,15356400053012,15356400061338,15356400043633,15356400048160,15356400058284,15356400062377,15356400053400,15356400060058,15356400058300,15356400062427,15356100091478,15356100092187,15356400060280,15356400057526,15356400062260,15356400048772,15356400057104,15356400052758,15356100092443,15356400060819,15356400061320,15356100092195,15356100092492.
Br. Bangalore/Banaswadi: No 13, Banaswadi Main Road, Bangalore, Karnataka- 560 043 Ph No. 080-25420700 :-
14716400031097,14716100312714,14716500003483,14716100308787,14716400032855,14716100304976,14716400037136,14716100302459,14716400035486,14716400035528,14716400036757,14716500003517,14716100304018,14716400033531,14716400034133,14716400034158,14716400035874,14716400035874,14716400038993,14716400039884,14716900003596,14716900004495,14716100307383,14716100303721,14716100304315,14716400037326,14716400037334,14716400038779,14716100310692,14716400033242,14716100313498,14716400021429,14716400038860,14716400038886,14716400039728,14716400039736,14716100314835,14716900003505,14716400036377,14716400036385,14716100312326,14716100307391,14716100308639,14716100301626,14716100307441,14716400034208,14716400034232,14716400034257,14716100306294,14716100301980,14716100303226,14716900002473,14716100313241,14716400039694,14716400039702,14716400039710,14716400039744,14716400039819,14716100308803,14716100308845,14716100308852,14716100308860,14716100308878,14716100309603,14716100314173,14716400037029,14716500003830.
Br.Bangalore/Krishnarajapuram: Vsr Complex, Old Madras Road, Krishnarajapuram, Bangalore Urban, Karnataka- 560 036 Ph No. 080-25619070 :-
15616100182241,15616100192414,15616400021172,15616100188099,15616100192687,15616400021313,15616100188230,15616100192984,15616400021594,15616100190897,15616100194519,15616400021834,15616100190905,15616400017303,15616400021842,15616100190913,15616400020026,15616400022105,15616100191945,15616400021164,15616400022535,15616400022758,15616400024820,15616400026734,15616400023079,15616400024879,15616400026742,15616400023939,15616400025058,15616400027161,15616400024085,15616400025181,15616400024291,15616400025553,15616400024325,15616400025561,15616400024416,15616400025603.
Br. Bangalore/Jalahalli: 17/1, Savithri, S M Road, Jalahalli West, Bangalore, Karnataka-560 015, Ph no. 080-28372201:-
15826400136595,15826400135696,15826400138096,15826400142544,15826100601815,15826400129723,15826400137098,15826100602029,15826100630327,15826400142288,15826100602060,15826100630392,15826100641027,15826100602078,15826400127941,15826400130200,15826100602102,15826400141678,15826400138567,15826100602110,15826400141686,15826100638668,15826100642199,15826400139797,15826400140324,15826100595876,15826100640193,15826400140530,15826100620492,15826400132792,15826100565267,15826100631499,15826100644310,15826100638098,15826400136488,15826100647172,15826400124690,15826100647172,15826100644310,15826400124708,15826100638122,15826500013322,15826100640367,15826400138427,15826400133782,15826400133535,15826100606822,15826400138864,15826100620427,15826100623116,15826900002875,15826400141561,15826400138179,15826900003758,15826400135100,15826400140704,15826100629360,15826500013371,15826400138245,15826100645531,15826100631093,15826400134301,15826100646687,15826100635110,15826400138252,15826100626432,15826400131729,15826400138260,15826100637280,15826400132818,15826400142502,15826100634576,15826900001208,15826400137155,15826100643833,15826400135167,15826100645176,15826100635052,15826400137924,15826400136355,15826400138393,15826400142346,15826900004095,15826400138401,15826500013389,15826100636829,15826400138419,15826500014742,15826100604900,15826400136918,15826100606384,15826400137999,15826100624239,15826400142403,15826100639443,15826400142411.15826400141629.
Br. Bangalore/Vijayanagar: Ground Floor of TRS Arcade, #3, 1st main road, Income Tax Layout, Opposite to AM Hospital, Vijayanagar, Bangalore, Karnataka- 560 040 Ph No. 080-23159121 :-
16436400081822,16436400075550,16436400105514,16436400112650,16436400081814,16436400096929,16436400105050,16436400111058,16436400081806,16436400096952,16436400111611,16436400105662,16436400115398,16436400096945,16436400117873,16436400117139,16436400111843,16436400110134,16436400103931,16436400080774,16436400116701,16436400111967,16436400119671,16436400094536,16436400104723,16436400111199,16436400112627,16436400119069,16436400119754,16436400081574,16436400115844,16436400109656,16436400086193,16436400081590,16436400091763,16436400110852,16436500007099,16436400111587,16436400111652,16436400097042,16436400121883,16436400108302,16436400100309,16436400118160,16436400102669,16436400107205,16436400110761,16436400108567,16436400090294,16436400110837,16436400113005,16436100362704,16436400112387,16436400110696,16436400098768,16436400116750,16436400120273,16436400116495,16436400120299,16436400101547,16436400107304,16436400120349,16436400108005,16436400107544,16436400107809,16436400118368,16436400118350,16436400094106,16436400083604,16436500006844,16436400108591,16436500006430.
Br. Bangalore / Vidyaranyapura : Ground Floor, No. 1123, Khata No. 1066/2744/1123, 6th Block, HMT Layout, Vidyaranyapura, Bangalore - 560097 Ph. :- 9544597221 :- 23966100000731,23966400007600,23966400007261,23966100000764,23966400005026,23966400004417.
Br. Bangalore/Sadashivanagar: #88, Keerthi, 2nd Main, Palace Guttahalli P O, Bangalore,Karnataka-560 003 Ph No. 080 23565050 :-
21986100043608,21986100043616,21986400067398,21986400060138,21986400066374,21986400062266,21986400058264,21986400066325,21986400066333,21986400066341,21986400050477,21986400046376,21986400063686,21986400063694,21986400066309,21986400061789,21986400066051,21986400061888,21986400061870,21986400044744,21986400050592,21986400058587.

Bangalore 23-05-2025 Vice President & Zonal Head

ಚೆನ್ನೈಗೆ ಕೊನೆಯಲ್ಲಿ ಜಯದ ಸಮಾಧಾನ

ಟೈಟನ್ಸ್‌ಗೆ ಅಗ್ರಸ್ಥಾನ ಕೈತಪ್ಪುವ ಚಿಂತೆ • ಗಿಲ್ ಬಳಗಕ್ಕೆ ನಿರಾಸೆ • ಕಾನ್ವೆ, ಬ್ರೆವಿಸ್ ಮಿಂಚಿನ ಬ್ಯಾಟಿಂಗ್

ಅಹಮದಾಬಾದ್ (ಪಿಟಿಐ): ಐಪಿಎಲ್ ಪಾಯಿಂಟ್ ಪಟ್ಟಿಯ ಅಗ್ರ ಎರಡು ಸ್ಥಾನಗಳಲ್ಲಿ ಉಳಿಯುವ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ತಂಡದ ಆಸೆಗೆ ಚೆನ್ನೈ ಸೂಪರ್ ಕಿಂಗ್ಸ್ ಅಡ್ಡಗಾಲು ಹಾಕಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಚೆನ್ನೈ ತಂಡವು 83 ರನ್‌ಗಳಿಂದ ಗುಜರಾತ್ ತಂಡವನ್ನು ಮಣಿಸಿತು. ಇದು ಉಭಯ ತಂಡಗಳಿಗೂ ಲೀಗ್ ಹಂತದ ಕೊನೆ ಪಂದ್ಯವಾಗಿತ್ತು. ಟೈಟನ್ಸ್ ತಂಡವು ಒಟ್ಟು 14 ಪಂದ್ಯಗಳಿಂದ 18 ಅಂಕ ಗಳಿಸಿದೆ. ಸದ್ಯ ಅಗ್ರಸ್ಥಾನದಲ್ಲಿಯೂ ಇದೆ.

ಆದರೆ ತಲಾ 17 ಅಂಕ ಗಳಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಪಂಜಾಬ್ ಕಿಂಗ್ಸ್ ಹಾಗೂ 16 ಪಾಯಿಂಟ್ಸ್ ಗಳಿಸಿರುವ ಮುಂಬೈ ಇಂಡಿಯನ್ಸ್ ತಂಡಗಳಿಗೆ ತಲಾ ಒಂದು ಪಂದ್ಯ ಬಾಕಿ ಇದೆ. ಆರ್‌ಸಿಬಿಯು ಲಖನೌ ಸೂಪರ್ ಕಿಂಗ್ಸ್ ವಿರುದ್ಧ ಮತ್ತು ಪಂಜಾಬ್ ತಂಡವು ಮುಂಬೈ ವಿರುದ್ಧ ಆಡಲಿವೆ.

ಗುಜರಾತ್ ತಂಡವು ಕೊನೆಯ ಪಂದ್ಯದಲ್ಲಿ ತನ್ನ ಸಾಮರ್ಥ್ಯಕ್ಕೆ ತಕ್ಕ ಆಟವಾಡಲಿಲ್ಲ. 231 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ್ದ ತಂಡವು ಪವರ್‌ಪ್ಲೇನಲ್ಲಿಯೇ ಶುಭಮನ್ ಗಿಲ್, ಜೋಸ್ ಬಟ್ಲರ್ ಮತ್ತು ಶೆರ್ಫೆನ್ ರುದರ್‌ಫೋರ್ಡ್ ವಿಕೆಟ್‌ಗಳನ್ನು ಕಳೆದುಕೊಂಡಿತು. ಆಗ ಸ್ಕೋರ್‌ಬೋರ್ಡ್‌ನಲ್ಲಿ ಕೇವಲ 35 ರನ್‌ಗಳಿದ್ದವು. ಇದರಿಂದ ಚೇತರಿಸಿಕೊಳ್ಳಲು ತಂಡಕ್ಕೆ ಸಾಧ್ಯವಾಗಲಿಲ್ಲ. 18.3 ಓವರ್‌ಗಳಲ್ಲಿ 147 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಗುಜರಾತ್ ತಂಡದ ಆರಂಭಿಕ ಬ್ಯಾಟರ್ ಸಾಯಿ ಸುದರ್ಶನ್ (41, 28ಎ, 4X6) ಗರಿಷ್ಠ ವೈಯಕ್ತಿಕ ಸ್ಕೋರ್ ದಾಖಲಿಸಿದ ಆಟಗಾರ ಆದರು. ಅವರು ತಮ್ಮ ತವರು ತಮಿಳುನಾಡು ತಂಡದ ಸಹಆಟಗಾರ ಶಾರೂಕ್ ಖಾನ್ (19 ರನ್) ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು.

ಆದರೆ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ತಮ್ಮ ಎರಡನೇ ಸ್ಪೆಲ್‌ನಲ್ಲಿ ಕೈಚಳಕ ತೋರಿಸಿದರು. 11ನೇ ಓವರ್‌ನಲ್ಲಿ ನಾಲ್ಕು ಎಸೆತಗಳ ಅಂತರದಲ್ಲಿ ಸುದರ್ಶನ್ ಮತ್ತು ಶಾರೂಕ್ ಅವರ ವಿಕೆಟ್ ಕಬಳಿಸಿದರು. ಇದು ಗುಜರಾತ್ ಇನಿಂಗ್ಸ್ ಕುಸಿಯಲು ಕಾರಣವಾಯಿತು.

ಕಾನ್ವೆ, ಬ್ರೆವಿಸ್ ಅಬ್ಬರ: ಐದು ಬಾರಿಯ ಚಾಂಪಿಯನ್ ಚೆನ್ನೈ ತಂಡವು ಕೊನೆ ಪಂದ್ಯದಲ್ಲಿ ಸಮಾಧಾನಕರ ಗೆಲುವು ಸಾಧಿಸಿತು. ಆದರೂ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿ ಉಳಿಯಿತು. ತಂಡದ ಮಟ್ಟಿಗೆ ಇದು ಅತ್ಯಂತ ಕಳಪೆ ಸಾಧನೆಯಾಗಿದೆ.

ಟಾಸ್ ಗೆದ್ದ ಚೆನ್ನೈ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆಯುಷ್ ಮ್ಹಾತ್ರೆ (34; 17ಎ, 4X3, 6X3) ಮತ್ತು ಡೆವೊನ್ ಕಾನ್ವೆ ಉತ್ತಮ ಆರಂಭ ನೀಡಿದರು. ಕಾನ್ವೆ (52; 35ಎ, 4X6, 6X2) ಮತ್ತು ಡೆವಾಲ್ಡ್ ಬ್ರೆವಿಸ್ (57; 23ಎ, 4X4, 6X5) ಅವರ ಅಬ್ಬರದ ಅರ್ಧಶತಕಗಳಿಂದಾಗಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 230 ರನ್ ಗಳಿಸಿತು.

ಗುಜರಾತ್ ತಂಡದ ವೇಗಿ ಮೊಹಮ್ಮದ್ ಸಿರಾಜ್ ಮತ್ತು ಅರ್ಷದ್ ಖಾನ್ ಅವರು ದುಬಾರಿಯಾದರು. ವಿಕೆಟ್ ಕೂಡ ಲಭಿಸಲಿಲ್ಲ. ಕನ್ನಡಿಗ ಪ್ರಸಿದ್ಧಕೃಷ್ಣ (22ಕ್ಕೆ2) ಯಶಸ್ವಿಯಾದರು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 230 (ಆಯುಷ್ ಮ್ಹಾತ್ರೆ 34, ಡೆವೊನ್ ಕಾನ್ವೆ 52, ಊರ್ವಿಲ್ ಪಟೇಲ್ 37, ಡೆವಾಲ್ಡ್ ಬ್ರೆವಿಸ್ 57, ರವೀಂದ್ರ ಜಡೇಜ ಔಟಾಗದೇ 21, ಪ್ರಸಿದ್ಧಕೃಷ್ಣ 22ಕ್ಕೆ2) ಗುಜರಾತ್ ಟೈಟನ್ಸ್: 18.3 ಓವರ್‌ಗಳಲ್ಲಿ 147 (ಸಾಯಿ ಸುದರ್ಶನ್ 41, ಶಾರೂಕ್ ಖಾನ್ 19, ಅರ್ಷದ್ ಖಾನ್ 20, ರಾಹುಲ್ ತೆವಾಟಿಯಾ 14, ರವೀಂದ್ರ ಜಡೇಜ 17ಕ್ಕೆ2, ಅನ್ಷುಲ್ ಕಾಂಭೋಜ್ 13ಕ್ಕೆ3, ನೂರ್ ಅಹಮದ್ 21ಕ್ಕೆ3). ಆಟಗಾರ: ಡೆವಾಲ್ಡ್ ಬ್ರೆವಿಸ್.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟರ್ ಡೆವಾಲ್ಡ್ ಬ್ರೆವಿಸ್ ಪಿಟಿಐ ಚಿತ್ರ

‘ನಿವೃತ್ತಿ ಯೋಚಿಸಲು 4–5 ತಿಂಗಳುಗಳಿವೆ’

ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ವರ್ಷದ ಅಭಿಯಾನ ಮುಗಿಸಿತು. ಆದರೆ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಅವರ ನಿವೃತ್ತಿಯ ಕುರಿತ ‘ಸಸ್ಪೆನ್ಸ್’ ಮಾತ್ರ ಉಳಿಯಿತು.

ಅವರಿಗೆ ಇದು ಕೊನೆಯ ಐಪಿಎಲ್ ಟೂರ್ನಿ ಎಂದು ಹೇಳಲಾಗಿತ್ತು. ಈ ಕುರಿತು ಪಂದ್ಯದ ನಂತರ ಸುದ್ದಿಗಾರರೊಂದಿಗೆ ಧೋನಿ ಮಾತನಾಡಿದರು.

‘ನಿವೃತ್ತಿ ಕುರಿತು ನಿರ್ಧರಿಸಲು ನನಗಿನ್ನೂ 4–5 ತಿಂಗಳುಗಳ ಸಮಯವಿದೆ. ಅವಸರವೇನೂ ಇಲ್ಲ. ದೈಹಿಕ ಕ್ಷಮತೆಯನ್ನು ಕಾಪಾಡಿಕೊಳ್ಳಬೇಕು. ಉತ್ತಮ ಪ್ರದರ್ಶನ ನೀಡುವಂತಿರಬೇಕು’ ಎಂದು 43 ವರ್ಷದ ಧೋನಿ ಹೇಳಿದರು

ಧೋನಿ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಜಿಟಿ	14	9	5	0	18	0.254
ಪಿಬಿಕೆಎಸ್	13	8	4	1	17	0.327
ಆರ್‌ಸಿಬಿ	13	8	4	1	17	0.255
ಎಂಐ	13	8	5	0	16	1.292
ಡಿಸಿ	14	7	6	1	15	0.011
ಎಸ್‌ಆರ್‌ಎಚ್	14	6	7	1	13	-0.241
ಎಲ್‌ಎಸ್‌ಜಿ	13	6	7	0	12	-0.337
ಕೆಕೆಆರ್	14	5	7	2	12	-0.305
ಆರ್‌ಆರ್	14	4	10	0	8	-0.549
ಸಿಎಸ್‌ಕೆ	14	4	10	0	8	-0.647

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 679 ರನ್

ಪರ್ಪಲ್ ಕ್ಯಾಪ್
ನೂರ್ ಅಹಮ್ಮದ್ (ಸಿಎಸ್‌ಕೆ) 24 ವಿಕೆಟ್

ಟ್ರಾವಿಸ್ ಹೆಡ್ ಅಬ್ಬರ: ಕೋಲ್ಕತ್ತ ತಂಡಕ್ಕೆ ಸೋಲು

ಹೆನ್ರಿಚ್ ಶತಕ: ಸನ್ ಗೆಲುವು

ನವದೆಹಲಿ (ಪಿಟಿಐ): ಹೆನ್ರಿಚ್ ಕ್ಲಾಸೆನ್ (ಅಜೇಯ 105, 39ಎ, 4X7, 6X9) ಅವರ ಮಿಂಚಿನ ಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಭಾನುವಾರ ಐಪಿಎಲ್ ಪಂದ್ಯದಲ್ಲಿ 110 ರನ್‌ಗಳಿಂದ ‘ಹಾಲಿ ಚಾಂಪಿಯನ್’ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಮಣಿಸಿತು.

ಕಳೆದ ಬಾರಿ ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದ ಈ ತಂಡಗಳು ಈ ಬಾರಿ ಲೀಗ್ ಹಂತದಲ್ಲೇ ಅಭಿಯಾನ ಮುಗಿಸಿದವು. ಪ್ಲೇ ಆಫ್ ರೇಸ್‌ನಿಂದ ಎರಡೂ ತಂಡಗಳು ಮೊದಲೇ ಹೊರ ಬಿದ್ದಿರುವುದರಿಂದ ಈ ಪಂದ್ಯಕ್ಕೆ ಹೆಚ್ಚಿನ ಮಹತ್ವ ಇರಲಿಲ್ಲ. ಆದರೆ, ಕೋಲ್ಕತ್ತ ತಂಡವನ್ನು ಸೋಲಿಸಿದ ಸನ್‌ರೈಸರ್ಸ್ ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹೆನ್ರಿಚ್ ಮತ್ತು ಟ್ರಾವಿಸ್ ಹೆಡ್ (76; 40ಎ, 4X6, 6X6) ಅವರ ಅಬ್ಬರದ ಬ್ಯಾಟಿಂಗ್‌ನಿಂದ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 278 ರನ್ ಗಳಿಸಿತು.

ಕಠಿಣ ಗುರಿಯನ್ನು ಬೆನ್ನಟ್ಟಿದ ಕೋಲ್ಕತ್ತ ತಂಡವು 18.4 ಓವರ್‌ಗಳಲ್ಲಿ 168 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಸುನಿಲ್ ನಾರಾಯಣ್ (31), ಮನೀಷ್ ಪಾಂಡೆ (30), ಹರ್ಷಿತ್ ರಾಣಾ (34) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ನಿರಾಸೆ ಮೂಡಿಸಿದರು. ಪಾಂಡೆ ಮತ್ತು ರಾಣಾ ಎಂಟನೇ ವಿಕೆಟ್ ಜೊತೆಯಾಟದಲ್ಲಿ 52 (22ಎ) ರನ್ ಸೇರಿಸಿ ಗಮನ ಸೆಳೆದರೂ ಗೆಲುವಿನ ಗುರಿ ಬಹಳ ದೂರವಿತ್ತು.

ಸನ್‌ರೈಸರ್ಸ್‌ನ ಜಯದೇವ್ ಉನದ್ಕತ್, ಇಶಾನ್ ಮಾಲಿಂಗ ಮತ್ತು ಹರ್ಷ್ ದುಬೆ ತಲಾ ಮೂರು ವಿಕೆಟ್ ಪಡೆದು ಎದುರಾಳಿ ತಂಡವನ್ನು ಯಾವುದೇ ಹಂತದಲ್ಲಿ ಚೇತರಿಸಿಕೊಳ್ಳಲು ಅವಕಾಶ ನೀಡಲಿಲ್ಲ.

ಹೆನ್ರಿಚ್ ಅಬ್ಬರ: ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ನಾಯಕ ಪ್ಯಾಟ್ ಕಮಿನ್ಸ್ ನಿರ್ಧಾರ ಸಮರ್ಥಿಸುವಂತೆ ಹೆಡ್ ಮತ್ತು ಕ್ಲಾಸೆನ್ ಅಬ್ಬರಿಸಿದರು. ಅವರಿಬ್ಬರೂ ಕೋಲ್ಕತ್ತ ನೈಟ್ ರೈಡರ್ಸ್ ಬೌಲಿಂಗ್ ಪಡೆಯನ್ನು ಧೂಳೀಪಟ ಮಾಡಿದರು.

ಹೈದರಾಬಾದ್ ತಂಡವು ಈ ಬಾರಿಯ ಐಪಿಎಲ್‌ನ ಮೊದಲ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ 286 ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು. ಈಗ ಕೊನೆ ಪಂದ್ಯದಲ್ಲಿಯೂ ಅಂತಹದೇ ಆಟ ತೋರಿಸಿತು. ಅಭಿಷೇಕ್ ಶರ್ಮಾ (32; 16ಎ, 4X4, 6X2) ಮತ್ತು ಹೆಡ್ ಅಮೋಘ ಆರಂಭ ನೀಡಿದರು. ಅವರ ಆಟದ ವೇಗಕ್ಕೆ ಕೇವಲ 6.5 ಓವರ್‌ಗಳಲ್ಲಿ 92 ರನ್‌ಗಳು ಹರಿದುಬಂದವು. ಸುನಿಲ್ ಬೌಲಿಂಗ್‌ನಲ್ಲಿ ಅಭಿಷೇಕ್ ಅವರು ರಿಂಕು ಸಿಂಗ್‌ಗೆ ಕ್ಯಾಚಿತ್ತರು.

ಆದರೆ ಕೋಲ್ಕತ್ತಕ್ಕೆ ನಿಜವಾಗಿಯೂ ಸಮಸ್ಯೆ ಶುರುವಾಗಿದ್ದು ಈ ಹಂತದಿಂದ. ಹೆಡ್ ಜೊತೆಗೂಡಿದ ಕ್ಲಾಸೆನ್ ತಮಗೆ ಸಿಕ್ಕ ಅವಕಾಶಗಳಲ್ಲಿ ಚೆಂಡನ್ನು ಬೌಂಡರಿಗೆರೆ ದಾಟಿಸಿದರು. ಐಪಿಎಲ್‌ನಲ್ಲಿ ಅತಿ ವೇಗವಾಗಿ ಶತಕ ದಾಖಲಿಸಿದ ನಾಲ್ಕನೇ ಬ್ಯಾಟರ್ ಎಂಬ ಹೆಗ್ಗಳಿಕೆ ಅವರದ್ದಾಯಿತು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ ಸೇರಿ 83 ರನ್ ಕಲೆಹಾಕಿದರು.

ತಂಡವೊಂದರ ಗರಿಷ್ಠ ರನ್ (ಐಪಿಎಲ್)

ರನ್	ತಂಡ	ಎದುರಾಳಿ	ಸ್ಥಳ	ವರ್ಷ
3ಕ್ಕೆ 287	ಎಸ್‌ಆರ್‌ಎಚ್	ಆರ್‌ಸಿಬಿ	ಬೆಂಗಳೂರು	2024
6ಕ್ಕೆ 286	ಎಸ್‌ಆರ್‌ಎಚ್	ಆರ್‌ಆರ್	ಹೈದರಾಬಾದ್	2025
3ಕ್ಕೆ 278	ಎಸ್‌ಆರ್‌ಎಚ್	ಕೆಕೆಆರ್	ದೆಹಲಿ	2025
3ಕ್ಕೆ277	ಎಸ್‌ಆರ್‌ಎಚ್	ಎಂಐ	ಹೈದರಾಬಾದ್	2024
7ಕ್ಕೆ272	ಕೆಕೆಆರ್	ಡಿಸಿ	ವಿಶಾಖಪಟ್ಟಣ	2024
7ಕ್ಕೆ 266	ಎಸ್‌ಆರ್‌ಎಚ್	ಡಿಸಿ	ದೆಹಲಿ	2024

ಐಪಿಎಲ್‌ನಲ್ಲಿ ವೇಗದ ಶತಕ (ಎಸೆತಗಳಲ್ಲಿ)

ಎಸೆತ	ಆಟಗಾರ	ತಂಡ	ಎದುರಾಳಿ	ವರ್ಷ
30	ಕ್ರಿಸ್‌ಗೇಲ್	ಆರ್‌ಸಿಬಿ	ಪಿಡಬ್ಲ್ಯುಐ	2013
35	ವೈಭವ್ ಸೂರ್ಯವಂಶಿ	ಆರ್‌ಆರ್	ಜಿಟಿ	2025
37	ಯುಸೂಫ್ ಪಠಾಣ್	ಆರ್‌ಆರ್	ಎಂಐ	2010
37	ಹೆನ್ರಿಚ್ ಕ್ಲಾಸೆನ್	ಎಸ್‌ಆರ್‌ಎಚ್	ಕೆಕೆಆರ್	2025
38	ಡೇವಿಡ್ ಮಿಲ್ಲರ್	ಕಿಂಗ್ಸ್ ಇಲೆವೆನ್	ಆರ್‌ಸಿಬಿ	2013

ತಂಡವು 175 ರನ್ ಗಳಿಸಿದಾಗ 12.4 ಓವರ್‌ಗಳಷ್ಟೇ ಆಗಿದ್ದವು. ಹೆಡ್ ವಿಕೆಟ್ ಗಳಿಸಿದ ಸುನಿಲ್ ಜೊತೆಯಾಟಕ್ಕೆ ತಡೆಯೊಡ್ಡಿದರು. ಆದರೆ ಕ್ಲಾಸೆನ್ ಅಬ್ಬರ ಮಾತ್ರ ತಗ್ಗಲಿಲ್ಲ. ಅವರು ಇಶಾನ್ ಕಿಶನ್ (29; 20ಎ) ಸೇರಿ 83 ರನ್‌ಗಳನ್ನು ಸೂರೆ ಮಾಡಿದರು. ಅದರಲ್ಲಿ ಕ್ಲಾಸೆನ್ ಅವರದ್ದೇ ಸಿಂಹಪಾಲು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 278 (ಅಭಿಷೇಕ್ ಶರ್ಮಾ 32, ಟ್ರಾವಿಸ್ ಹೆಡ್ 76, ಹೆನ್ರಿಚ್ ಕ್ಲಾಸೆನ್ ಔಟಾಗದೇ 105, ಇಶಾನ್ ಕಿಶನ್ 29, ಸುನಿಲ್ ನಾರಾಯಣ್ 42ಕ್ಕೆ2) ಕೋಲ್ಕತ್ತ ನೈಟ್ ರೈಡರ್ಸ್: 18.4 ಓವರ್‌ಗಳಲ್ಲಿ 168 (ಸುನಿಲ್ ನಾರಾಯಣ್ 31, ಮನೀಷ್ ಪಾಂಡೆ 30, ಹರ್ಷಿತ್ ರಾಣಾ 34; ಜಯದೇವ್ ಉನದ್ಕತ್ 24ಕ್ಕೆ 3, ಇಶಾನ್ ಮಾಲಿಂಗ 31ಕ್ಕೆ 3, ಹರ್ಷ್ ದುಬೆ 34ಕ್ಕೆ 3). ಪಂದ್ಯದ ಆಟಗಾರ: ಹೆನ್ರಿಚ್ ಕ್ಲಾಸೆನ್.

ಪಿಟಿಐ ಚಿತ್ರ

ಫ್ರೆಂಚ್ ಓಪನ್ ಟೆನಿಸ್: ಮುಸೆಟ್ಟಿ, ಪಾಲ್ ಮುನ್ನಡೆ

ಸಬಲೆಂಕಾ, ಝೆಂಗ್ ಶುಭಾರಂಭ

ಪ್ಯಾರಿಸ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಇಲ್ಲಿ ಭಾನುವಾರ ಆರಂಭಗೊಂಡ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ನಿರಾಯಾಸವಾಗಿ ಎರಡನೇ ಸುತ್ತಿಗೆ ಮುನ್ನಡೆದರು.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ತಮ್ಮ ಎಂಟನೇ ವರ್ಷದ ಅಭಿಯಾನ ಆರಂಭಿಸಿದ ಬೆಲಾರಸ್‌ನ ತಾರೆ ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 6-1, 6-0 ಅಂತರದಿಂದ ರಷ್ಯಾದ ಕಮಿಲ್ಲಾ ರಾಖಿಮೋವಾ ಅವರನ್ನು ಹಿಮ್ಮೆಟ್ಟಿಸಿದರು.

ಸತತ ಮೂರು ಬಾರಿ (2023ರಿಂದ 25) ಇಲ್ಲಿ ಚಾಂಪಿಯನ್ ಆಗಿರುವ ಇಗಾ ಶ್ವಾಂಟೆಕ್ ಪ್ರಸಕ್ತ ಋತುವಿನಲ್ಲಿ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಈ ಮಧ್ಯೆ 27 ವರ್ಷದ ಸಬಲೆಂಕಾ ನಾಲ್ಕನೇ ಗ್ರ್ಯಾನ್‌ಸ್ಲಾಮ್ ಕಿರೀಟದ ಮೇಲೆ ಕಣ್ಣಿಟ್ಟಿದ್ದಾರೆ.

ಪ್ಯಾರಿಸ್ ಒಲಿಂಪಿಕ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ ಅವರೂ ಶುಭಾರಂಭ ಮಾಡಿದರು. ಎಂಟನೇ ಶ್ರೇಯಾಂಕದ ಝೆಂಗ್ 6-4, 6-3ರಿಂದ ಫ್ರೆಂಚ್ ಓಪನ್ ಮಾಜಿ ರನ್ನರ್ ಅಪ್ ಅನಸ್ತೇಸಿಯಾ ಪಾವ್ಲಿಚೆಂಕೋವಾ (ರಷ್ಯಾ) ಅವರನ್ನು ಸೋಲಿಸಿ ಎರಡನೇ ಸುತ್ತು ಪ್ರವೇಶಿಸಿದರು.

13ನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ (ಉಕ್ರೇನ್) 6-1, 6-1ರಿಂದ ಟರ್ಕಿಯ ಝೆಯ್ನೆಪ್ ಸೊನ್ಮೆಜ್ ಅವರನ್ನು ಸೋಲಿಸಿದರು. ಈ ಮಧ್ಯೆ ಶ್ರೇಯಾಂಕರಹಿತ ಆಟಗಾರ್ತಿ ಇವಾ ಲೈಸ್ (ಜರ್ಮನಿ) 6-0, 6-3ರಿಂದ 28ನೇ ಶ್ರೇಯಾಂಕದ ಪೇಟನ್ ಸ್ಟಿಯರ್ನ್ಸ್ (ಅಮೆರಿಕ) ಅವರಿಗೆ ಆಘಾತ ನೀಡಿದರು.

ಮುಸೆಟ್ಟಿ ಮುನ್ನಡೆ: ಪುರುಷರ ಸಿಂಗಲ್ಸ್‌ನಲ್ಲಿ ಎಂಟನೇ ಶ್ರೇಯಾಂಕದ ಲೊರೆಂಝೊ ಮುಸೆಟ್ಟಿ ಶುಭಾರಂಭ ಮಾಡಿದರು. ಇಟಲಿಯ ಆಟಗಾರ ಮೊದಲ ಸುತ್ತಿನಲ್ಲಿ 7–5, 6–2, 6–0ರಿಂದ ಜರ್ಮನಿಯ ಯಾನಿಕ್ ಹಾಫ್‌ಮನ್ ಅವರನ್ನು ಸೋಲಿಸಿದರು.

12ನೇ ಶ್ರೇಯಾಂಕದ ಟಾಮಿ ಪಾಲ್ (ಅಮೆರಿಕ) ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 6-7 (5/7), 6-2, 6-3, 6-1ರಿಂದ ಡೆನ್ಮಾರ್ಕ್‌ನ ಎಲ್ಮರ್ ಮೊಲ್ಲರ್ ವಿರುದ್ಧ ಗೆದ್ದರು.

ಅರಿನಾ ಸಬಲೆಂಕಾ ಆಟದ ವೈಖರಿ ಎಎಫ್‌ಪಿ ಚಿತ್ರ

ಆರ್‌ಸಿಬಿಗೆ ಮರಳಿದ ಜೋಶ್

ಲಖನೌ (ಪಿಟಿಐ): ಆಸ್ಟ್ರೇಲಿಯಾದ ವೇಗಿ ಜೋಶ್ ಹೇಜಲ್‌ವುಡ್ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಮರಳಿದ್ದಾರೆ.

ತಂಡವು ಮಂಗಳವಾರ ಲೀಗ್ ಹಂತದ ಕೊನೆಯ ಪಂದ್ಯವನ್ನು ಆಡಲಿದೆ. ಹೇಜಲ್‌ವುಡ್ ಅವರು ಭಾನುವಾರ ಮರಳಿ ಬಂದಿದ್ದು ತಂಡದ ಬಲ ಹೆಚ್ಚಿದೆ.

ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ ಐಪಿಎಲ್ ಟೂರ್ನಿಯನ್ನು ಒಂದು ವಾರ ಸ್ಥಗಿತ ಮಾಡಲಾಗಿತ್ತು. ಇದೇ ಸಂದರ್ಭದಲ್ಲಿ ಭುಜದ ನೋವಿನಿಂದಲೂ ಬಳಲಿದ್ದ ಹೇಜಲ್‌ವುಡ್ ಅವರು ಸ್ವದೇಶಕ್ಕೆ ತೆರಳಿದ್ದರು. ಅವರು ಮತ್ತೆ ಆರ್‌ಸಿಬಿಗೆ ಮರಳುವುದು ಅನುಮಾನವಿತ್ತು.

ಈ ಬಾರಿಯ ಐಪಿಎಲ್‌ನಲ್ಲಿ ಅವರು 10 ಪಂದ್ಯಗಳಲ್ಲಿ ಆಡಿ 18 ವಿಕೆಟ್ ಗಳಿಸಿದ್ದಾರೆ.

ಅಗ್ರಸ್ಥಾನಕ್ಕೆ ಪಂಜಾಬ್‌-ಮುಂಬೈ ಪೈಪೋಟಿ

ಜೈಪುರ (ಪಿಟಿಐ): ಐದು ಸಲದ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಸೋಮವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಉಭಯ ತಂಡಗಳಿಗೂ ಇದು ಕೊನೆಯ ಲೀಗ್ ಪಂದ್ಯವಾಗಿದೆ. ಸದ್ಯ ಪಂಜಾಬ್ ತಂಡವು ಎರಡನೇ ಮತ್ತು ಮುಂಬೈ ನಾಲ್ಕನೇ ಸ್ಥಾನದಲ್ಲಿವೆ. ಪ್ಲೇಆಫ್ ಸ್ಥಾನ ಖಚಿತ ಪಡಿಸಿಕೊಂಡಿವೆ.

ಆದರೆ 17 ಅಂಕ ಹೊಂದಿರುವ ಪಂಜಾಬ್ ತಂಡವು ಮುಂಬೈ ವಿರುದ್ಧ ಸೋತರೆ ಮೂರು ಅಥವಾ ನಾಲ್ಕನೇ ಸ್ಥಾನಕ್ಕೆ ಇಳಿಯುವ ಸಾಧ್ಯತೆ ಇದೆ. ಆಗ ತಂಡವು ಎಲಿಮಿನೇಟರ್‌ನಲ್ಲಿ ಆಡಬೇಕಾಗುತ್ತದೆ. ಸೋಮವಾರದ ಪಂದ್ಯದಲ್ಲಿ ಜಯಿಸಿದ ತಂಡವು ಅಗ್ರ ಎರಡರಲ್ಲಿ ಸ್ಥಾನ ಪಡೆಯಬಹುದು. 16 ಅಂಕ ಗಳಿಸಿರುವ ಮುಂಬೈ ಇಂಡಿಯನ್ಸ್ ತಂಡವು ಉತ್ತಮ ರನ್‌ರೇಟ್ ಹೊಂದಿದೆ. ಈ ಪಂದ್ಯದಲ್ಲಿ ಜಯಿಸಿದರೆ, ಎರಡನೇ ಸ್ಥಾನಕ್ಕೇರಲಿದೆ.

ಆದರೆ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡವು ಡೆಲ್ಲಿ ಎದುರಿನ ಸೋಲಿನಲ್ಲಿ ಆದ ಲೋಪಗಳನ್ನು ಸುಧಾರಣೆ ಮಾಡಿಕೊಂಡು ಕಣಕ್ಕಿಳಿಯುವುದು ಅನಿವಾರ್ಯ. ಪಂಜಾಬ್ ನೀಡಿದ್ದ ಕಠಿಣ ಮೊತ್ತ ರಕ್ಷಿಸಿಕೊಳ್ಳುವಲ್ಲಿ ಬೌಲರ್‌ಗಳು ಸಫಲರಾಗಲಿಲ್ಲ.

ಕಿಂಗ್ಸ್ ತಂಡದ ಬ್ಯಾಟಿಂಗ್ ಪಡೆ ಉತ್ತಮವಾಗಿದೆ. ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್, ಜೋಷ್ ಇಂಗ್ಲಿಸ್, ಶ್ರೇಯಸ್ ಅಯ್ಯರ್, ಮಾರ್ಕಸ್ ಸ್ಟೊಯಿನಿಸ್ ಮತ್ತು ನೆಹಲ್ ವಧೇರಾ ಅವರು ರನ್‌ಗಳ ಕಾಣಿಕೆಯನ್ನು ನೀಡುತ್ತಿದ್ದಾರೆ. ಆದರೂ ಮುಂಬೈ ತಂಡದ ಬೌಲಿಂಗ್ ಪಡೆಯನ್ನು ಎದುರಿಸಿ ನಿಲ್ಲುವುದು ಸುಲಭವಲ್ಲ. ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಟ್ರೆಂಟ್ ಬೌಲ್ಟ್ ಅವರು ಅಮೋಘ ಫಾರ್ಮ್‌ನಲ್ಲಿದ್ದಾರೆ.

ಪಂದ್ಯ ಆರಂಭ; ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ದೇಗುಲ ಭೇಟಿ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ಬಾಲಿವುಡ್ ನಟಿ ಅನುಷ್ಕಾ ಶರ್ಮಾ ದಂಪತಿ ಭಾನುವಾರ ಅಯೋಧ್ಯೆಯ ರಾಮಮಂದಿರ ಮತ್ತು ಹನುಮಾನ್‌ಗಡಿ ದೇವಸ್ಥಾನಕ್ಕೆ ಭೇಟಿ ನೀಡಿದರು. ಅವರಿಗೆ ಅರ್ಚಕರು ದೇವರ ಚಿತ್ರಪಟ ನೀಡಿ ಗೌರವಿಸಿದರು –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಶ್ರೀಕಾಂತ್ ರನ್ನರ್ ಅಪ್

ಕೌಲಾಲಂಪುರ (ಪಿಟಿಐ): ಕಿದಂಬಿ ಶ್ರೀಕಾಂತ್ ಅವರ ಪ್ರಶಸ್ತಿ ಬರ ಭಾನುವಾರವೂ ನೀಗಲಿಲ್ಲ. ಮಲೇಷ್ಯಾ ಮಾಸ್ಟರ್ಸ್ ಸೂಪರ್ ಬ್ಯಾಡ್ಮಿಂಟನ್‌ನಲ್ಲಿ ಅವರು ರನ್ನರ್ಸ್ ಅಪ್ ಆಗಲಷ್ಟೇ ಸಾಧ್ಯವಾಯಿತು.

ಇಲ್ಲಿ ನಡೆದ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ 32 ವರ್ಷ ಶ್ರೀಕಾಂತ್ 11–21, 9–21ರಿಂದ ಚೀನಾದ ಎರಡನೇ ಶ್ರೇಯಾಂಕದ ಲಿ ಶಿ ಫೆಂಗ್ ವಿರುದ್ಧ ಮಣಿದರು. 36 ನಿಮಿಷಗಳ ಹೋರಾಟದಲ್ಲಿ ಚೀನಾ ಆಟಗಾರ ಮೇಲುಗೈ ಸಾಧಿಸಿದರು.

ಅವರು ಗಾಯದ ಸಮಸ್ಯೆಯಿಂದಾಗಿ ಪ್ರಮುಖ ಟೂರ್ನಿಗಳಿಂದ ಹಿಂದೆ ಸರಿದಿದ್ದರು. ಚೇತರಿಸಿಕೊಂಡ ನಂತರ ಮಲೇಷ್ಯಾ ಮಾಸ್ಟರ್ ಬಿಡಬ್ಲ್ಯುಎಫ್ 500 ಟೂರ್ನಿಯಲ್ಲಿ ಕಣಕ್ಕಿಳಿದಿದ್ದರು.

ಟೂರ್ನಿಯುದ್ದಕ್ಕೂ ಶ್ರೀಕಾಂತ್ ಅಮೋಘ ಆಟವಾಡಿ ಫೈನಲ್ ಪ್ರವೇಶಿಸಿದ್ದರು. ಈ ಪಂದ್ಯದ ಆರಂಭದಲ್ಲಿ ಶ್ರೀಕಾಂತ್ ಕೆಲವು ಲೋಪಗಳನ್ನು ಎಸಗಿದರು. ಅದರ ಲಾಭ ಪಡೆದುಕೊಂಡ ಲಿ ಶಿ 6–3ರ ಮುನ್ನಡೆ ಸಾಧಿಸಿದರು. ಮತ್ತೊಂದು ನೇರ ಸ್ಮ್ಯಾಷ್ ಮೂಲಕ ಲೀ ಮತ್ತೆ 2 ಅಂಕಗಳನ್ನು ಹೆಚ್ಚಿಸಿಕೊಂಡರು. ಇದಕ್ಕೆ ತಕ್ಕ ತಿರುಗೇಟು ನೀಡಿದ ಶ್ರೀಕಾಂತ್ 402 ಕಿ.ಮೀ ವೇಗದ ಹೊಡೆತ ಪ್ರಯೋಗಿಸಿದರು. ಇದಕ್ಕೂ ಅಳುಕದ ಚೀನಾ ಆಟಗಾರ ಗೇಮ್ ಜಯಿಸಿದರು.

ರನ್ನರ್ಸ್ ಅಪ್ ಪ್ರಶಸ್ತಿಯೊಂದಿಗೆ ಕಿದಂಬಿ ಶ್ರೀಕಾಂತ್ ಎಪಿ/ಪಿಟಿಐ ಚಿತ್ರ

ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದವರು (ಎಡದಿಂದ): ಆದಿತ್ಯ ರಂಜನ್ ಸಾಹು, ಅಭಯ್ ಹಿಪ್ಪರಗಿ, ಯುವನೇಶ್, ವಿವಾನ್ ಸಚ್‌ದೇವ್, ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವ, ಶ್ರೇಯಾ ರಾಜೇಶ್, ಅಕ್ಷಯಾ ಸಾಥಿ, ಪ್ರತೀತಿ ಬೊರ್ಡೋಲಿ

ಚೆಸ್: ಆದಿತ್ಯ, ಆರುಷಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಪಡುಬಿದ್ರಿ (ಉಡುಪಿ): ಬೆಂಗಳೂರಿನ ಆದಿತ್ಯ ರಂಜನ್ ಸಾಹು ಮತ್ತು ಮಂಗಳೂರಿನ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವ ಅವರು ಇಲ್ಲಿನ ಕಾಪುವಿನಲ್ಲಿ ನಡೆದ 15 ವರ್ಷ ದೊಳಗಿನವರ ಫಿಡೆ ರೇಟೆಡ್ ರಾಜ್ಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮುಕ್ತ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಅಖಿಲ ಭಾರತ ಚೆಸ್ ಫೆಡರೇಷನ್, ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಮತ್ತು ಉಡುಪಿ ಜಿಲ್ಲಾ ಚೆಸ್ ಸಂಸ್ಥೆಯ ಸಹಯೋಗದಲ್ಲಿ ಶ್ರೀ ನಾರಾಯಣಗುರು ಸ್ಕೂಲ್ ಆಫ್ ಚೆಸ್ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನಲ್ಲಿ ಆದಿತ್ಯ ರಂಜನ್ 7.5 ಪಾಯಿಂಟ್ ಗಳಿಸಿದರೆ ಆರುಷಿ 8.5 ಪಾಯಿಂಟ್ ಕಲೆ ಹಾಕಿದರು. ಇಬ್ಬರೂ ತಲಾ ₹ 6 ಸಾವಿರ ನಗದು ಮತ್ತು ಟ್ರೋಫಿ ತಮ್ಮದಾಗಿಸಿಕೊಂಡರು.

ಮುಕ್ತ ವಿಭಾಗದಲ್ಲಿ ಬೆಂಗಳೂರಿನ ಅಜಯ್ ಹಿಪ್ಪರಗಿ ಮತ್ತು ಯುವನೇಶ್ ಎ ಕೂಡ 7.5 ಪಾಯಿಂಟ್ ಗಳಿಸಿದ್ದರು. ಉತ್ತಮ ಟೈ ಬ್ರೇಕರ್ ಆಧಾರದಲ್ಲಿ ಆದಿತ್ಯ ಅವರನ್ನು ಚಾಂಪಿಯನ್ ಎಂದು ಘೋಷಿಸಲಾಯಿತು. ಅಜಯ್ ಮತ್ತು ಯುವನೇಶ್ ಕ್ರಮವಾಗಿ 2 ಮತ್ತು 3ನೇ ಸ್ಥಾನದೊಂದಿಗೆ ₹ 4 ಸಾವಿರ ಮತ್ತು ₹ 3 ಸಾವಿರ ನಗದು ಪಡೆದುಕೊಂಡರು.

ಬಾಲಕಿಯರ ವಿಭಾಗದಲ್ಲಿ ಆರುಷಿ 8.5 ಅಂಕ ಗಳಿಸಿದ ಏಕೈಕ ಆಟಗಾರ್ತಿ ಎನಿಸಿಕೊಂಡರು. ಉತ್ತರ ಕನ್ನಡದ ಅಕ್ಷಯ ಸಾಥಿ 7.5 ಅಂಕಗಳೊಂದಿಗೆ ರನ್ನರ್ ಅಪ್ ಆದರು. ಅವರಿಗೆ ₹ 4 ಸಾವಿರ ನಗದು ಲಭಿಸಿತು.

ಸಂಕ್ಷಿಪ್ತ ಸುದ್ದಿ

ಎಫ್‌2 ರೇಸ್: ಕುಶ್‌ಗೆ ಪ್ರಶಸ್ತಿ

ಮಾಂಟೆ ಕಾರ್ಲೊ (ಪಿಟಿಐ): ಕರ್ನಾಟಕದ ಕುಶ್ ಮೈನಿ ಅವರು ಶನಿವಾರ ಇಲ್ಲಿ ನಡೆದ ಐಕಾನಿಕ್ ಮೊನಾಕೊ ಗ್ರ್ಯಾನ್‌ಪ್ರಿ ಫಾರ್ಮುಲಾ 2 ಸ್ಪ್ರಿಂಟ್ ರೇಸ್‌ನಲ್ಲಿ ಪ್ರಶಸ್ತಿ ಗೆದ್ದರು. ಈ ಮೂಲಕ ವಿಶ್ವದ ಪ್ರತಿಷ್ಠಿತ ಟ್ರ್ಯಾಕ್‌ನಲ್ಲಿ ಜಯ ಸಾಧಿಸಿದ ಭಾರತದ ಮೊದಲ ರೇಸರ್ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು.

ಮೈನಿ ಋತುವಿನ ಮೊದಲ ಎಫ್‌2 ಗೆಲುವು ಮತ್ತು ಡ್ಯಾಮ್ಸ್ ಲ್ಯೂಕಾಸ್ ಆಯಿಲ್‌ನೊಂದಿಗೆ ತಮ್ಮ ಮೊದಲ ಪೋಡಿಯಂ ಫಿನಿಷ್ ಮಾಡಿದರು.

ಬಿಡಬ್ಲ್ಯೂಟಿ ಆಲ್ಪೈನ್ ಎಫ್ 1 ತಂಡದ ಮೀಸಲು ಚಾಲಕನಾಗಿರುವ ಕುಶ್ ಮೈನಿ, ರೇಸ್‌ದುದ್ದಕ್ಕೂ ತಮ್ಮ ನಿಯಂತ್ರಣ ಮತ್ತು ಕಾರ್ಯತಂತ್ರದಲ್ಲಿ ನಿಖರತೆಯನ್ನು ಪ್ರದರ್ಶಿಸಿದರು. ಈ ಗೆಲುವಿನೊಂದಿಗೆ ಮುಂದಿನ ಫೀಚರ್ ಪಿ-10 ರೇಸ್‌ಗೂ ಅರ್ಹತೆ ಪಡೆದರು.

ದೇಶ ಪ್ರತಿನಿಧಿಸುವ ಅವಕಾಶ ಸಿಕ್ಕರೆ ಸಿದ್ಧ: ಪೂಜಾರ

ನವದೆಹಲಿ (ಪಿಟಿಐ): ‘ಭಾರತ ತಂಡವನ್ನು ಪ್ರತಿನಿಧಿಸುವ ಅವಕಾಶ ಸಿಕ್ಕರೆ ಕಣಕ್ಕಿಳಿಯಲು ಸಿದ್ಧ. ಆದರೆ ನಾನು ವಾಸ್ತವ ಜಗತ್ತಿನಲ್ಲಿ ಜೀವಿಸುವ ವ್ಯಕ್ತಿ. ಈಗ ನಾನು ಮಾಡುತ್ತಿರುವ ಕಾರ್ಯದ ಬಗ್ಗೆ ಸಂತೃಪ್ತಿಯಿದೆ’ ಎಂದು ಕ್ರಿಕೆಟಿಗ ಮತ್ತು ವೀಕ್ಷಕ ವಿವರಣೆಗಾರ ಚೇತೇಶ್ವರ್ ಪೂಜಾರ ಹೇಳಿದರು.

ಟೆಸ್ಟ್ ಪರಿಣತ ಬ್ಯಾಟರ್ ಪೂಜಾರ ಅವರು ಕಳೆದ ಎರಡು ವರ್ಷಗಳಿಂದ ಭಾರತ ತಂಡದಲ್ಲಿ ಆಡಿಲ್ಲ. 2023ರ ಜೂನ್‌ನಲ್ಲಿ ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಆಡಿದ್ದರು. ಅದರ ನಂತರ ತಂಡದಲ್ಲಿ ಅವಕಾಶ ಪಡೆದಿಲ್ಲ. ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ಭಾರತ ತಂಡವು ಟೆಸ್ಟ್ ಸರಣಿ ಆಡಲಿದೆ. ಅದರ ನೇರಪ್ರಸಾರ ಮಾಡಲಿರುವ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಭಾನುವಾರ ಏರ್ಪಡಿಸಿದ್ದ ಮಾಧ್ಯಮ ಸಂವಾದದಲ್ಲಿ ಪೂಜಾರ ಮಾತನಾಡಿದರು.

ಈಜು: ತಾನ್ಯಾಗೆ 4 ಚಿನ್ನ

ಬೆಂಗಳೂರು: ಮೈಸೂರಿನ ತಾನ್ಯಾ ಷಡಕ್ಷರಿ ಅವರು ಈಚೆಗೆ ಬಸವನಗುಡಿ ಈಜುಕೇಂದ್ರದಲ್ಲಿ ನಡೆದ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್ ಮಹಿಳಾ ವಿಭಾಗದಲ್ಲಿ 4 ಚಿನ್ನ ಮತ್ತು 1 ಬೆಳ್ಳಿ ಪದಕ ಜಯಿಸಿದರು.

15 ವರ್ಷದ ತಾನ್ಯಾ ಅವರು 200 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ (2ನಿ,43.13ಸೆ) ನೂತನ ಕೂಟ ದಾಖಲೆಯನ್ನೂ ಮಾಡಿದರು. ಇದಲ್ಲದೇ 400 ಮೀ ಮೆಡ್ಲೆ, 200 ಮೀ ಮೆಡ್ಲೆ 1500 ಮೀ ಫ್ರೀಸ್ಟೈಲ್ ಸ್ಪರ್ಧೆಗಳಲ್ಲಿ ಚಿನ್ನ ಹಾಗೂ 100 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಬೆಳ್ಳಿ ಗಳಿಸಿದರು. ಅರ್ಮೇನಿಯಾ ದೇಶದಲ್ಲಿ ನಡೆಯಲಿರುವ ಚೊಚ್ಚಲ ರಾಷ್ಟ್ರೀಯ ಪ್ರತಿಭಾನ್ವಿತರ ತರಬೇತಿ ಕಾರ್ಯಕ್ರಮಕ್ಕೆ ಆಯ್ಕೆಯಾಗಿರುವ ಭಾರತದ 30 ಈಜುಪಟುಗಳಲ್ಲಿ ತಾನ್ಯಾ ಕೂಡ ಇದ್ದಾರೆ. ಬ್ರಿಟಿಷ್ ಈಜು ಕೋಚ್ ಕ್ರಿಸ್ ಮಾರ್ಟಿನ್ ಮತ್ತು ಭಾರತ ಈಜು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಮೊನಲ್ ಚೋಕ್ಷಿ ಅವರು ಈ ಕಾರ್ಯಕ್ರಮದ ಮುಂದಾಳತ್ವ ವಹಿಸುವರು.

ಮಾಜಿ ಫುಟ್‌ಬಾಲ್ ಆಟಗಾರ ನಿಧನ

ಬೆಂಗಳೂರು: ಕರ್ನಾಟಕದ ಮಾಜಿ ಫುಟ್‌ಬಾಲ್ ಆಟಗಾರ ಬಾಬು ರೆಡ್ಡಿ (75) ಅವರು ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

1967–68ರಲ್ಲಿ ಪಟಿಯಾಲದಲ್ಲಿ ನಡೆದ ಜೂನಿಯರ್ ರಾಷ್ಟ್ರೀಯ ಶಿಬಿರಕ್ಕೆ ಅವರು ಆಯ್ಕೆಯಾಗಿದ್ದರು. ನಂತರದಲ್ಲಿ ಜವಾಹರ್ ಯೂನಿಯನ್ ಎಫ್‌ಸಿಯ ಭಾಗವಾಗಿದ್ದರು. 1970ರಲ್ಲಿ ಎಚ್‌ಎಎಲ್ ತಂಡ ಸೇರಿದ್ದರು. ಆ ದಶಕದಲ್ಲಿ ಹಲವಾರು ದೇಶೀಯ ಟೂರ್ನಿಗಳಲ್ಲಿ ಭಾಗವಹಿಸಿದ್ದರು.